UNIVERSAL LIBRARY
OU_198325
UNIVERSAL LIBRARY

ಭಾಸಕವಿಯ

# ಪ್ರತಿಜ್ಞಾ ಯೌಗಂಧರಾಯಣ

Post Graduate Library
College of Arts & Commerce, O. U.

ಎಲ್. ಗುಂಡಪ್ಪ, ಎಂ.ಎ.

ಎಲ್ಲ ಹಕ್ಕುಗಳನ್ನೂ ಕಾದಿರಿಸಿದೆ.

# ವಿಷಯ ಸೂಚಿಕೆ

| | | |
|---|---|---|
| ಮುನ್ನುಡಿ | .... .. ... .... .... | v |
| ಭಾಸನು ಅರಿತಿದ್ದ 'ಬೃಹತ್ಕಥೆ'ಯ ಪಾಠ ಯಾವುದು? | ... .... | vii |
| ಕಥಾಸಾರಾಂಶ | .... .. ... .... | xvi |
| ಪ್ರತಿಜ್ಞಾ ಯೌಗಂಧರಾಯಣ | .... .. .... .... | ೧ |
| ಟಿಪ್ಪಣಿಗಳು | ... .. ... . .. | ೫೫ |

# ಮುನ್ನುಡಿ

ಏಕಾಂಕ ನಾಟಕಗಳ ಹಾಗೆಯೇ ಇದನ್ನೂ ಮೂಲಕ್ಕೆ ಪ್ರತಿಬಿಂಬವಾಗಿರುವಂತೆ ಕನ್ನಡಿಸಲು ಸಾಧ್ಯವಾದಷ್ಟು ಪ್ರಯತ್ನಮಾಡಿದ್ದೇನೆ. ಈ ಭಾಷಾಂತರ ಕಾರ್ಯದಲ್ಲಿ ಕೀರ್ತಿಶೇಷರಾದ ಶ್ರೀಮಾನ್ ಗಣಪತಿಶಾಸ್ತ್ರಿಗಳ ವ್ಯಾಖ್ಯಾನ ತುಂಬ ಸಹಾಯವಾಯಿತು. ವುಲ್ನರ್ ಮತ್ತು ಸರೂಪರವರ ಇಂಗ್ಲಿಷ್ ಭಾಷಾಂತರವನ್ನೂ ಆಗಾಗ ಉಪಯೋಗಿಸಿಕೊಂಡಿದ್ದೇನೆ. ಅಭಿಪ್ರಾಯ ಭೇದವಿರುವಕಡೆ ಮುಖ್ಯವಾದ ಕೆಲವು ಸಂದರ್ಭಗಳಲ್ಲಿ ಅರ್ಥವಿವರಣೆಗಾಗಿ ಟಿಪ್ಪಣಿಗಳನ್ನು ಕೊಟ್ಟಿದ್ದೇನೆ. ಈ ಭಾಷಾಂತರದ ಸಹಾಯದಿಂದ ಮೂಲಸಂಸ್ಕೃತವನ್ನು ಓದಿ ತಿಳಿದುಕೊಳ್ಳುವುದಕ್ಕೂ ಸ್ವಲ್ಪಮಟ್ಟಿಗೆ ಅನುಕೂಲವಾಗಬಹುದೆಂದು ನಂಬಿದ್ದೇನೆ.

ಭಾಸನ ವಿಷಯದಲ್ಲಿ ಹೆಚ್ಚು ಸಂಗತಿಗಳನ್ನು ತಿಳಿಯಬಯಸುವವರು ಶ್ರೀಮಾನ್ ಎ. ಆರ್. ಕೃಷ್ಣಶಾಸ್ತ್ರೀ, ಎಂ.ಎ. ಅವರ 'ಭಾಸಕವಿ' ಎಂಬ ಪುಸ್ತಕವನ್ನೂ, ಶ್ರೀಮಾನ್ ಸಿ. ಕೆ. ವೆಂಕಟರಾಮಯ್ಯ, ಎಂ.ಎ., ಎಲ್.ಎಲ್.ಬಿ. ಅವರ 'ಭಾಸ ಮಹಾಕವಿ' ಎಂಬ ಪುಸ್ತಕವನ್ನೂ ಓದಬಹುದು. 'ಪ್ರತಿಜ್ಞಾಯೌಗಂಧರಾಯಣ'ದ ನಾಟಕಲಕ್ಷಣ ಮೊದಲಾದ ವಿಶೇಷ ವಿವರಗಳನ್ನು 'ಮಿಥಿಕ್ ಸೊಸೈಟಿ ಪತ್ರಿಕೆ'ಯಲ್ಲಿ (ಸಂಪುಟ ೨೩, ಪುಟಗಳು ೨೩೫–೨೪೭; ೫೨೦–೫೩೩) ಪ್ರಕಟವಾಗಿರುವ ಶ್ರೀಮಾನ್ ಎಚ್. ಎಲ್. ಹರಿಯಪ್ಪ, ಎಂ.ಎ. ಅವರ ವಿಮರ್ಶೆಯಲ್ಲಿ ತಿಳಿದುಕೊಳ್ಳಬಹುದು.

ಬೆಂಗಳೂರು ಇನ್‌ಟರ್‌ಮೀಡಿಯೆಟ್ ಕಾಲೇಜಿನಲ್ಲಿ ಸಂಸ್ಕೃತ ಅಧ್ಯಾಪಕರಾಗಿರುವ ಶ್ರೀಮಾನ್ ಎನ್. ಶಿವರಾಮಶಾಸ್ತ್ರೀ, ಎಂ.ಎ. ಅವರೂ ನನ್ನ ವಿದ್ಯಾಗುರುಗಳಾದ ಶ್ರೀಮಾನ್ ಎ. ಆರ್. ಕೃಷ್ಣಶಾಸ್ತ್ರೀ, ಎಂ.ಎ. ಅವರೂ ಈ ನಾಟಕದ ಹಸ್ತಪ್ರತಿಯನ್ನು ಮೊದಲಿನಿಂದ ಕೊನೆಯ ವರೆಗೂ ಓದಿನೋಡಿ ಅನೇಕ ಉಪಯುಕ್ತ ಸಲಹೆಗಳನ್ನು ಕೊಟ್ಟು ಉಪಕಾರಮಾಡಿದ್ದಾರೆ. ಅವರಿಗೂ

ಈ ನಾಟಕವನ್ನು 'ಪ್ರಬುದ್ಧ ಕರ್ಣಾಟಕ'ದಿಂದ ಪುನರ್ಮುದ್ರಣ ಮಾಡುವುದಕ್ಕೆ ಅನುಮತಿ ಕೊಟ್ಟ ಆ ಪತ್ರಿಕೆಯ ಸಂಪಾದಕರಿಗೂ ಬಹಳ ಋಣಿಯಾಗಿದ್ದೇನೆ.

೫—೯—೧೯೩೭,
ಬೆಂಗಳೂರು.

ಎಲ್. ಗುಂಡಪ್ಪ

# ಭಾಸನು ಅರಿತಿದ್ದ 'ಬೃಹತ್ಕಥೆ'ಯ ಪಾಠ ಯಾವುದು ?

ಭಾಸ ನಾಟಕಗಳಲ್ಲಿ ವತ್ಸರಾಜನ ಕಥೆಗೆ ಸಂಬಂಧಿಸಿರುವುವು ಎರಡು : 'ಪ್ರತಿಜ್ಞಾ ಯೌಗಂಧರಾಯಣ' ಮತ್ತು 'ಸ್ವಪ್ನವಾಸವದತ್ತ'. ಮೊದಲನೆಯದರಲ್ಲಿ ವತ್ಸರಾಜನು ವಾಸವದತ್ತೆಯನ್ನು ಮದುವೆಮಾಡಿಕೊಂಡ ಕಥೆಯೂ ಎರಡನೆಯದರಲ್ಲಿ ಪದ್ಮಾವತೀ ವಿವಾಹದ ಕಥೆಯೂ ಪ್ರತಿಪಾದಿತವಾಗಿವೆ. 'ಪ್ರತಿಜ್ಞಾ ಯೌಗಂಧರಾಯಣ'ದಲ್ಲಿ ವಾಸವದತ್ತಾಹರಣವೇ ವಸ್ತುವಾದರೂ ಸೆರೆಗೊಳಗಾದ ದೊರೆಯನ್ನು ತನ್ನ ಬುದ್ಧಿಸಾಮರ್ಥ್ಯದಿಂದ ಬಿಡಿಸಿಕೊಂಡು ಹೋದ ಮಂತ್ರಿ ಯೌಗಂಧರಾಯಣನ ಸಾಹಸವನ್ನು ಚಿತ್ರಿಸುವುದೇ ಭಾಸನ ಮುಖ್ಯೋದ್ದೇಶ. ಹೀಗೆಯೇ 'ಸ್ವಪ್ನವಾಸವದತ್ತ'ದಲ್ಲಿ ಪದ್ಮಾವತೀ ವಿವಾಹ ನಿರೂಪಿತವಾಗಿದ್ದರೂ ವಾಸವದತ್ತೆಯ ಪ್ರೇಮದ ಆಳವನ್ನು ಚಿತ್ರಿಸುವುದು ಅಲ್ಲಿನ ಮುಖ್ಯಗುರಿ. ಇವೆರಡು ನಾಟಕಗಳೂ ಒಂದು ಕಥೆಯ ಎರಡು ಭಾಗಗಳು. ಒಂದರ ಪರಿಚಯದಿಂದ ಮತ್ತೊಂದರ ಭಾವವನ್ನು ಗ್ರಹಿಸಿ ಆನಂದಿಸುವುದಕ್ಕೆ ಹೆಚ್ಚು ಸಹಾಯವಾಗುತ್ತದೆ.

ಮೂಲ 'ಬೃಹತ್ಕಥೆ'ಯನ್ನು ಕ್ರಿ. ಶ. ಒಂದನೆಯ ಶತಮಾನದಲ್ಲಿ ಶಾಲಿವಾಹನನ ಆಸ್ಥಾನದಲ್ಲಿದ್ದ ಗುಣಾಢ್ಯನೆಂಬ ಕವಿ ಪೈಶಾಚೀ ಭಾಷೆಯಲ್ಲಿ ರಚಿಸಿದನೆಂದು ಪ್ರತೀತಿ. ಮಹಾಭಾರತ ರಾಮಾಯಣಗಳು ಹೇಗೋ ಹಾಗೆ ಇದು ಕೂಡ ಅನೇಕ ಕವಿಗಳಿಗೆ ವಸ್ತುವನ್ನೊದಗಿಸಿಕೊಟ್ಟಿರುವ ಆಕರಗ್ರಂಥ. ಆದರೆ ಈಗ ಇದು ನಮಗೆ ಸಿಕ್ಕಿಲ್ಲ. ಈ ಕಥೆ ನಮಗೆ ಗೊತ್ತಿರುವುದು ಅದರ ಸಂಸ್ಕೃತ ರೂಪದಲ್ಲಿ ಮಾತ್ರ. ಕ್ರಿ. ಶ. ಹನ್ನೊಂದನೆಯ ಶತಮಾನದಲ್ಲಿ ಬಾಳಿದ ಕಾಶ್ಮೀರ ದೇಶಸ್ಥನಾದ ಕ್ಷೇಮೇಂದ್ರನು 'ಬೃಹತ್ಕಥಾ ಮಂಜರಿ'ಯನ್ನೂ ಸೋಮದೇವ ಭಟ್ಟನೆಂಬಾತನು 'ಕಥಾ ಸರಿತ್ಸಾಗರ'ವನ್ನೂ ಬರೆದಿದ್ದಾರೆ. ಇವೇ ಬೃಹತ್ಕಥೆಯ ಈಗಿನ ಪ್ರತಿನಿಧಿಗಳು. ಇವೆರಡರ ಕಥೆಯೂ ಒಟ್ಟಿನಲ್ಲಿ ಒಂದೇ ; ಇವುಗಳಲ್ಲಿ ಗಣನೆಗೆ ಬರುವಂಥ ವ್ಯತ್ಯಾಸಗಳೇನೂ ಇಲ್ಲ. ಈಚೆಗೆ ನೇಪಾಳದಲ್ಲಿ ದೊರಕಿದ 'ಬೃಹತ್ಕಥಾ ಶ್ಲೋಕಸಂಗ್ರಹ' ಎಂಬ ಮತ್ತೊಂದು ಗ್ರಂಥವಿದೆ. ಇದಕ್ಕೂ

ಮೇಲಿನ ಗ್ರಂಥಗಳಿಗೂ ಹಲವು ಕಡೆ ಭೇದವಿದೆ. ಆದರೆ ಭಾಸ ನಾಟಕಗಳಲ್ಲಿ ಬರುವ ಉದಯನ ಕಥೆಯ ವಿವರಗಳೊಂದೂ ಇದರಲ್ಲಿ ದೊರೆಯುವುದಿಲ್ಲ. ತಮಿಳಿನಲ್ಲಿ ' ಪೆರುಂಗತ್ತೈ ' ಎಂಬ ಒಂದು ಕಾವ್ಯವಿದೆ. ಇದು ' ಬೃಹತ್ಕಥೆ 'ಯ ತಮಿಳು ರೂಪ. ಈ ಗ್ರಂಥದಲ್ಲಿ ಮೊದಲಿನಿಂದ ೩೧ ಅಧ್ಯಾಯಗಳು ಪೂರ್ತಿಯಾಗಿಯೂ ೩೨ನೆಯ ಅಧ್ಯಾಯದಲ್ಲಿ ಸ್ವಲ್ಪದೂರದ ವರೆಗೂ ಮತ್ತು ಗ್ರಂಥದ ಕಡೆಯ ಭಾಗವೂ ಸಿಕ್ಕಿಲ್ಲ. ಇದರ ಕಥೆಗೂ ಸಂಸ್ಕೃತದ ಕಥೆಗೂ ಎಷ್ಟೋ ಕಡೆ ವ್ಯತ್ಯಾಸವಿದೆ. ಭಾಸನ ಕಥೆ ಕೆಲವು ವಿಷಯಗಳಲ್ಲಿ ಸಂಸ್ಕೃತವನ್ನೂ ಮತ್ತೆ ಕೆಲವು ವಿಷಯಗಳಲ್ಲಿ ತಮಿಳು ಕಥೆಯನ್ನೂ ಅನುಸರಿಸಿರುವಂತೆ ಕಾಣುತ್ತದೆ.

' ಕಥಾ ಸರಿತ್ಸಾಗರ 'ದ ಪ್ರಕಾರ ವತ್ಸರಾಜನಿಗೆ ಮಗಳನ್ನು ಕೊಡಬೇಕೆಂದು ಮಹಾಸೇನನ ಆಸೆ; ಅವಳನ್ನು ತಂದುಕೊಳ್ಳಬೇಕೆಂದು ವತ್ಸರಾಜನಿಗೆ ಇಷ್ಟ. ಆದರೆ ಪರಸ್ಪರ ವೈರವಿದ್ದದ್ದರಿಂದ ಆ ವಿಷಯವನ್ನು ಪ್ರಸ್ತಾಪಿಸಲು ಒಬ್ಬರಿಗೂ ಮನಸ್ಸಿಲ್ಲ; ಇಬ್ಬರಿಗೂ ಬಿಗುಮಾನ. ಈ ಸ್ಥಿತಿಯಲ್ಲಿ ಉಜ್ಜಯಿನಿಗೆ ಬಂದು ವಾಸವದತ್ತೆಗೆ ವೀಣೆ ಹೇಳಿಕೊಡಬೇಕೆಂದು ಮಹಾಸೇನನು ಹೇಳಿಕಳುಹಿಸಲು ತನ್ನಲ್ಲೇ ವೀಣಾಭ್ಯಾಸಮಾಡಬೇಕೆಂಬ ಇಷ್ಟವಿದ್ದರೆ ಅವಳು ಕೌಶಾಂಬಿಗೇ ಬರಲಿ ಎಂದು ಉದಯನನು ಉತ್ತರ ಕಳುಹಿಸಿದನು. ಅದನ್ನು ಕೇಳಿ ಕೃತಕ ಗಜದ ಉಪಾಯದಿಂದ ಮಹಾಸೇನನು ವತ್ಸರಾಜನನ್ನು ಸೆರೆಹಿಡಿದು ತಂದು ವಾಸವದತ್ತೆಗೆ ವೀಣೆಕಲಿಸುವಂತೆ ನೇಮಿಸಿದನು. ಬಳಿಕ ಯೌಗಂಧರಾಯಣನು ವಸಂತಕನೊಡನೆ ಉಜ್ಜಯಿನಿಗೆ ಬಂದು ಯೋಗೇಶ್ವರನೆಂಬ ಬ್ರಹ್ಮರಾಕ್ಷಸನ ಸ್ನೇಹವನ್ನು ಸಂಪಾದಿಸಿ ಅವನ ಸಹಾಯದಿಂದ ರೂಪ ಬದಲಾಯಿಸುವ ವಿದ್ಯವನ್ನು ಕಲಿತು ಅರಮನೆಗೆ ಹೋಗಿ ಉದಯನನಿಗೆ ಸಿಗಳಭಂಜನ, ವಶೀಕರಣ ಮೊದಲಾದ ವಿದ್ಯೆಗಳನ್ನು ತಿಳಿಸಿದನು. ವಸಂತಕನೂ ಹಾಸ್ಯಕರವಾದ ವೇಷದಿಂದ ಹೋಗಿ ಚಮತ್ಕಾರವಾಗಿ ಕಥೆ ಹೇಳುತ್ತಾ ವಾಸವದತ್ತೆಯನ್ನು ಮೆಚ್ಚಿಸಿ ಉದಯನನ ಜೊತೆಯಲ್ಲಿ ನಿಂತನು. ಕಾಲಕ್ರಮದಲ್ಲಿ ವಾಸವದತ್ತೆಗೆ ಉದಯನನಲ್ಲಿ ಅನುರಾಗ ಹುಟ್ಟಿ ತಂದೆಯ ಮೇಲಿನ ಅಭಿಮಾನ ಕಡಮೆಯಾಯಿತು. ಆ ಮೇಲೆ ಒಂದು ದಿನ ಯೌಗಂಧರಾಯಣನ ಸಲಹೆಯ ಪ್ರಕಾರ ವಾಸವದತ್ತೆಯ ಭದ್ರವತಿಯೆಂಬ ಆನೆಯ ಮಾವಟಿಗನನ್ನು ಅಪಾರ ಹಣ ಕೊಟ್ಟು

ವಶಪಡಿಸಿಕೊಂಡು, ಕಾವಲುಗಾರರಿಗೆಲ್ಲಾ ಹೆಂಡ ಕುಡಿಸಿ, ಎಚ್ಚರ ತಪ್ಪಿಸಿ, ಕಾಂಚನಮಾಲೆಯೆಂಬ ಸಖಿಯೊಡನೆ ವಾಸವದತ್ತೆಯನ್ನೂ ವಸಂತಕನನ್ನೂ ಸಂಗಡ ಕರೆದುಕೊಂಡು ಭದ್ರವತಿಯ ಮೇಲೆ ಕೂತು, ತನ್ನನ್ನೆದುರಿಸಿದ ಕೋಟೆಯ ಕಾವಲುಗಾರರಿಬ್ಬರನ್ನು ಕೊಂದು, ಉಜ್ಜಯಿನಿಯಿಂದ ಹೊರಬಿದ್ದು ಉದಯನನು ವತ್ಸರಾಜ್ಯಕ್ಕೆ ಓಡಿಹೋದನು. ಇದನ್ನರಿತು ಮಹಾಸೇನನ ಮಗ ಪಾಲಕನು ಕೋಪದಿಂದ ನಲಾಗಿರಿಯ ಮೇಲೇರಿ ಉದಯನನನ್ನು ಬೆನ್ನಟ್ಟಿ ಹೋದನು. ಹಿಂದಿನಿಂದ ಗೋಪಾಲಕನು ಬಂದು ಯುದ್ಧಮಾಡದಂತೆ ತಡೆದು ಪಾಲಕನನ್ನು ಉಜ್ಜಯಿನಿಗೆ ಮರಳಿಸಿದನು. ಬಳಿಕ ಪ್ರದ್ಯೋತ ಮಹಾರಾಜನು ಗೋಪಾಲಕನನ್ನು ಕೌಶಾಂಬಿಗೆ ಕಳುಹಿಸಿ ಅಲ್ಲಿ ಉದಯನ ವಾಸವದತ್ತೆಯರಿಗೆ ಸಂಭ್ರಮದಿಂದ ಮದುವೆಮಾಡಿಸಿದನು.

'ಪೆರುಂಗತೆ'ಯಲ್ಲಿ ಪರಸ್ಪರ ಸಂಬಂಧ ಬೆಳಸುವ ವಿಷಯವೇ ಇಲ್ಲ. ವತ್ಸ ರಾಜನಿಗೆ ವಾಸವದತ್ತೆಯ ಸಮಾಚಾರವೇ ತಿಳಿಯದು. ಪ್ರದ್ಯೋತನ ಚಕ್ರವರ್ತಿಗೆ ಕೊಡಬೇಕಾದ ಕಪ್ಪವನ್ನು ಕೊಡದೆ ನಿಲ್ಲಿಸಿದ್ದರಿಂದ ಅವನು ಉದಯನನನ್ನು ಸೆರೆಹಿಡಿದು ತರುವಂತೆ ಆಜ್ಞೆಮಾಡಿದನು. ಮಂತ್ರಿ ಶಾಲಂಕಾಯನು ಕೃತಕ ಆನೆಯನ್ನು ನಿರ್ಮಿಸಿ ಉದಯನನನ್ನು ಹಿಡಿದು ತಂದು ಸೆರೆಹಾಕಿ ಬಲವಾದ ಕಾವಲಿಟ್ಟನು. ಈ ಸುದ್ದಿಯನ್ನು ಕೇಳಿದ ಯೂಗಿಯು (ಯೌಗಂಧರಾಯಣನು) ರಾಜನ ಸೆರೆಬಿಡಿಸುವುದಾಗಿಯೂ ವಾಸವದತ್ತೆಯನ್ನು ಹರಣಮಾಡುವುದಾಗಿಯೂ ಶಪಥಮಾಡಿ ತನ್ನ ನಂಬಿಕೆಯ ಭಟರೊಡನೆ ಉಜ್ಜಯಿನಿಗೆ ಬಂದು ವೇಷಾಂತರದಿಂದಿರುತ್ತಾ ದೊರೆಯ ಬಿಡುಗಡೆಗೆ ಉಪಾಯ ಹುಡುಕುತ್ತಿದ್ದನು. ಆ ಸಮಯದಲ್ಲಿ ಇತ್ತಕಡೆ ಪಾಂಚಾಲ ರಾಜನಾದ ಆರುಣಿಯೆಂಬವನು ದಂಡೆತ್ತಿ ಬಂದು ವತ್ಸರಾಜ್ಯವನ್ನು ಜಯಿಸಿ ಆಕ್ರಮಿಸಿಕೊಂಡುಬಿಟ್ಟನು. ಕೆಲವು ಕಾಲ ಕಳೆದ ಮೇಲೆ ಯೂಗಿ ಮಂತ್ರೌಷಧಿಗಳನ್ನು ಪ್ರಯೋಗಿಸಿ ನಲಗಿರಿಗೆ ಮದವೇರುವಂತೆ ಮಾಡಲು ಆ ಆನೆ ಪಟ್ಟಣದಲ್ಲೆಲ್ಲಾ ಓಡಾಡುತ್ತಾ ಮನೆಗಳನ್ನುರುಳಿಸಿ ಜನರನ್ನು ಕೊಲ್ಲುತ್ತಾ ಬಹಳ ಅನಾಹುತಮಾಡಿತು. ಇದರ ಕಾಟವನ್ನು ತಪ್ಪಿಸುವುದಕ್ಕಾಗಿ ಉದಯನನನ್ನು ಸೆರೆಯಿಂದ ಬಿಡಿಸಿದರು. ಅವನು ಘೋಷವತಿಯ ಇನಿಯ ನಾದದಿಂದ ನಲಗಿರಿಯ ಮದವನ್ನು ತಗ್ಗಿಸಿ ಶಾಂತಗೊಳಿಸಿದನು. ಅರಸನು

*

ಕೃತಜ್ಞತೆಯಿಂದ ಉದಯನನನ್ನು ಬಹುವಾಗಿ ಸತ್ಕರಿಸಿ ಬೇರೊಂದು ಅರಮನೆಯಲ್ಲಿ ಅವನಿಗೆ ಬಿಡಾರಮಾಡಿಸಿ, ವಾಸವದತ್ತೆಗೆ ವೀಣೆಯನ್ನೂ ಗೋಪಾಲ ಮೊದಲಾದ ಗಂಡುಮಕ್ಕಳಿಗೆ ಶಸ್ತ್ರಾಸ್ತ್ರ ನೀತಿವಿದ್ಯೆಗಳನ್ನೂ ಕಲಿಸಬೇಕೆಂದು ಕೇಳಿಕೊಂಡನು. ಅರಮನೆಯವರು ತನ್ನನ್ನು ಎದುರುಗೊಳ್ಳ ಬಂದಾಗ ವಾಸವದತ್ತೆಯನ್ನು ಕಂಡು ಉದಯನನು ಅವಳಲ್ಲಿ ಮೋಹಗೊಂಡಿದ್ದುದರಿಂದ, ಉಪಾಧ್ಯಾಯ ವೃತ್ತಿಯಲ್ಲಿ ನಿಲ್ಲುವುದು ತನ್ನ ಗೌರವಕ್ಕೆ ಕುಂದೆಂದು ಭಾವಿಸಿದರೂ ವಾಸವದತ್ತೆಯನ್ನು ನೋಡುತ್ತಲಾದರೂ ಇರಬಹುದೆಂಬ ಎಣಿಕೆಯಿಂದ ಅದಕ್ಕೆ ಒಪ್ಪಿಕೊಂಡನು. ಈ ಸಮಯದಲ್ಲಿ ವಿದ್ಯಾಭ್ಯಾಸದ ನೆವದಿಂದ ವಸಂತಕನು ಇವನ ಬಳಿ ಬಂದು ಸೇರಿಕೊಂಡನು. ಕಾಲಕ್ರಮದಲ್ಲಿ ವಾಸವದತ್ತೆಗೂ ಉದಯನನಿಗೂ ಪ್ರೇಮ ದೃಢವಾಗಿ ಬೆಳೆಯಿತು. ಹಿಂದೆ ಉದಯನನಿಂದ ಉಪಕಾರ ಹೊಂದಿದ್ದ 'ಶಾಂಕಿಯತ್ತಾಯಿ' ('ಕಥಾ ಸರಿತ್ಸಾಗರ'ದ ಸಾಂಕೃತ್ಯಾಯನಿ) ಎಂಬ ವಾಸವದತ್ತೆಯ ದಾದಿಯೂ ಕಾಂಚನ ಮಾಲೆಯೆಂಬ ಸಖಿಯೂ ಇವರಿಗೆ ಅನುಕೂಲರಾಗಿ ನಿಂತರು. ಅರಸುಮಕ್ಕಳ ವಿದ್ಯಾಭ್ಯಾಸ ಮುಗಿದ ಬಳಿಕ ಪ್ರದ್ಯೋತನನು ಉದಯನನನ್ನು ಸಭೆಯಲ್ಲಿ ಸತ್ಕರಿಸಿ ಬಹುಪರಿಯಲ್ಲಿ ಕೊಂಡಾಡಿ ಅವನು ಕಪ್ಪ ಕೊಡಬೇಕಾದದ್ದಿಲ್ಲವೆಂದು ಮನ್ನಿಸಿ ವತ್ಸರಾಜ್ಯವನ್ನು ಹಿಂದಕ್ಕೊಪ್ಪಿಸಬೇಕೆಂದು ಆರುಣಿಗೆ ಆಜ್ಞೆ ಕಳುಹಿಸಿ ಮರುದಿನ ದೊಡ್ಡ ದಂಡಿನೊಡನೆ ಉದಯನನನ್ನು ಕೌಶಾಂಬಿಗೆ ಪ್ರಯಾಣಮಾಡಿಸಬೇಕೆಂದು ನಿಶ್ಚಯಿಸಿದನು. ಈ ಸುದ್ದಿಯನ್ನು ಗೂಢಚಾರರ ಮೂಲಕ ತಿಳಿದ ಯೌಗಿ ತನ್ನ ಎರಡನೆಯ ಪ್ರತಿಜ್ಞೆಗೆ ಭಂಗಬರುವುದೆಂದು ನೆನೆದು ದೇವತೆ ಮೈದುಂಬಿದಂತೆ ನಟಿಸುತ್ತಾ ಉಜ್ಜಯಿನಿಯಲ್ಲಿ ವಾಡಿಕೆಯಾಗಿ ನಡೆಯುತ್ತಿದ್ದ 'ನೀರಹಬ್ಬ'ವನ್ನು ('ಕಥಾ ಸರಿತ್ಸಾಗರ'ದ ಜಲದಾನೋತ್ಸವ ಅಥವಾ ಉದಕದಾನಕ) ಮರುದಿನವೇ ನಡಸದಿದ್ದರೆ ಊರೆಲ್ಲಾ ಧ್ವಂಸವಾಗುವುದೆಂದು ನುಡಿಯುತ್ತ ಬೀದಿಯಲ್ಲೆಲ್ಲಾ ಓಡಾಡತೊಡಗಿದನು. ಇದರಿಂದ ಕೌಶಾಂಬಿಯ ಪ್ರಯಾಣ ನಿಂತುಹೋಯಿತು. ಅರಮನೆಯ ರಾಣಿವಾಸದವರು ಮೊದಲುಗೊಂಡು ಊರವರೆಲ್ಲರೂ ನದಿಯ ಬಳಿ ಬಂದು ವಿನೋದವಾಗಿ ಕಾಲಕಳೆಯತೊಡಗಿದರು. ಆ ಸಮಯವನ್ನು ಕಾಯುತ್ತಿದ್ದ ಯೌಗಿ ಇತ್ತ ಉಜ್ಜಯಿನಿಗೆ ಬೆಂಕಿ ಹಾಕಿ ಉರಿಸತೊಡಗಿದನು. ನದಿಯ

ದಡದಲ್ಲಿ ಜನರು ದಿಗಿಲುಬಿದ್ದು ಸಿಕ್ಕಿದಂತೆ ಓಡಾಡಲು ಮೊದಲು ಮಾಡಿದರು. ಆ ಗಲಭೆಯಲ್ಲಿ ಉದಯನನು ಭದ್ರಾವತಿಯ ಮೇಲೆ ವಾಸವದತ್ತೆಯನ್ನೂ ಕಾಂಚನ ಮಾಲೆಯನ್ನೂ ಕೂರಿಸಿಕೊಂಡು ತನ್ನ ರಾಜ್ಯಕ್ಕೆ ಓಡಿಹೋದನು. ಅವನನ್ನು ಬೆಂಬತ್ತಿ ಹಿಡಿಯಹೋದ ಪ್ರದ್ಯೋತನನ ದಂಡಾಳುಗಳನ್ನೆಲ್ಲ ಯೂಗಿಯ ಅಪ್ಪಣೆಯ ಪ್ರಕಾರ ಅಲ್ಲಲ್ಲೇ ಅಡಗಿಕೊಂಡಿದ್ದ ವತ್ಸರಾಜನ ಸೈನಿಕರು ಅಡ್ಡಗಟ್ಟಿ ಹೋರಾಡಿ ಹಿಂದಕ್ಕಟ್ಟಿದರು. ಉದಯನನು ನಿರಾತಂಕವಾಗಿ ತನ್ನ ರಾಜ್ಯಕ್ಕೆ ಹೋಗಿ ವಾಸವದತ್ತೆಯನ್ನು ಮದುವೆಮಾಡಿಕೊಂಡು ಸುಖವಾಗಿದ್ದನು. ದೊರೆ ಸುರಕ್ಷಿತವಾಗಿ ಹೊರಟುಹೋದ ಬಳಿಕ ಯೂಗಿ ತನ್ನವರೆಲ್ಲರನ್ನೂ ಒಬ್ಬೊಬ್ಬರನ್ನಾಗಿ ಸ್ವರಾಜ್ಯಕ್ಕೆ ಕಳುಹಿಸಿಕೊಟ್ಟು ಕೊನೆಗೆ ಶಾಂಕಿಯತ್ತಾಯನ್ನು ಕರೆದು ಕೊಂಡು ತಾನೂ ಪ್ರಯಾಣಮಾಡಿದನು.

ಈ ಎರಡು ಕಥೆಗಳನ್ನೂ ಭಾಸನ ಕಥೆಯೊಡನೆ ಹೋಲಿಸಿ ನೋಡಿದರೆ 'ಪೆರುಂಗತೆ'ಗೂ ಅದಕ್ಕೂ ಹೆಚ್ಚು ಸಾಮ್ಯವಿರುವುದು ಸ್ಪಷ್ಟವಾಗಿ ಗೊತ್ತಾಗುತ್ತದೆ. ಉದಯನನನ್ನು ಅಳಿಯನನ್ನಾಗಿ ಮಾಡಿಕೊಳ್ಳುವ ಆಸೆಯಿಂದ ಮಹಾಸೇನನು ಅವನನ್ನು ಹಿಡಿತರಿಸಿದನೆಂಬ ಒಂದು ಸಂಗತಿ ಹೊರತು ಉಳಿದ ವಿಷಯಗಳಲ್ಲೆಲ್ಲಾ ಭಾಸನ ಕಥಾಸರಣಿ 'ಪೆರುಂಗತೆ'ಯನ್ನೇ ಅನುಸರಿಸಿದೆ. ಕೃತಕ ಆನೆಯ ಉಪಾಯ ಹೂಡಿದವನು 'ಕಥಾ ಸರಿತ್ಸಾಗರ'ದ ಪ್ರಕಾರ ಬುದ್ಧದತ್ತನೆಂಬ ಮಂತ್ರಿ; ಭಾಸನ ಪ್ರಕಾರ ಭರತರೋಹಕ; 'ಪೆರುಂಗತೆ'ಯಲ್ಲಿ ಶಾಲಂಕಾಯ(ನ). ಮಹಾಸೇನನಿಗೆ ಭರತರೋಹಕನೆಂಬ ಮಂತ್ರಿಯಿದ್ದಂತೆ 'ಕಥಾ ಸರಿತ್ಸಾಗರ'ದಲ್ಲಿ ಬೇರೊಂದು ಕಡೆ ಹೇಳಿದೆ. ಆದರೆ ಶಾಲಂಕಾಯನನ ಹೆಸರು ಎಲ್ಲಿಯೂ ಬಂದಿಲ್ಲ. 'ಪ್ರತಿಜ್ಞಾ ಯೌಗಂಧರಾಯಣ,' 'ಪೆರುಂಗತೈ'— ಈ ಎರಡರಲ್ಲೂ ಉದಯನನನ್ನು ಸೆರೆಹಿಡಿದು ತರುವವನು ಶಾಲಂಕಾಯನ. ಯೌಗಂಧರಾಯಣನು ಉಜ್ಜಯಿನಿಗೆ ಏಕಾಕಿಯಾಗಿ ಬರದೆ ಪರಿವಾರದೊಡನೆ ಬರುವುದು, ನಲಗಿರಿಗೆ ಮದವೇರಿಸಿ ಆ ಮೂಲಕ ಉದಯನನನ್ನು ಸೆರೆಯಿಂದ ಬಿಡಿಸುವುದು, ಉದಯನನು ಮೊದಲು ವಾಸವದತ್ತೆಯ ಸಂಗತಿಯನ್ನೇ ಅರಿಯದಿದ್ದು ಅಕಸ್ಮಾತ್ತಾಗಿ ಅವಳನ್ನು ಕಂಡು ಮೋಹಿಸುವುದು, ಆ ಮೇಲೆ ಮಹಾಸೇನನು ಅವನನ್ನು ಮಗಳಿಗೆ ವಿದ್ಯಾಗುರುವಾಗಿ ನೇಮಿಸುವುದು, ಉದಯನ

ವಾಸವದತ್ತೆಯರು ಓಡಿಹೋದ ಮೇಲೆ ಅವರನ್ನು ಬೆಂಬತ್ತಿದ ಸೇನೆಯೊಡನೆ ಯೌಗಂಧರಾಯಣನ ಕಡೆಯವರು ಯುದ್ಧ ಮಾಡುವುದು, ಎಲ್ಲಕ್ಕಿಂತ ಮುಖ್ಯವಾಗಿ ದೊರೆಯನ್ನು ಬಿಡಿಸಿ ವಾಸವದತ್ತೆಯನ್ನು ಹರಣಮಾಡಿಕೊಂಡು ಹೋಗುವುದಾಗಿ ಯೌಗಂಧರಾಯಣನು ಪ್ರತಿಜ್ಞೆಮಾಡುವುದು—ಇವಿಷ್ಟೂ ಸಂಸ್ಕೃತ ಗ್ರಂಥಗಳಲ್ಲಿ ದೊರೆಯದೆ 'ಪೆರುಂಗತೆ'ಯಲ್ಲಿ ಮಾತ್ರ ಸಿಕ್ಕುವ ವಿವರಗಳು.

ಇದರ ಜೊತೆಗೆ ಆರುಣಿಯ ಸಂಗತಿ ಬೇರೆ. ವಾಸವದತ್ತೆಯ ಮದುವೆಯಾದ ಮೇಲೆ ಉದಯನನು ಸುಖಾಸಕ್ತನಾಗಿ ರಾಜಕಾರ್ಯದಲ್ಲಿ ಉದಾಸೀನ ಮಾಡಿದನೆಂದೂ, ಅವನು ಚಕ್ರವರ್ತಿಯಾಗಿ ಭೂಮಂಡಲವನ್ನೆಲ್ಲಾ ಆಳುವುದನ್ನು ಬಿಟ್ಟು ಸಣ್ಣದೊಂದು ವತ್ಸರಾಜ್ಯದಲ್ಲೇ ತೃಪ್ತಿಪಟ್ಟುಕೊಂಡು ಕುಳಿತದ್ದನ್ನು ಕಂಡು ಮನಸ್ಸೊಪ್ಪದೆ ಅವನ ಅಭ್ಯುದಯವನ್ನು ಬಯಸಿ ಅವನನ್ನು ಕಾರ್ಯತತ್ಪರನಾಗಿ ಮಾಡುವುದಕ್ಕಾಗಿಯೂ, ಅವನ ದಿಗ್ವಿಜಯಕ್ಕೆ ಪ್ರಬಲನಾದ ಮಗಧರಾಜನ ಬೆಂಬಲ ಪಡೆಯುವುದಕ್ಕಾಗಿಯೂ ಯೌಗಂಧರಾಯಣ ಮೊದಲಾದ ಮಂತ್ರಿಗಳು ಲಾವಾಣಕದಾಹದ ತಂತ್ರ ಹೂಡಿದರೆಂದೂ 'ಕಥಾ ಸರಿತ್ಸಾಗರ'ದ ಕಥೆ. 'ಪೆರುಂಗತೆ'ಯ ಪ್ರಕಾರ ಆರುಣಿ ಆಕ್ರಮಿಸಿಕೊಂಡ ಕೌಶಾಂಬಿಯನ್ನು ಮತ್ತೆ ಗೆದ್ದುಕೊಳ್ಳುವುದಕ್ಕಾಗಿ ಮಗಧರಾಜನ ಸಹಾಯ ಬೇಕಾಗುತ್ತದೆ. ಉದಯನನು ವಾಸವದತ್ತೆಯ ಪ್ರೇಮಜಾಲದಲ್ಲಿ ಸಿಕ್ಕಿ ಮೈಮರೆತದ್ದರಿಂದ ವಾಸವದತ್ತೆಯನ್ನು ಮರೆಮಾಡಬೇಕಾಗುತ್ತದೆ. ಪದ್ಮಾವತೀ ವಿವಾಹವಾಗಿ ದರ್ಶಕರಾಜನ ಸಹಾಯದಿಂದ ಆರುಣಿಯನ್ನು ಗೆದ್ದು ಕೌಶಾಂಬಿಯನ್ನು ಸೇರಿದ ಮೇಲೆ ಮತ್ತೆ ವಾಸವದತ್ತೆಯೊಡನೆ ಸಮಾಗಮವಾಗುತ್ತದೆ. ಆರುಣಿ ವತ್ಸರಾಜ್ಯವನ್ನು ಆಕ್ರಮಿಸಿಕೊಂಡಿದ್ದದ್ದೂ, ಉದಯನನು ಪದ್ಮಾವತಿಯ ಅಣ್ಣ ದರ್ಶಕನ ನೆರವಿನಿಂದ ಅವನನ್ನು ಸೋಲಿಸಿದನೆಂಬುದೂ 'ಸ್ವಪ್ನ ವಾಸವದತ್ತ'ದಲ್ಲಿ ವರ್ಣಿತವಾಗಿದೆ. ಪದ್ಮಾವತಿ 'ಕಥಾ ಸರಿತ್ಸಾಗರ'ದಲ್ಲಿ ಮಗಧರಾಜನ ಮಗಳು; 'ಬೃಹತ್ಕಥಾ ಮಂಜರಿ'ಯಲ್ಲಿ ಮಗಧದರಸ ಮಹಾಸೇನನ ಮಗಳು; 'ಪೆರುಂಗತೆ'ಯಲ್ಲಿ ದರ್ಶಕರಾಜನ ತಂಗಿ. ಇಲ್ಲಿ ಭಾಸನಿಗೂ 'ಪೆರುಂಗತೆ'ಗೂ ಸಾಮ್ಯ ಕಾಣುತ್ತದೆ. ಆದರೆ ವಾಸವದತ್ತೆ ಪದ್ಮಾವತಿಯ ಜೊತೆಯಲ್ಲೇ ಗುಪ್ತವಾಗಿ ವಾಸಮಾಡಿದಳೆಂಬುದು ಸಂಸ್ಕೃತದ ಕಥೆಯನ್ನನುಸರಿಸಿದ್ದು. 'ಪೆರುಂಗತೆ'

ಯಲ್ಲಿ ಕೌಶಾಂಬಿಗೆ ಬರುವ ವರೆಗೂ ಅವರು ಒಬ್ಬರನ್ನೊಬ್ಬರು ಕಾಣರು. 'ಸ್ವಪ್ನವಾಸವದತ್ತ'ದ ಕಥೆಯಲ್ಲಿ ನೂರಕ್ಕೆ ತೊಂಬತ್ತೊಂಬತ್ತು ಭಾಸನ ಸೃಷ್ಟಿ; ಅಲ್ಲಿ ಅವನು ಯಾರಿಗೂ ಹೆಚ್ಚು ಋಣಿಯಲ್ಲ.

ಮೇಲೆ ವ್ಯಕ್ತವಾಗಿರುವಂತೆ 'ಪೆರುಂಗತೆ'ಗೂ ಭಾಸ ನಾಟಕಗಳಿಗೂ ಅನೇಕ ವಿವರಗಳು ಸಮಾನವಾಗಿರುವುದರಿಂದ ಭಾಸನಿಗೆ 'ಪೆರುಂಗತೆ' ಗೊತ್ತಿತ್ತೆಂದು ಹೇಳಬಹುದೇ? ಬೇರೆ ಕೆಲವು ಕಾರಣಗಳಿಂದ ಅವನು ದಕ್ಷಿಣ ದೇಶದವನೇ ಆಗಿರಬೇಕೆಂದು ಕೆಲವು ವಿದ್ವಾಂಸರು ಊಹಿಸಿದ್ದಾರೆ. 'ಬೃಹತ್ಕಥೆ'ಯ ದಾಕ್ಷಿಣಾತ್ಯ ಪಾಠಕ್ಕೆ ಇವನ ಕೃತಿಗಳು ಮುಕ್ಕಾಲು-ಮೂರುವೀಸಪಾಲು ಸರಿಹೋಲುವುದೆಂದು ಈ ಹೋಲಿಕೆಯಿಂದ ಸಿದ್ಧವಾಗಿರುವುದರಿಂದ ಆ ಊಹೆಗೆ ಮತ್ತೊಂದು ಆಧಾರ ಸಿಕ್ಕಿದಂತಾಯಿತು. ಭಾಸನು ಕಾಳಿದಾಸನಿಗಿಂತ ಹಿಂದಿನವನು. 'ಪೆರುಂಗತೆ' ಯಾವ ಕಾಲದ್ದೋ ಗೊತ್ತಿಲ್ಲ.' ಆದರೂ ಅದು ಅಷ್ಟು ಹಿಂದಣ ಕೃತಿಯೆಂದು ಹೇಳುವ ಹಾಗಿಲ್ಲ. ಕ್ರಿ. ಶ. ಆರನೆಯ ಶತಮಾನದಲ್ಲಿದ್ದ ಗಂಗರಾಜ ದುರ್ವಿನೀತನು ಪೈಶಾಚಿಯಿಂದ ಭಾಷಾಂತರ ಮಾಡಿದ ಸಂಸ್ಕೃತ ಗ್ರಂಥದ ಆಧಾರದ ಮೇಲೆ ಕೊಂಗುನಾಡಿನ ಕೊಂಗುವೇಳಿರ್ ಎಂಬ ಕಿರಿಯರಸನೊಬ್ಬನು ಈ 'ಪೆರುಂಗತೆ'ಯನ್ನು ರಚಿಸಿರಬೇಕು ಎಂದು 'ಪೆರುಂಗತೆ'ಯ ಸಂಪಾದಕರಾದ ಡಾ|| ಸ್ವಾಮಿನಾಥೈಯರವರು ಊಹಿಸುತ್ತಾರೆ. ಇದು ಎಷ್ಟು ಮಟ್ಟಿಗೆ ನಿಜವೋ ತಿಳಿಯದು. 'ಕಥಾ ಸರಿತ್ಸಾಗರ' 'ಬೃಹತ್ಕಥಾ ಮಂಜರಿ' ಗಳೆರಡೂ ಹನ್ನೊಂದನೆಯ ಶತಮಾನದವಾದ್ದರಿಂದ ಅವನ್ನು ಭಾಸನು ನೋಡಿರಲಿಲ್ಲವೆಂಬುದಂತೂ ಖಂಡಿತ. ಅವನು ಗುಣಾಢ್ಯನ ಗ್ರಂಥವನ್ನೇ ನೋಡಿ ಬರೆದನೋ, ಇಲ್ಲವೇ 'ಪೆರುಂಗತೆ'ಗೆ ಮೂಲವಾದ ದಾಕ್ಷಿಣಾತ್ಯ ಪಾಠವನ್ನು ಮಾತ್ರ ನೋಡಿ ಕಲಾದೃಷ್ಟಿಯಿಂದ ಕಥೆಯಲ್ಲಿ ವ್ಯತ್ಯಾಸಮಾಡಿಕೊಂಡನೋ ಅಥವಾ ಎರಡು ಪಾಠಗಳನ್ನೂ ಬಲ್ಲವನಾಗಿದ್ದನೋ ನಿರ್ಧರಿಸಿ ಹೇಳುವುದು ಕಷ್ಟ. ಆದರೆ 'ಪೆರುಂಗತೆ'ಯನ್ನಲ್ಲದಿದ್ದರೆ ಅದಕ್ಕೆ ಮೂಲವಾದ ಬೃಹತ್ಕಥೆಯ ಪಾಠಾಂತರವನ್ನಾದರೂ ತಿಳಿದಿದ್ದನೆಂಬುದರಲ್ಲಿ ಸಂದೇಹವಿಲ್ಲ.

'ಪೆರುಂಗತೆ'ಯಲ್ಲಿ ಬಿಟ್ಟುಹೋಗಿರುವ ಭಾಗಗಳನ್ನು 'ಉದಿತೋದಯ ಕಾವ್ಯ'ವೆಂಬ ಸಂಸ್ಕೃತ ಗ್ರಂಥ ಮತ್ತು 'ಉದಯನ ಕುಮಾರ ಕಾವ್ಯ'ವೆಂಬ

ತಮಿಳು ಗ್ರಂಥ—ಈ ಎರಡರ ಸಹಾಯದಿಂದ ಸಂಗ್ರಹಿಸಿರುವುದಾಗಿ ಡಾ|| ಸ್ವಾಮಿನಾಥೈಯರವರು 'ಪೆರುಂಗತೆ'ಯ ಪೀಠಿಕೆಯಲ್ಲಿ ಬರೆಯುತ್ತಾರೆ. 'ಉದಯನ ಕುಮಾರ ಕಾವ್ಯ' ಬಹು ಸಂಕ್ಷೇಪವಾದ ಗ್ರಂಥ; ಇದರಲ್ಲಿ ಹೆಚ್ಚು ವರ್ಣನೆಯಿಲ್ಲ; ಕಥೆ ಬೇಗ ಬೇಗ ಓಡುತ್ತದೆ. ಆದರೂ ಉದಯನನನ್ನು ಪ್ರದ್ಯೋತನ ದಂಡಾಳುಗಳು ಸೆರೆಹಿಡಿದು ಕೈಕಟ್ಟಿದ ಸಂದರ್ಭದಲ್ಲಿ ಅವನ ಕೈಯನ್ನು ವರ್ಣಿಸಲು ಎರಡು ಪದ್ಯಗಳು ಮೀಸಲಾಗಿವೆ—

"ನಙ್ಗೈಮಾರ್ ಕುೞನಾಣ್ಮಲರ್ ಶೂಟ್ಟುಙ್ಗೈ,
ತಿಙ್ಗಳ್ ಪೋಲತ್ತಿಲದ ಮೆೞುದುಙ್ಗೈ |
ಪೊಙ್ಗು ಕೊಙ್ಗೈಯಿೞ್ ಕುಙ್ಗುಮಮ್ ಪೂಶುಙ್ಗೈ,
ಪಙ್ಗಯತ್ತಡಿಪ್ಪಾಡಗಮ್ ಪೂಟ್ಟುಙ್ಗೈ ||

ಕೀದವೀಣ್ಣೈ ಶೆಙ್ಗನ್ದಮಳ್ಳೈಯುಙ್ಗೈ,
ಈದನ್ ಮೇವಿ ಯಿರವಲರ್ಕಾೞುಙ್ಗೈ |
ಏದಮಿಲ್‌ಗುಣತ್ತೆನ್ಮುಡಿ ಮನ್ನನ್ ಕೈ,
ಪೋದವೆಣ್ಡುಗಿಲಾಪ್ಪುೞತ್ತಾತ್ತನರ್ ||"

('ಉಞ್ಜೈಕ್ಕಾಣ್ಡಮ್', ೫೮, ೫೯.)

ಇದನ್ನು ಸ್ಥೂಲವಾಗಿ ಹೀಗೆ ಭಾಷಾಂತರ ಮಾಡಬಹುದು:

ಮಡದಿಯರ ಮುಡಿಗೆ ಹೊಸ ಮಲರ ಸೂಡುವ ಕೈಯ
ತಿಂಗಳಿರವನು ಪೋಲ್ವ ತಿಲಕವೆತ್ತುವ ಕೈಯ |
ಪೊಂಗುವೆದೆಯಲ್ಲಿ ಕುಂಕುಮವ ಪೂಸುವ ಕೈಯ,
ಪಂಕಜದ ಪದಕೆ ಪಾಡಗವಿಡುವ ಕೈಯ ||

ಗೀತವೀಣೆಯ ಚೆಲ್ವ ಹೆಗಲಸಪ್ಪುವ ಕೈಯ,
ಈವುದನೆ ಮೆಚ್ಚಿ ಬೇಳ್ಪರಿಗಪ್ಪ ಕೊಡುಗೈಯ |
ಕುಂದಿರದ ಗುಣದಿ ಬೆಳಗುವ ಮುಡಿಯ ದೊರೆಗೈಯ,
ಹೂವಿನಂದದ ಬಿಳಿಯ ಬಟ್ಟೆಯಲಿ ಕಟ್ಟಿದರು ಪಿಡಿದು ||

ಇದು ಶೃಂಗಾರ ಪರವಾದರೆ 'ಪ್ರತಿಜ್ಞಾ ಯೌಗಂಧರಾಯಣ'ದಲ್ಲಿ ಇದೇ ಸಂದರ್ಭದಲ್ಲಿ ಬರುವ ಪದ್ಯ (ಅಂಕ ೧, ಪದ್ಯ ೮) ವೀರರಸ ಪ್ರಧಾನವಾಗಿ ಉದಯನನ ಬಲಪರಾಕ್ರಮಗಳು ಕಣ್ಣಿಗೆ ಕಟ್ಟುವಂತೆ ಮಾಡುತ್ತದೆ. ಸಂಸ್ಕೃತದಲ್ಲೇ ರಚಿತವಾಗಿರುವ 'ಉದಿತೋದಯ ಕಾವ್ಯ' ಸಿಕ್ಕಿದ್ದರೆ ಭಾಸನ ಗ್ರಂಥಕ್ಕೂ ಅದಕ್ಕೂ ಶಬ್ದಸಾದೃಶ್ಯಗಳೇನಾದರೂ ಇವೆಯೇ ಎಂದು ಪರೀಕ್ಷಿಸಬಹುದಾಗಿತ್ತು. ಆದರೆ ಆ ಗ್ರಂಥ ಇನ್ನೂ ಅಚ್ಚಾಗಿಲ್ಲ. ತಾವು ಬರೆದಿಟ್ಟುಕೊಂಡಿದ್ದ ಪ್ರತಿ ಈಚೆಗೆ ಎಲ್ಲೋ ಕಳೆದುಹೋಯಿತೆಂದು ಮಹಾಮಹೋಪಾಧ್ಯಾಯ ಡಾ|| ಸ್ವಾಮಿನಾಥೈಯರವರು ತಿಳಿಸುತ್ತಾರೆ. ಹೆಚ್ಚು ಸಾಮಗ್ರಿ ದೊರೆಯುವವರೆಗೆ ಈ ವಿಚಾರದಲ್ಲಿ ಏನು ಹೇಳಲೂ ಸಾಧ್ಯವಿಲ್ಲ.

# ಕಥಾಸಾರಾಂಶ

ಬೇಟೆಗೆ ಹೋಗಿದ್ದ ಉದಯನನನ್ನು ಮೋಸದ ಆನೆಯ ಮೂಲಕ ಸೆರೆ ಹಿಡಿಯಬೇಕೆಂದು ಮಹಾಸೇನನು ತಂತ್ರನಡಸಿರುವುದಾಗಿ ಯೌಗಂಧ ರಾಯಣನಿಗೆ ಬೇಹು ಬರಲು ಅವನು ತನ್ನ ಸ್ವಾಮಿಗೆ ಆ ಸುದ್ದಿಯನ್ನು ಹೇಳಿ ಕಳುಹಿಸುವುದರಲ್ಲಿದ್ದನು. ಅಷ್ಟರಲ್ಲಿ ಹಂಸಕನೆಂಬ ಉದಯನನ ಬಳಿಯಾಳು ಬಂದು ಮೊದಲು ಗೊತ್ತಾಗಿದ್ದುದಕ್ಕಿಂತ ಎರಡು ದಿನ ಮುಂಚಿತವಾಗಿಯೇ ನಾಗ ವನಕ್ಕೆ ಪ್ರಯಾಣಮಾಡಿ ಹಗೆಗಳ ಕಪಟಕ್ಕೆ ಸಿಕ್ಕಿ ಉದಯನನು ಸೆರೆಗೊಳಗಾದ ನೆಂದು ತಿಳಿಸಿದನು. ಕೇಳಿದ ಯೌಗಂಧರಾಯಣನು ಬಹು ವ್ಯಥೆಪಟ್ಟು ರಾಜನೂ ರಾಜಮಾತೆಯೂ ತನ್ನಲ್ಲಿಟ್ಟಿದ್ದ ಎಣೆಯಿಲ್ಲದ ಅಭಿಮಾನಕ್ಕೆ ತಕ್ಕಂತೆ ನಡೆಯು ವುದೇ ತನ್ನ ಕರ್ತವ್ಯವೆಂದು ತಿಳಿದು "ದೊರೆಯನ್ನು ಸೆರೆಯಿಂದ ಬಿಡಿಸದಿದ್ದರೆ ನಾನು ಯೌಗಂಧರಾಯಣನೇ ಅಲ್ಲ" ಎಂದು ಪ್ರತಿಜ್ಞೆಮಾಡಿದನು. ಬಾದ ರಾಯಣ ಋಷಿಗಳಿಂದ ಹುಚ್ಚುವೇಷದ ಉಡುಪು ದೊರೆಯಲಾಗಿ ತಾನು ಹುಚ್ಚುವೇಷದಿಂದಲೇ ಹೋಗಿ ದೊರೆಯನ್ನು ಬಿಡಿಸಿಕೊಂಡು ಬರುವುದಾಗಿ ನಿರ್ಧರಿಸಿದನು. "ಉತ್ಸಾಹವೊಂದಿದ್ದರೆ ಮನುಷ್ಯನಿಗೆ ಅಸಾಧ್ಯವಾದದ್ದು ಯಾವುದೂ ಇಲ್ಲ" ಎಂಬ ನೆಚ್ಚಿನಿಂದ ಕೆಲಸಕ್ಕಿಳಿದನು (ಅಂಕ ೧).

ಇತ್ತ ಉಜ್ಜಯಿನಿಯಲ್ಲಿ ತನ್ನ ಮಗಳು ವಾಸವದತ್ತೆಯನ್ನು ಮದುವೆಯಾಗ ಬಯಸಿ ಅನೇಕ ರಾಜರು ರಾಯಭಾರಿಗಳನ್ನು ಕಳುಹಿಸುತ್ತಿದ್ದರೂ ಪ್ರದ್ಯೋತ ಮಹಾರಾಜನು ಅವರಾರಿಗೂ ಅವಳನ್ನು ಕೊಡಲೊಲ್ಲದೆ ಮಹಾರಾಣಿಯೊಡನೆ ವರನಿಷ್ಕರ್ಷೆಮಾಡಲು ಆಲೋಚನೆ ನಡಸುತ್ತಿದ್ದನು. ಆ ಸಮಯದಲ್ಲಿ ಶಾಲಂಕಾಯನ ಮಂತ್ರಿ ವತ್ಸರಾಜನನ್ನು ಸೆರೆಹಿಡಿದು ತಂದನೆಂಬ ಸುದ್ದಿ ಬಂತು. ಮೊದಮೊದಲು ಅದನ್ನು ನಂಬದೆ ಕಡೆಗೆ ಅದು ನಿಜವೆಂದು ನಿರ್ಧರವಾದ ಮೇಲೆ ತನ್ನಂಥ ಧನ್ಯರು ಮತ್ತೊಬ್ಬರಿಲ್ಲವೆಂದು ಭಾವಿಸಿದನು. ವತ್ಸರಾಜನ ಗುಣಕಥನ ವನ್ನು ಕೇಳಿದ ಮಹಾರಾಣಿ ವಾಸವದತ್ತೆಗೆ ಅವನೇ ತಕ್ಕ ವರನೆಂದು ತನ್ನ ಮನಸ್ಸಿನಲ್ಲಿ ನಿಶ್ಚಯಮಾಡಿಕೊಂಡಳು. ಯುದ್ಧದಲ್ಲಿ ಗೆದ್ದುತಂದ ಉದಯನನ

ಘೋಷವತಿಯೆಂಬ ವೀಣೆಯನ್ನು ವಾಸವದತ್ತೆಗೆ ಕೊಡಿಸಿ, ಮಹಾರಾಜನು ವತ್ಸರಾಜನ ಯೋಗಕ್ಷೇಮವನ್ನು ವಿಚಾರಿಸಿ ಅವನನ್ನು ಯೋಗ್ಯವಾಗಿ ಸತ್ಕರಿಸ ಬೇಕೆಂದು ಆಜ್ಞೆಮಾಡಿದನು. ಮಂತ್ರಿ ಭರತರೋಹಕನಿಗೆ ಅದು ರುಚಿಸದೆಂದರಿತು ಅವನಿಗೆ ತಾನೇ ಸಮಾಧಾನ ಹೇಳಬೇಕೆಂದುಕೊಂಡನು. ವತ್ಸರಾಜನ ಮೇಲೆ ಮೊದಲಿದ್ದ ವೈರ ಮಾಯವಾಗಿ ಪ್ರೀತಿಯುಂಟಾಯಿತು. ಮಿತಿಮೀರಿದ ಪಟು ಗಳಿಂದ ಅವನಿಗೆ ಕೇಡಾದೀತೋ ಏನೋ ಎಂದು ಚಿಂತಿಸತೊಡಗಿದನು (ಅಂಕ ೨).

ಭರತರೋಹಕನನ್ನು ತೃಪ್ತಿಪಡಿಸುವುದಕ್ಕಾಗಿಯೋ ಉದಯನನ ಗರ್ವ ಸ್ವಲ್ಪ ತಗ್ಗಲೆಂಬ ಉದ್ದೇಶದಿಂದಲೋ ಮಹಾಸೇನನು ಅವನನ್ನು ಸೆರೆಯಲ್ಲಿಡಿಸಿ ದನು. ತಮ್ಮ ದೊರೆಯನ್ನು ಬಿಡಿಸುವುದಾಗಿ ಪ್ರತಿಜ್ಞೆಮಾಡಿದ್ದ ಯೌಗಂಧ ರಾಯಣನು ಹುಚ್ಚುವೇಷವನ್ನು ತೊಟ್ಟು ಉಜ್ಜಯಿನಿಗೆ ಬಂದು ನಿರಾತಂಕ ವಾಗಿ ಓಡಾಡತೊಡಗಿದನು. ರುಮಣ್ವಂತನು ಶ್ರಮಣಕವೇಷದಿಂದಲೂ ವಸಂತಕನು ಭಿಕ್ಷುಕವೇಷದಿಂದಲೂ ಬಂದು ಅವನಿಗೆ ನೆರವಾಗಿ ನಿಂತರು. ಸ್ವಾಮಿನಿಷ್ಠರಾದ ಉದಯನನ ಭೃತ್ಯರು ಹಲವರು ಒಗೆಬಗೆಯ ವೇಷದಿಂದ ಬಂದು ಪಟ್ಟಣದ ಆಯಕಟ್ಟಿನ ಸ್ಥಳಗಳಲ್ಲಿಯೂ ಅರಮನೆ, ಸೆರೆಮನೆ ಮೊದಲಾದ ಕಡೆಗಳಲ್ಲಿಯೂ ನೆಲೆಗೊಂಡು ನಿಂತು ಪ್ರದ್ಯೋತಭೃತ್ಯರಂತೆ ನಟಿಸುತ್ತ ಯೌಗಂಧರಾಯಣನಿಗೆ ಅನುಕೂಲರಾಗಿ ವರ್ತಿಸುತ್ತಿದ್ದರು. ವಸಂತಕನು ಸೆರೆಮನೆಗೆ ಹೋಗಿ ದೊರೆಯನ್ನು ಕಂಡುಬರುವ ಅವಕಾಶ ಪಡೆದುಕೊಂಡನು. ಯೌಗಂಧರಾಯಣನು ಅವನ ಮೂಲಕ ಉದಯನನೊಡನೆ ಆಲೋಚಿಸಿ, ನಲಗಿರಿಯೆಂಬ ಪ್ರದ್ಯೋತನ ಆನೆಗೆ ಅಕಾಲದಲ್ಲಿ ಮದವೇರುವಂತೆ ಮಾಡುವು ದಾಗಿಯೂ ಆಗ ಉದಯನನು ಶತ್ರುವಿನ ಅನುಮತಿಯಿಂದಲೇ ಸೆರೆಯಿಂದ ಹೊರಬಂದು ಘೋಷವತಿಯ ಇಂಪಿನಿಂದ ನಲಗಿರಿಯ ಮದವನ್ನಡಗಿಸಿ ಬಳಿಕ ಅದರ ಮೇಲೆ ಹತ್ತಿಕೊಂಡು ನಿರ್ಭಯವಾಗಿ ವತ್ಸರಾಜ್ಯಕ್ಕೆ ನಡೆದುಬಿಡಬಹು ದೆಂದೂ ಹೂಟ ಹೂಡಿದನು. ಅದಕ್ಕೆ ಎಲ್ಲವೂ ಸಿದ್ಧವಾಗಿರುವಲ್ಲಿ ಉದಯನನು ದೊರೆಮಗಳು ವಾಸವದತ್ತೆಯನ್ನು ಅಕಸ್ಮಾತ್ತಾಗಿ ಕಂಡು ಮೋಹಗೊಂಡು ಅವಳನ್ನು ಬಿಟ್ಟು ತಾನೊಬ್ಬನೇ ಕೌಶಾಂಬಿಗೆ ಒರಲಾರೆನೆಂದು ಹೇಳಿಕಳುಹಿಸಿ

ದನು. ಯೌಗಂಧರಾಯಣನು ಎದೆಗೆಡದೆ ಅರಸನ ಜೊತೆಗೆ ರಾಜಪುತ್ರಿಯನ್ನೂ ಹರಣಮಾಡಿಕೊಂಡು ಹೋಗುವುದಾಗಿ ಪ್ರತಿಜ್ಞೆಮಾಡಿದನು (ಅಂಕ ೩).

ನಲಗಿರಿಗೆ ಮದವೇರಿತು; ಉದಯನನಿಗೆ ಬಿಡುಗಡೆಯಾಯಿತು. ಆದರೆ ಅವನು ಕೂಡಲೆ ಕೌಶಾಂಬಿಗೆ ಓಡಿಹೋಗಲಿಲ್ಲ. ಮಹಾಸೇನನು ಕೃತಜ್ಞತೆಯಿಂದ ಅವನನ್ನು ಅರಮನೆಗೆ ಬರಮಾಡಿಕೊಂಡು ಪ್ರೀತಿಯಿಂದ ಆದರಿಸಿ ವಾಸವದತ್ತೆಗೆ ವೀಣೆ ಕಲಿಸುವಂತೆ ಹೇಳಿ ಅವಳನ್ನು ಶಿಷ್ಯೆಯಾಗಿ ಅವನ ವಶಕ್ಕೆ ಒಪ್ಪಿಸಿದನು. ಮಹಾರಾಣಿಯೂ ಅವನ ದುಃಖದಲ್ಲಿ ಮರುಗಿ ತಾಯಿಯಂತೆ ಉಪಚರಿಸುತ್ತಿದ್ದಳು ('ಸ್ವಪ್ನವಾಸವದತ್ತ', ೬ ನೆಯ ಅಂಕ). ಕಾಲಕ್ರಮದಲ್ಲಿ ವಾಸವದತ್ತೆಗೆ ಉದಯನನ ಮೇಲೆ ಅನುರಾಗ ಹುಟ್ಟಿತು. ಆ ಪ್ರೇಮ ದೃಢವಾದ ಬಳಿಕ ಯೌಗಂಧರಾಯಣನ ಸಲಹೆಯ ಮೇರೆಗೆ ಉದಯನನು ಒಂದು ದಿನ ರಾತ್ರಿ ವಾಸವದತ್ತೆಯ ಭದ್ರವತಿಯೆಂಬ ಆನೆಯ ಮೇಲೇರಿ ಅವಳೊಡನೆ ವತ್ಸರಾಜ್ಯಕ್ಕೆ ಓಡಿಹೋದನು. ಬೆಳಗಾದ ಮೇಲೆ ಈ ಸುದ್ದಿಯನ್ನರಿತು ಅವರನ್ನು ಬೆಂಬತ್ತಿ ಹೊರಟ ಸೈನ್ಯವನ್ನು ಯೌಗಂಧರಾಯಣನು ತನ್ನ ಜನರೊಡನೆ ಗಡ್ಡಗಟ್ಟಿ ಯುದ್ಧಮಾಡಿದನು. ಆ ಯುದ್ಧದಲ್ಲಿ ಅವನ ಕತ್ತಿ ಮುರಿದು ಬೀಳಲು ಪ್ರದ್ಯೋತ ಭಟರು ಅವನನ್ನು ಕೈಸೆರೆಹಿಡಿದರು. ಸ್ವಾಮಿಹಿತಕ್ಕಾಗಿ ಸೆರೆಪಟ್ಟ ಆ ಪ್ರಖ್ಯಾತ ಮಂತ್ರಿಯನ್ನು ನೋಡುವ ತವಕದಿಂದ ಜನರು ನುಗ್ಗಿ ನುಗ್ಗಿ ಬಂದರು. ಭರತರೋಹಕನು ನೀತಿಪ್ರಯೋಗದಲ್ಲಿ ತಾನು ಸೋತುಹೋದರೂ ಮಾತಿನಲ್ಲಾದರೂ ಅವನನ್ನು ಸಿಕ್ಕಿಹಾಕಿಸಬೇಕೆಂದು ಅವನೊಡನೆ ಆಕ್ಷೇಪಣೆಯ ಮಾತಾಡತೊಡಗಿದನು. ಅಷ್ಟರಲ್ಲಿ ಪ್ರದ್ಯೋತನು ಮಗಳು ಹೊರಟು ಹೋದದ್ದಕ್ಕೆ ಹಲುಬುತ್ತಿದ್ದ ಮಹಾರಾಣಿಯನ್ನು ಸಂತೈಸಿ ಉದಯನ ವಾಸವದತ್ತೆಯರ ಚಿತ್ರಪಟಗಳಿಗೇ ಮದುವೆ ಮಾಡುವಂತೆ ಸೂಚಿಸಿ ಯೌಗಂಧರಾಯಣನ ಸೆರೆಯನ್ನು ಬಿಡಿಸಿ ಉಪಕಾರಿಯೆಂದು ಅವನನ್ನು ಕೊಂಡಾಡಿ ಅವನಿಗೆ ಬಹುಮಾನ ಮಾಡಿದನು. ರಾಣಿವಾಸದವರು ಮದುವೆಯ ಮಂಗಳದಲ್ಲಿ ತೊಡಗಿದರು. ಮಹಾಸೇನನ ವಿಶ್ವಾಸವನ್ನರಿತು ಯೌಗಂಧರಾಯಣನಿಗೆ ಪರಮಸಂತೋಷವಾಯಿತು (ಅಂಕ ೪).

# ಪ್ರತಿಜ್ಞಾ ಯೌಗಂಧರಾಯಣ

# ಪಾತ್ರವರ್ಗ

| | | |
|---|---|---|
| ಸೂತ್ರಧಾರ | .... | |
| ನಟಿ | .... | |
| ಯೌಗಂಧರಾಯಣ | .... | ವತ್ಸರಾಜ ಉದಯನನ ಪ್ರಧಾನಮಂತ್ರಿ. |
| ಸಾಲಕ | ... | ಒಬ್ಬ ಓಲೆಕಾರ |
| ವಿಜಯೆ | .... | ಪ್ರತೀಹಾರಿ |
| ನಿರ್ಮುಂಡಕ | .... | ಯೌಗಂಧರಾಯಣನ ಕಾರ್ಯಭಾರಿ |
| ಹಂಸಕ | .... | ಉದಯನನ ಮೃಗಾವಲಿನವನು (ಬಳಿಯಾಳು) |
| ಬ್ರಾಹ್ಮಣ | .... | |
| ಕಾಂಚುಕೀಯು | .... | ಮಹಾಸೇನನ ಕಂಚುಕಿ |
| ರಾಜ | .... | ಅವಂತಿಯ ದೊರೆ ಮಹಾಸೇನ ಪ್ರದ್ಯೋತ, ವಾಸವದತ್ತೆಯ ತಂದೆ. |
| ದೇವಿ | .... | ಮಹಾಸೇನನ ಪಟ್ಟದರಾಣಿ, ವಾಸವದತ್ತೆಯ ತಾಯಿ |
| ವಿದೂಷಕ | .... | ವಸಂತಕ, ಉದಯನನ ಗೆಳೆಯ. |
| ಹುಚ್ಚ | .... | ಹುಚ್ಚುವೇಷದ ಯೌಗಂಧರಾಯಣ |
| ಶ್ರಮಣಕ | .... | ಶ್ರಮಣಕ ವೇಷದ ರುಮಣ್ವಂತ, ವತ್ಸರಾಜನ ಸೇನಾಪತಿ. |
| ಭಟ | .... | ಮಹಾಸೇನನ ಅರಮನೆಯ ಒಬ್ಬ ಆಳು |
| ಗಾತ್ರಸೇವಕ | .... | ವಾಸವದತ್ತೆಯ ಭದ್ರವತಿಯೆಂಬ ಆನೆಯ ಪರಿಚಾರಕ, ಇವನು ಯೌಗಂಧರಾಯಣನ ಗುಪ್ತದೂತ |
| ಸಾಧಾರಣರು | .... | ಇಬ್ಬರು ಆಳುಗಳು. |
| ಮತ್ತೊಬ್ಬ ಭಟ | .... | |
| ಭರತರೋಹಕ | .... | ಮಹಾಸೇನನ ಮುಖ್ಯಮಂತ್ರಿ. |

# ಪ್ರತಿಜ್ಞಾ ಯೌಗಂಧರಾಯಣ

## ಮೊದಲನೆಯ ಅಂಕ

(ನಾಂದಿಯಾದ ಮೇಲೆ ಬಳಿಕ ಸೂತ್ರಧಾರನು ಪ್ರವೇಶಿಸುತ್ತಾನೆ.)

ಸೂತ್ರಧಾರ—

**ವಾಸವದತ್ತಾಭ್ಯುದಯಂ**
ಪಾಲಿಕ್ಕೆ **ಮಹಾಸೇನಂ**
ಅತಿವೀರ್ಯವನಾಂತಿರ್ಪಂ
ಪೆಸರಿಂ ತಾಂ **ವತ್ಸರಾಜಂ**
ಶಕ್ತಿಯಂ ತಾಳ್ದವಂ
**ಯೌಗಂಧರಾಯಣಂ** ‖ ೧ ‖*

(ಮುಂದೆ ಹೋಗಿ, ನೇಪಥ್ಯದ ಕಡೆ ನೋಡಿ) ಆರ್ಯೆ, ಇತ್ತಬಾ.

---

* ಇದು ಕುಮಾರಸ್ವಾಮಿಯ ಪ್ರಾರ್ಥನೆ. ವಾಸವದತ್ತಾಭ್ಯುದಯಂ = ವಾಸವನಿಗೆ (ಇಂದ್ರನಿಗೆ) ಅಭ್ಯುದಯವನ್ನು (ಏಳಿಗೆಯನ್ನು) ಕೊಟ್ಟವನು. ಕುಮಾರಸ್ವಾಮಿ ತಾರಕಾಸುರನ ಉಪಟಳದಿಂದ ದೇವತೆಗಳನ್ನು ರಕ್ಷಿಸಿದನೆಂದು ಪುರಾಣ ಕಥೆ. ಮಹಾಸೇನಂ = ಇದು ಕುಮಾರಸ್ವಾಮಿಯ ಹೆಸರುಗಳಲ್ಲೊಂದು. ದೇವತೆಗಳ ಸೇನಾಪತಿಯಾದ್ದರಿಂದ ಈ ಹೆಸರು ಬಂತು. ವತ್ಸರಾಜಂ = 'ಜ್ಯೇಷ್ಠರಾಜ' ಎಂಬುದು ಗಣಪತಿಯ ಬಿರುದು, ಅವನ ತಮ್ಮನಾದ್ದರಿಂದ ಇವನು ವತ್ಸರಾಜ. ಶಕ್ತಿಯಂ ತಾಳ್ದವಂ = ಶಕ್ತಿ ಕುಮಾರಸ್ವಾಮಿಯ ಆಯುಧ; ಶಕ್ತಿಧರನೆಂದು ಇವನಿಗೆ ಮತ್ತೊಂದು ಹೆಸರು. ಯೌಗಂಧರಾಯಣಂ = ಯುಗಂಧರನ ಎಂದರೆ ಮಿಥುನರೂಪಧರನಾದ ಶಿವನ ಮಗ. ಅಥವಾ ಯುಗಂಧರವೆಂಬ ಕ್ಷೇತ್ರದಲ್ಲಿ ಅಯನ (ಸಂಚಾರ)ವುಳ್ಳವನು; ಯುಗಂಧರ ಕ್ಷೇತ್ರವಾಸಿ. ಇಲ್ಲಿ, ಈ ನಾಟಕದಲ್ಲಿ ಬರುವ ವಾಸವದತ್ತಾ, ಮಹಾಸೇನ, ವತ್ಸರಾಜ ಮತ್ತು ಯೌಗಂಧರಾಯಣ ಎಂಬ ಪ್ರಧಾನ ಪಾತ್ರಗಳ ಹೆಸರು ಸೂಚಿತವಾಗಿದೆ.

(ಪ್ರವೇಶಿಸಿ)

ನಟಿ—ಆರ್ಯ, ಇಗೋ ಬಂದಿದ್ದೇನೆ.

ಸೂತ್ರಧಾರ—ಆರ್ಯೆ, ಯಾವುದಾದರೊಂದು ವಸ್ತುವನ್ನು ಕುರಿತು ಗಾನಮಾಡು. ನಿನ್ನ ಗಾನದಿಂದ ರಂಗವು ಪ್ರಸನ್ನವಾಗಲಿ. ಆ ಮೇಲೆ ನಾವು ಕೂಡ [1]ಪ್ರಕರಣವನ್ನು ಆರಂಭಿಸುತ್ತೇವೆ. ಆರ್ಯೆ, ಇದೇನು ಯೋಚಿಸುತ್ತಿರುವೆ? ಹಾಡುವುದಿಲ್ಲವೆ?

ನಟಿ—ಆರ್ಯ, ಇವತ್ತು ನಮ್ಮ ತೌರುಮನೆಯವರಿಗೆ ಅಸ್ವಸ್ಥವಾಗಿರುವಂತೆ ಕನಸು ಕಂಡೆ. ಆದ್ದರಿಂದ ಅವರ ಯೋಗಕ್ಷೇಮವನ್ನು ತಿಳಿಯುವುದಕ್ಕಾಗಿ ಆರ್ಯನು ಯಾರಾದರೊಬ್ಬ ಆಳನ್ನು ಕಳುಹಿಸಬೇಕೆಂದು ಬಯಸುತ್ತೇನೆ.

ಸೂತ್ರಧಾರ—ಆಗಲಿ.

ಹಿತವ ಸಾಧಿಸಬಲ್ಲ ನುರಿತಾಳ ಕಳುಹುವೆನು;

(ನೇಪಥ್ಯದಲ್ಲಿ)

ಸಾಲಕ, ಸಿದ್ಧವಾಗಿರುವೆಯೋ?

ಸೂತ್ರಧಾರ—ಆಳನೀ ಯೌಗಂಧರಾಯಣನು ಕಳುಹುವಂತೆ || ೨ ||

(ಹೊರಡುತ್ತಾರೆ.)

ಸ್ಥಾಪನೆ ಮುಗಿಯಿತು.

---

(ಬಳಿಕ ಸಾಲಕನೊಡನೆ ಯೌಗಂಧರಾಯಣನು ಪ್ರವೇಶಿಸುತ್ತಾನೆ.)

ಯೌಗಂಧರಾಯಣ—ಸಾಲಕ, ಸಿದ್ಧವಾಗಿರುವೆಯೋ?

ಸಾಲಕ—ಆರ್ಯ, ಸಿದ್ಧನಾಗಿದ್ದೇನೆ.

ಯೌಗಂಧರಾಯಣ—ತುಂಬ ದೂರ ಹೋಗಬೇಕಾಗಿದೆ.

ಸಾಲಕ—ಅಷ್ಟೂ ಅಷ್ಟು ಹೆಚ್ಚು ಭಕ್ತಿಯಿಂದ ಆರ್ಯನನ್ನು ಸೇವಿಸುತ್ತೇನೆ.

ಯೌಗಂಧರಾಯಣ—ಸರಿ. ಯಾರು ಬಲಶಾಲಿಯೋ ಯಾರಿಗೆ ದಣಿಯಲ್ಲಿ ಭಕ್ತಿ ಇದೆಯೋ ಅವನು ಹೋಗಿಯೇ ಹೋಗುತ್ತಾನೆ. ಏಕೆಂದರೆ,

---

[1] ಹೀಗೆ ಸಂಖ್ಯೆ ಕೊಟ್ಟಿರುವ ಕಡೆ ಗ್ರಂಥಾಂತ್ಯದ ಟಿಪ್ಪಣಿಗಳನ್ನು ನೋಡಿ.

[2]ಕಷ್ಟಕಾರ್ಯವ ಕೊಡುವುದೊಡೆಯನೊಲವುಳ್ಳವಗೆ,
ಮೇಣ್ ಕಾರ್ಯದಿಂದೊಗೆವ ಸತ್ಫಲವನರಿತವಗೆ,
ಅಲ್ಲದಿರೆ ಸಾಮರ್ಥ್ಯವನೆ ಕೊಂಡುಕೊಂಡವಗೆ,
ಇಂತೆಸಗೆ ಫಲ ಬಹುದೊ ಬಾರದೋ, ವಿಧಿವಶವದು. || ೩ ||

ಈಗ, ವೇಣುವನದಿಂದ ಮೂರು ಹಳುವಗಳಲ್ಲಿರುವ ನಾಗವನಕ್ಕೆ ಸ್ವಾಮಿಯವರು ನಾಳೆ ಹೊರಡುವವರಾಗಿದ್ದಾರೆ. ಅಷ್ಟರೊಳಗಾಗಿ ನೀನು ಹೋಗಿ ಅವರನ್ನು ಕಾಣಬೇಕು.

ಸಾಲಕ—ಆರ್ಯ, ಕಾರ್ಯಸ್ವರೂಪವನ್ನೊಳಕೊಂಡ ಲೇಖನವೇ ನನ್ನನ್ನು ತಡೆದಿರುವುದು.

ಯೌಗಂಧರಾಯಣ—ವಿಜಯೇ !

(ಪ್ರವೇಶಿಸಿ)

ವಿಜಯೆ—ಆರ್ಯ, ಇಗೋ ಬಂದಿದ್ದೇನೆ.

ಯೌಗಂಧರಾಯಣ—ವಿಜಯೇ, ಲೇಖನವನ್ನೂ ರಕ್ಷಾಸೂತ್ರವನ್ನೂ ಬೇಗ ತೆಗೆದುಕೊಂಡು ಬಾ.

ವಿಜಯೆ—ಆರ್ಯ, ಅಪ್ಪಣೆ. (ಹೋಗುತ್ತಾಳೆ)

ಯೌಗಂಧರಾಯಣ—ಹಿಂದೆಂದಾದರೂ ಈ ದಾರಿಯನ್ನು ನೀನು ಕಂಡಿದ್ದೀಯೋ ?

ಸಾಲಕ—ಇಲ್ಲ, ಕೇಳಿಬಲ್ಲೆ.

ಯೌಗಂಧರಾಯಣ—ಇದೂ ಕೂಡ ಬುದ್ಧಿವಂತರ ಲಕ್ಷಣವೇ ಸರಿ. ಆಹಾ! ಪ್ರದ್ಯೋತನು ನೀಲಗಜವೊಂದನ್ನು ತಂದಿಟ್ಟು ಕಾಡಾನೆಗಳ ನಡುವೆ ಅದರ ಮೈ ಚೆನ್ನಾಗಿ ಕಾಣದಂತೆ ಮರೆಮಾಡಿ ಸ್ವಾಮಿಯನ್ನು ಮೋಸಗೊಳಿಸಲೆಳಸಿರುವಂತೆ ನಮಗೆ ಬೇಹು ಬಂದಿದೆ. ಈಗ ಸ್ವಾಮಿಗೆ ಬುದ್ಧಿಮೋಸವಾಗದಿದ್ದರೆ ಸಾಕು. ಅಬ್ಬಬ್ಬಾ! ಪ್ರದ್ಯೋತನಿಗೆ ವತ್ಸರಾಜನನ್ನು ಕಂಡರೆ ಎಷ್ಟೊಂದು ಹೆದರಿಕೆ! ಅವನ ಸೈನ್ಯಕ್ಕೆ ಸಾಮರ್ಥ್ಯ ಸಾಲದೆಂದು ಸ್ಪಷ್ಟವಾಯಿತು. ಏಕೆಂದರೆ,

ದಂಡೊ ಬಹುವಾಗಿಹುದು, ಒಂದೆ ಗುರಿಯದಕಿಲ್ಲ.
[3]ವೀರರೇಣಿಕೆಗೆ ಮಿಗಿಲು, ಆಳ್ದನಲ್ಲೊಲವಿಲ್ಲ.
ಅದರಿಂದ ಪೋರೆಡೆಗೆ ನೆನೆಯುವನು ಕುಟಿಲವನು.
ಕೂರ್ಪಳಿದ ಮಡದಿವೋಲ್ ಪಡೆಯೆಲ್ಲ ಒಲವಳಿಯಲು. || ೪ ||

(ಪ್ರವೇಶಿಸಿ)

ವಿಜಯೆ—ಇಗೋ ಲೇಖನ. ರಕ್ಷಾಸೂತ್ರವನ್ನು ಮುತ್ತೈದೆಯರೆಲ್ಲರ ಕೈಯಲ್ಲೂ ಮುಟ್ಟಿಸಿ ಬೇಗ ಕಳುಹಿಸುವುದಾಗಿ ರಾಜಮಾತೆಯವರು ಹೇಳಿದರು.

ಯೌಗಂಧರಾಯಣ—ವಿಜಯೇ, ಹೋಗಿ ರಾಣಿಯವರಿಗೆ ವಿಜ್ಞಾಪಿಸು—"ಎಲ್ಲ ಮುತ್ತೈದೆಯರ ಕೈಮುಟ್ಟಿಸಿಯಾದರೂ ಸರಿ, ಮುಟ್ಟಿಸದಿದ್ದರೂ ಸರಿ, ರಕ್ಷಾಸೂತ್ರವನ್ನು ಕೊಡಬೇಕಂತೆ" ಎಂದು.

ವಿಜಯೆ—ಆರ್ಯ, ಹಾಗೆಯೇ ಆಗಲಿ. (ಹೋಗುತ್ತಾಳೆ.)

(ಪ್ರವೇಶಿಸಿ)

ನಿರ್ಮುಂಡಕ—ಆರ್ಯನಿಗೆ ಸುಖವಾಗಲಿ.

ಯೌಗಂಧರಾಯಣ—ಏನು, ನಿರ್ಮುಂಡಕನೇ !

ನಿರ್ಮುಂಡಕ—ಆರ್ಯ, ಸ್ವಾಮಿಯ ಪಾದಸನ್ನಿಧಿಯಿಂದ [4]ಬಳಿಯಾಳು ಹಂಸಕನು ಬಂದಿದ್ದಾನೆ.

ಯೌಗಂಧರಾಯಣ—ಏನು, ಹಂಸಕನೊಬ್ಬನೇ ಬಂದಿರುವನೆಂದೆಯಾ ? ಸಾಲಕ, ಈಗ ಒಂದು ಗಳಿಗೆ ತಾಳು. ಆ ಮೇಲೆ ಇನ್ನೂ ಬೇಗ ಬೇಗ ಹೋಗಬೇಕಾಗುತ್ತದೆ ; ಇಲ್ಲದಿದ್ದರೆ ನಿಂತೇ ಬಿಡಬೇಕಾಗುತ್ತದೆ.

ಸಾಲಕ—ಆರ್ಯ, ಅಪ್ಪಣೆ. (ಹೋಗುತ್ತಾನೆ.)

ಯೌಗಂಧರಾಯಣ—ನಿರ್ಮುಂಡಕ, ಹಂಸಕನನ್ನು ಬರಮಾಡು.

ನಿರ್ಮುಂಡಕ—ಆರ್ಯ, ಅಪ್ಪಣೆ. (ಹೋಗುತ್ತಾನೆ.)

ಯೌಗಂಧರಾಯಣ—ಹಿಂದೆಂದೂ ಸ್ವಾಮಿಯನ್ನು ಬಿಟ್ಟಗಲದಿದ್ದ ಹಂಸಕನು ಈಗ ತಾನೊಬ್ಬನೇ ಬಂದಿರುವನೆಂದು ನನ್ನ ಮನಸ್ಸಿಗೆ ಕಳವಳವಾಗಿದೆ. ಏಕೆಂದರೆ—

ಬೇರೆನಾಡಿಗೆ ಹೋಗಿ ಮನೆಗೆ ಮರಳಿರುವಂದು
ಬಂಧುಗಳು ತವಕದಲಿ ಬಳಿಗೆ ಬರಲೆಂತಹುದೊ
ಅಂತೆನ್ನ ಬಗೆಯಿಂದು ಬೆದರುತಿದೆ ಶಂಕಿಸುತ
ಒಳ್ಳೆಯದ ಕೇಳುವೆನೊ, ಕೇಡ ಕೇಳುವೆನೊ ಎಂದು. || ೫ ||

(ಆ ಮೇಲೆ ಹಂಸಕನೂ ನಿರ್ಮುಂಡಕನೂ ಪ್ರವೇಶಿಸುತ್ತಾರೆ.)

ನಿರ್ಮುಂಡಕ—ಆರ್ಯನು ಬರಬೇಕು, ಬರಬೇಕು.

ಹಂಸಕ—ಎಲ್ಲಿ, ಎಲ್ಲಿ ? ಆರ್ಯನೆಲ್ಲಿ ?

ನಿರ್ಮುಂಡಕ—ಇಗೋ, ಆರ್ಯನು ಇಲ್ಲಿದ್ದಾನೆ. ಹತ್ತಿರಕ್ಕೆ ಹೋಗಬಹುದು. (ಹೋಗುತ್ತಾನೆ.)

ಹಂಸಕ—(ಹತ್ತಿರ ಹೋಗಿ) ಆರ್ಯನಿಗೆ ಸುಖವಾಗಲಿ.

ಯೌಗಂಧರಾಯಣ—ಹಂಸಕ, ಹೋಗಲಿಲ್ಲವಷ್ಟೇ ಸ್ವಾಮಿಯವರು ನಾಗವನಕ್ಕೆ ?

ಹಂಸಕ—ಆರ್ಯ, ನಿನ್ನೆಯೇ ಪ್ರಭು ಹೊರಟುಹೋದರು.

ಯೌಗಂಧರಾಯಣ—ಅಯ್ಯೋ ! ಇನ್ನು ಹೇಳಿಕಳುಹಿಸುವುದು ವ್ಯರ್ಥ. ಮೋಸಹೋದೆವು. ಇನ್ನೂ ಆಸೆಯೇನಾದರೂ ಇದೆಯೋ ಅಥವಾ ಈಗಲೇ ಪ್ರಾಣ ಬಿಟ್ಟುಬಿಡಬೇಕೋ ?

ಹಂಸಕ—ಪ್ರಭು ಇನ್ನೂ ಬದುಕಿದ್ದಾರೆ.

ಯೌಗಂಧರಾಯಣ—ಇನ್ನೂ ಬದುಕಿರುವರೆಂದರೆ ವಿಪತ್ತು ಅಷ್ಟು ಮಹತ್ತಾದ್ದಲ್ಲವೆಂದಂತಾಯಿತು. ಸ್ವಾಮಿ ಸೆರೆ ಸಿಕ್ಕಿರಬಹುದಲ್ಲವೇ ?

ಹಂಸಕ—ಆರ್ಯನ ಊಹೆ ಸರಿ. ಪ್ರಭು ಸೆರೆ ಸಿಕ್ಕಿದರು.

ಯೌಗಂಧರಾಯಣ—ಅದು ಹೇಗೆ ಸ್ವಾಮಿ ಸೆರೆಗೊಳಗಾದರು ? ಆಹಾ ! ಪ್ರದ್ಯೋತನಿಗೆ ಅದೃಷ್ಟವಶದಿಂದ ದೊಡ್ಡ ಭಾರ ಇಳಿದಂತಾಯಿತು. ಇಂದು ಮೊದಲುಗೊಂಡು ವತ್ಸರಾಜನ ಸಚಿವರಿಗೆ ಅಸಾಮರ್ಥ್ಯವೂ ಅಪಖ್ಯಾತಿಯೂ ಸ್ಥಿರವಾಯಿತು. 'ಕಾರ್ಯ ಹುಟ್ಟುವುದಕ್ಕೆ ಮೊದಲೇ ಅರಿಯಬಲ್ಲ ರುಮಣ್ವಂತನು ಈಗ ಎಲ್ಲಿ ಹೋದನು ? (ನಮ್ಮ) ಅಶ್ವಸೇನೆ ಎಲ್ಲಿ ಹೋಯಿತು ? ಏಕೆಂದರೆ, (ಅದು)

ಅನುರಕ್ತವಾಗಿಹುದು, ಸ್ನೇಹಕ್ಕೆ ಸೋತಿಹುದು,
ಕುಲದಿ ಮೇಲಾಗಿಹುದು, ವ್ಯಾಯಾಮಪಟುಗಳಹ
ಸಾದಿಗಳಿನಿಡಿದಿಹುದು, ಗುಣದಿಂದಲಾಯ್ದಿಹುದು.
ಈ ನಮ್ಮ ಕುದುರೆಪಡೆ ಶತ್ರುಗಳಿಗೊಳಗಾಯ್ತೊ ?
ಕಗ್ಗಾಡಿನೆಡೆ ನುಗ್ಗಿ ನಡೆತಗ್ಗಿ ಚೆದರಿತೋ ?
ಹೆಬ್ಬುಲವ ಮಾರ್ಕೊಂಡು ಹೋರುತ್ತ ಮಡಿದಳಿಯಿತೋ ? || ೬ ||

**ಹಂಸಕ**—ದಂಡಾಳುಗಳ ಪಡೆಯೆಲ್ಲಾ ಸ್ವಾಮಿಯ ಬಳಿ ಇದ್ದಿದ್ದರೆ ಈ ಅನರ್ಥ ಒದಗುತ್ತಲೇ ಇರಲಿಲ್ಲ.

**ಯೌಗಂಧರಾಯಣ**—ದಂಡಾಳುಗಳ ಪಡೆಯೆಲ್ಲಾ ಸ್ವಾಮಿಯ ಬಳಿ ಇಲ್ಲದೆ ಹೋದದ್ದು ಹೇಗೆ ?

**ಹಂಸಕ**—ಆರ್ಯನು ಲಾಲಿಸಬೇಕು.

**ಯೌಗಂಧರಾಯಣ**—ದಾರಿ ನಡೆದು ಬಳಲಿದ್ದೀಯೆ, ಕೂತುಕೊ.

**ಹಂಸಕ**—ಆರ್ಯ, ಆಗಲಿ. (**ಕೂತುಕೊಂಡು**) ಆರ್ಯನು ಲಾಲಿಸಬೇಕು. ಬೆಳಕು ಹರಿಯುವುದಕ್ಕೆ ಮೊದಲು ಬೆಳಗಿನಜಾವದಲ್ಲಿಯೇ, ವಾಹನಗಳಿಗೆ ಸುಖ ವಾದ ವೇಳೆಯಲ್ಲಿ, ಮರಳುಕಡುವಿನಲ್ಲಿ ನರ್ಮದಾನದಿಯನ್ನು ದಾಟಿ, ವೇಣುವನದಲ್ಲಿ ಹೆಂಗಸರನ್ನು ನಿಲ್ಲಿಸಿ, ಛತ್ರವನ್ನು ಮಾತ್ರ ತೆಗಸಿಕೊಂಡು, ಆನೆಯ ಹಿಂಡನ್ನು ಹಿಡಿಯುವುದಕ್ಕೆ ತಕ್ಕಷ್ಟು ದಂಡಿನೊಡನೆ, ಮೃಗಗಳು ತಿರುಗುವ ಕಾಡುದಾರಿಯಿಂದ ನಾಗವನಕ್ಕೆ ಪ್ರಭು ಪ್ರಯಾಣಮಾಡಿದರು.

**ಯೌಗಂಧರಾಯಣ**—ಆಮೇಲಾಮೇಲೆ ?

**ಹಂಸಕ**—ಆ ಮೇಲೆ, ಸೂರ್ಯನು ಒಂದು ಅಂಬಿನೆಯಷ್ಟು ಮಾತ್ರ ಮೇಲೇರಿದ್ದಾಗ ಒಂದಿಷ್ಟು ಯೋಜನ ನಡೆದು, ಮದಗಂಧೀರ ಪರ್ವತವನ್ನು ತಲಪುವುದಕ್ಕೆ ಒಂದು ಕ್ರೋಶ ದೂರ ಹಿಂದೆಯೇ (ಇರುವಾಗ, ಮೈಗೆ) ಕೆರೆಯ ಕೆಸರು ಮೆತ್ತಿಕೊಂಡು [6]ಅರ್ಧ ಕಟ್ಟಿ ಬಿಟ್ಟ ಕಲ್ಲುಕಟ್ಟಡದಂತೆ ಹೆಚ್ಚು ಕಡಮೆಯಾಗಿ ತೋರುವ ಆನೆಯ ಹಿಂಡು ನಮಗೆ ಕಾಣಬಂತು.

**ಯೌಗಂಧರಾಯಣ**—ಆಮೇಲಾಮೇಲೆ ?

ಹಂಸಕ—ಬಳಿಕ ಸೇನೆಗಳು ಕಣ್ಣಿಟ್ಟು ನೋಡುತ್ತಿದ್ದ ಹಾಗೆಯೇ ಭಯದಿಂದ ಆ ಹಿಂಡು ಒಟ್ಟುಗೂಡಿರುವಲ್ಲಿ ಈ ಅನರ್ಥಕ್ಕೆ ಮೂಲಕಾರಣನಾದ ಒಬ್ಬಾನೊಬ್ಬ ಕಾಲಾಳು ಪ್ರಭುವಿನ ಬಳಿಗೇ ಬಂದನು.

ಯೌಗಂಧರಾಯಣ—ನಿಲ್ಲು. ಅವನು "ಇಲ್ಲಿಗೆ ಒಂದು ಕ್ರೋಶ ದೂರದಲ್ಲಿಯೇ ಮಲ್ಲಿಗೆ ಮತ್ತು ಸಾಲವೃಕ್ಷಗಳಿಂದ ಮುಚ್ಚಿ ಮರೆಯಾದ ಮೈಯುಳ್ಳ, ಉಗುರೂ ದಂತಗಳೂ ಹೊರತು ಉಳಿದ ಭಾಗವೆಲ್ಲ ಒಂದೇ ನೀಲವರ್ಣ ವಾಗಿರುವ ಒಂದು ಆನೆಯನ್ನು ಕಂಡೆ" ಎಂದು ಹೇಳಿದನಲ್ಲವೇ ?

ಹಂಸಕ—ಏನು ! ಇದು ಆರ್ಯನಿಗೆ ತಿಳಿದೇ ಇದೆಯೇ ? ಜಾಗರೂಕನಾಗಿರು ವಾಗಲೇ ಈ ಅನರ್ಥವಾದಂತಾಯಿತು.

ಯೌಗಂಧರಾಯಣ—ಹಂಸಕ, ಜಾಗರೂಕನಿಗಿಂತಲೂ ಬಲವತ್ತರವಾದದ್ದು ವಿಧಿ. ಆಮೇಲಾಮೇಲೆ ?

ಹಂಸಕ—ಆ ಮೇಲೆ ನೂರು ಹೊನ್ನು ಕೊಟ್ಟು ಆ ನೀಚನಿಗೆ ಮರ್ಯಾದೆಮಾಡಿ, ಪ್ರಭು ಎಂದರು : "ಇದು ಹಸ್ತಿಶಿಕ್ಷೆಯಲ್ಲಿ ನೀಲಕುವಲಯತನುವೆಂದು ಹೇಳಿರುವ ಚಕ್ರವರ್ತಿಲಕ್ಷಣದ ಆನೆ. ಆದ್ದರಿಂದ ನೀವು ಜೋಕೆಯಿಂದ ಈ ಹಿಂಡನ್ನು ನೋಡಿಕೊಳ್ಳುತ್ತಿರಿ. ನಾನು ವೀಣೆಯನ್ನು ತೆಗೆದುಕೊಂಡು ಹೋಗಿ ಆ ಆನೆಯನ್ನು ತರುತ್ತೇನೆ" ಎಂದು.

ಯೌಗಂಧರಾಯಣ—ಆಗ ರುಮಣ್ವಂತನೇಕೆ ಸ್ವಾಮಿಯನ್ನು (ತಡೆಯದೆ) ಉಪೇ ಕ್ಷಿಸಿದನು ?

ಹಂಸಕ—ಇಲ್ಲ, ಇಲ್ಲ. ಅಮಾತ್ಯನು ಒಳ್ಳೆಯ ಮಾತಿನಲ್ಲಿ ಹೇಳಿಕೊಳ್ಳುತ್ತಾ ಪ್ರಭುವನ್ನು ಕುರಿತು—"ಐರಾವಣವೇ ಮೊದಲಾದ ದಿಗ್ಗಜಗಳನ್ನು ಕೂಡ ಹಿಡಿದು ತರುವುದೂ ನಿಮಗೆ ಅಸಂಭವವಲ್ಲ. ಆದರೂ ಕೆಲವು ಸ್ಥಳಗಳು ಸುರಕ್ಷಿತವಲ್ಲವಾದ್ದರಿಂದ ಅಪಾಯಕರವಾಗಿವೆ. ಅದರಲ್ಲಿಯೂ ಗಡಿನಾಡಿನ ಜನರು ಲಜ್ಜೆಯಿಲ್ಲದವರು, ಅನಾಗರಿಕರು. ಆದ್ದರಿಂದ ಈ ಹಿಂಡನ್ನು ನೋಡಿಕೊಳ್ಳುವುದಕ್ಕೆ ಕಾಲಾಳುಗಳನ್ನು ಮಾತ್ರ ಇಲ್ಲಿ ಬಿಟ್ಟು, ನಾವೆಲ್ಲರೂ ಹೋಗೋಣ. ಸ್ವಾಮಿಯೊಬ್ಬರೇ ಒಂಟಿಯಾಗಿ ಹೋಗಲಾಗದು" ಎಂದು ವಿಜ್ಞಾಪಿಸಿದನು

ಯೌಗಂಧರಾಯಣ—ರುಮಣ್ವಂತನು ಎಲ್ಲರೆದುರಿಗೂ ಸ್ವಾಮಿಗೆ ಹೀಗೆ ಹೇಳಿದನೇ ? [7]ಹೀಗಿದ್ದರೂ ಕೂಡ ಸ್ವಾಮಿಭಕ್ತಿ ನಿಂದೆಗೆ ಸಿಕ್ಕದಂತಿರಬೇಕೆಂದು ಅಪೇಕ್ಷಿಸುತ್ತೇನೆ. ಆಮೇಲಾಮೇಲೆ ?

ಹಂಸಕ—ಆಮೇಲೆ, ತನ್ನ ಜೀವದ ಮೇಲೆ ಆಣೆಯಿಟ್ಟುಕೊಂಡು ಅಮಾತ್ಯನನ್ನು ಹಿಂದಿರುಗಿಸಿ, ನೀಲಬಲಾಹಕವೆಂಬ ಆನೆಯಿಂದಿಳಿದು ಸುಂದರಪಾಟಲವೆಂಬ ಕುದುರೆಯನ್ನೇರಿ, ಸೂರ್ಯನಿನ್ನೂ ನೆತ್ತಿಯ ಮೇಲೆ ಬರುವುದಕ್ಕಿಂತ ಮೊದಲೇ ಇಪ್ಪತ್ತು ಜನ ಪದಾತಿಗಳನ್ನು ಮಾತ್ರ ಒಡಗೊಂಡು ಸ್ವಾಮಿ ಪ್ರಯಾಣಮಾಡಿದರು.

ಯೌಗಂಧರಾಯಣ—ವಿಜಯಕ್ಕಾಗಿ.—ಅಯ್ಯೋ, ಅದೃಷ್ಟವೇ! (ಆನೆ ಹಿಡಿಯಬೇಕೆಂಬ) [8]ಆಸಕ್ತಿಯಿಂದ ಹಿಂದಿನ ಸಂಗತಿಯನ್ನು ನೋಡಲಿಲ್ಲ. ಆಮೇಲಾಮೇಲೆ ?

ಹಂಸಕ—ಆ ಮೇಲೆ ಸುಮಾರು ಎರಡರಷ್ಟು ದಾರಿ ನಡೆದು (ಹೋಗಲು), ನೂರೇ ನೂರು ಬಿಲ್ಲಿನಷ್ಟು ಹತ್ತಿರದಲ್ಲಿ, ಸಾಲವೃಕ್ಷದ ನೆರಳಿನಲ್ಲಿ ಪ್ರತ್ಯೇಕಿಸಿ ತಿಳಿಯಲಾಗದಂತೆ ಒಂದೇ ಬಗೆಯ ನೀಲಿಯ ಮೈ ಬಣ್ಣವುಳ್ಳದ್ದರಿಂದ, ಶರೀರವೇ ಇಲ್ಲದೆ ಹಾಗೆಯೇ ತಂದಿಟ್ಟಂತೆ ತೋರುತ್ತ ಹೊಳೆಹೊಳೆಯುತ್ತಿದ್ದ ಜೋಡಿ ದಂತಗಳಿಂದ ಸೂಚಿತವಾದ ಆ ದಿವ್ಯಗಜದ ಮೂರ್ತಿ ಕಂಡಿತು.

ಯೌಗಂಧರಾಯಣ—ಹಂಸಕ, ನಮ್ಮ ಸಂಕಟವೇ ಹಾಗೆ ಕಾಣಿಸಿಕೊಂಡಿತೆನ್ನು ! ಆಮೇಲಾಮೇಲೆ ?

ಹಂಸಕ—ಆ ಮೇಲೆ ಪ್ರಭು ಕುದುರೆಯಿಂದಿಳಿದು ಬಂದು, ದೇವತೆಗಳಿಗೆ ನಮಸ್ಕಾರ ಮಾಡಿ, ವೀಣೆಯನ್ನು ತೆಗೆದುಕೊಂಡರು. ಅಷ್ಟರಲ್ಲಿ ಹಿಂದುಗಡೆ ಒಂದೇ ನಿಶ್ಚಯದಿಂದ ಮಾಡುತ್ತಿದ್ದಂತೆ ದೊಡ್ಡ ಆರ್ಭಟವೆದ್ದಿತು.

ಯೌಗಂಧರಾಯಣ—ಆರ್ಭಟವೇ ? ಆಮೇಲಾಮೇಲೆ ?

ಹಂಸಕ—ಆರ್ಭಟವೇನೆಂದು ತಿಳಿಯುವುದಕ್ಕಾಗಿ ನಾವೆಲ್ಲ (ಆ ಕಡೆ) ತಿರುಗಿದೆವು. ಆಗ ಮಾವುತರಿಂದಲೂ ಆಯುಧಧಾರಿಗಳಾದ ದಂಡಾಳುಗಳಿಂದಲೂ ತುಂಬಿದ ಆ ಕೃತಕ ಗಜ (ಪ್ರಭುವಿನ ಮೇಲೆ) ಸಾಗಿ ಬಂತು.

ಯೌಗಂಧರಾಯಣ—ಆಮೇಲಾಮೇಲೆ ?

ಹಂಸಕ—ಆಗ ಕುಲಪುತ್ರ(ರಾಜಕುಮಾರ)ರನ್ನೆಲ್ಲ ಹೆಸರು ಗೋತ್ರ ಹಿಡಿದು ಕರೆದು ಹುರಿದುಂಬಿಸುತ್ತಾ, "ಖಂಡಿತವಾಗಿಯೂ ಇದು ಪ್ರದ್ಯೋತನ ಕೆಲಸ. ಎಲ್ಲರೂ ನನ್ನನ್ನು ಅನುಸರಿಸಿ ಬನ್ನಿ. ಈಗ ನಾನು ಪ್ರಾರಂಭದಲ್ಲಿ ವಿಷಮವಾಗಿ ಕಾಣುವ ಶತ್ರುವಿನ ಈ ಹೂಟವನ್ನು (ನನ್ನ) ಪರಾಕ್ರಮದಿಂದ ಸಮಮಾಡಿ ಬಿಡುತ್ತೇನೆ" ಎಂದು ನುಡಿದು, ಪ್ರಭು ಆ ಶತ್ರುಸೈನ್ಯದೊಳಕ್ಕೆ ನುಗ್ಗಿಯೇ ಬಿಟ್ಟರು.

ಯೌಗಂಧರಾಯಣ—ನುಗ್ಗಿಯೇ ಬಿಟ್ಟರೇ ! ಅಥವಾ ಅದೇ ಸರಿ.

ವಂಚನೆಗೆ ಗುರಿಯಾಗಿ ನಾಚಿದವನಭಿಮಾನಿ,
ಸತ್ತ್ವವಂತನು ಶೂರನೊಂದೆ ನೆಲೆ ಮುಂದಿರಲ
ದಿನ್ನೇನ ಮಾಳ್ಪನವನು ? || ೭ ||

ಆಮೇಲಾಮೇಲೆ ?

ಹಂಸಕ—ಆ ಮೇಲೆ ತಮ್ಮ ಇಷ್ಟಾನುಸಾರವಾಗಿ ನಡೆಯುವ ಸುಂದರಪಾಟಲವೆಂಬ ಕುದುರೆಯೊಡನೆ ಆಟವಾಡುತ್ತಿರುವರೆಂಬಂತೆ, ಮನಸ್ಸಿನ ಆಸೆಗಿಂತಲೂ ಮಿಗಿಲಾಗಿ (ಹಗೆಗಳನ್ನು) ಸದೆಬಡಿಯುತ್ತ, ಎದುರುಪಡೆ ಬಹಳ ಹೆಚ್ಚಾದ್ದರಿಂದ ಮಿತಿಮೀರಿ ಸಾಹಸಮಾಡಿ ಹೆಣಗುತ್ತ, ಪರಿಜನರೆಲ್ಲರೂ ಖೇದಗೊಂಡು ಬಳಲಿ ಬೀಳಲು ನನ್ನೊಬ್ಬನಿಂದ ಮಾತ್ರ—ಅಲ್ಲ ಅಲ್ಲ, ತಮ್ಮಿಂದ ತಾವೇ—ರಕ್ಷಿತರಾಗಿ, ಎಡೆಬಿಡದೆ ಹಗಲೆಲ್ಲ ಹೋರಾಡಿ ದಣಿದು, ಲೆಕ್ಕವಿಲ್ಲದಷ್ಟು ಏಟುಬಿದ್ದು ಕುದುರೆ ಕೆಳಕ್ಕುರುಳಲು, ಕಳೆಗುಂದುತ್ತಿರುವ ಸೂರ್ಯನಿಂದ ಭಯಂಕರವಾದ (ಸಂಜೆಯ) ಸಮಯದಲ್ಲಿ ಪ್ರಭು ಮೂರ್ಛೆ ಹೊಂದಿದರು.

ಯೌಗಂಧರಾಯಣ—ಏನು, ಸ್ವಾಮಿ ಮೂರ್ಛೆಹೋದರೇ ? ಆಮೇಲಾಮೇಲೆ ?

ಹಂಸಕ—ಆಗ (ಶತ್ರುಸೈನಿಕರು) ಹತ್ತಿರದ ಅಡವಿಯಿಂದ ಹೆಸರಿಲ್ಲದ ಯಾವ ಯಾವುವೋ ಕರ್ಕಶವಾದ ಹಂಬುಗಳನ್ನು ತಮ್ಮ ಕೈಲಾದಷ್ಟು ಕಿತ್ತು ತಂದು ಅವುಗಳಿಂದ ಸಾಮಾನ್ಯನಂತೆ ಮೈ ಕೈ ಕಟ್ಟಿಹಾಕಿ ಪ್ರಭುವಿನ ಮೇಲೆ ಧಾರ್ಷ್ಟ್ಯ ತೋರಿಸಿದರು.

ಯೌಗಂಧರಾಯಣ—ಏನು, ಸ್ವಾಮಿಗೆ ಧಾರ್ಷ್ಟ್ಯ ತೋರಿಸಿದರೇ ?

ಭುಜತುಂಬಿ ಕಂಡಗಳು ಸೆಳೆದುಬ್ಬಿ ಸೊಂಡಿಲಾಕೃತಿಯಾಂತ,
ಬಿಲ್ಮಿಡಿದು ವೇಗವನು ನೆರೆತುಂಬುತಂಬುಗಳ ಮಿಗೆ ಕರೆವ,
ಪಾರ್ವರನು ಪೂಜಿಸುವ, ಶ್ರಮಗಳಲಿ ಹಿತವರನು ತಕ್ಕೆಗಳ
ಲಾದರಿಪ, ತೋಳ್ಗಳಿಗೆ ಕಡಗದೆಡೆ ಕಟ್ಟುಗಳನಿಟ್ಟುದಾಯ್ತೇ ! || ೮ ||

ಆಗಲಿ, ಸ್ವಾಮಿ ಮತ್ತೆ ಎಚ್ಚತ್ತದ್ದು ಯಾವಾಗ ?

ಹಂಸಕ—ಆರ್ಯ, ಆ ಪಾಪಿಗಳ ಅವಿನಯ ಮುಗಿದ ಮೇಲೆ.

ಯೌಗಂಧರಾಯಣ—ಸದ್ಯ, ಶರೀರಕ್ಕೆ ಮಾತ್ರ ಅವಮಾನವಾದ ಹಾಗಾಯಿತು ; ಕೆಚ್ಚಿಗಲ್ಲ ! ಆಮೇಲಾಮೇಲೆ ?

ಹಂಸಕ—ಆ ಮೇಲೆ (ಮೂರ್ಛೆ ತಿಳಿದು) ಎಚ್ಚರಗೊಂಡ ಪ್ರಭುವನ್ನು ನೋಡಿ, "ಇವನಿಂದ ನನ್ನ ಒಡಹುಟ್ಟಿದವನು ಸತ್ತ, ಇವನಿಂದ ನನ್ನ ತಂದೆ ಸತ್ತ, ಇವನಿಂದ ನನ್ನ ಮಗ, ನನ್ನ ಜೊತೆಗಾರ" ಎಂದು ಮುಂತಾಗಿ ವಿಚಿತ್ರ ರೀತಿಯಿಂದ ಪ್ರಭುವಿನ ಪರಾಕ್ರಮವನ್ನು ವರ್ಣಿಸುತ್ತಾ ಆ ಪಾಪಿಗಳು [1]ದಿಕ್ಕಾಪಾಲಾಗಿ ಓಡಿಹೋದರು.

ಯೌಗಂಧರಾಯಣ—ಆಮೇಲಾಮೇಲೆ ?

ಹಂಸಕ—ಇದಿನ್ನೊಂದಾಶ್ಚರ್ಯ. (ನೀನು ಮಾಡು, ನೀನು ಮಾಡು ಎಂದು) ಅವರವರಲ್ಲೇ ಒಬ್ಬರನ್ನೊಬ್ಬರು ಪ್ರೇರಿಸಿದ್ದರ ಫಲವಾಗಿ ಒಬ್ಬನು ಸಲ್ಲದ ಕಾರ್ಯಕ್ಕೆ ಕೈಹಾಕಿದನು. ಅವನು ಪ್ರಭುವನ್ನು ದಕ್ಷಿಣಾಭಿಮುಖವಾಗಿ ತಿರುಗಿಸಿ, ಯುದ್ಧದ ಪರಿಶ್ರಮದಿಂದ ಚೆದರಿದ ಕೂದಲನ್ನು ಒರಟೊರಟಾಗಿ ಒಟ್ಟುಗೂಡಿಸಿ ಕಟ್ಟಿ, ಕೈಯಲ್ಲಿ ಕತ್ತಿಯನ್ನು ಭದ್ರವಾಗಿ ಹಿಡಿದುಕೊಂಡು, ಏಟಿನ ರಭಸವನ್ನು ಹೆಚ್ಚಿಸುವುದಕ್ಕಾಗಿ ಓಡಿಬರುತ್ತಾ....

ಯೌಗಂಧರಾಯಣ—ಹಂಸಕ, ವೃತ್ತಾಂತವನ್ನು (ಸ್ವಲ್ಪ) ನಿಲ್ಲಿಸು ; ಸ್ವಲ್ಪ ಉಸಿರೆಳೆದುಕೊಳ್ಳುತ್ತೇನೆ.

ಹಂಸಕ—ಆಗ ರಕ್ತಸುರಿದು ಕೆಸರಾದ ನೆಲದಲ್ಲಿ ತನ್ನ ವೇಗದಿಂದಲೇ ಕಾಲುಜಾರಿ ಆ ಚಂಡಾಲನು ಕೆಲಸಗೆಟ್ಟು ಸತ್ತುಬಿದ್ದನು.

**ಯೌಗಂಧರಾಯಣ**—ಬಿದ್ದನೇ ಆ ಪಾಪಿ? ಓಹೋ,

ಪರರು ತುಡುಕದ ಹಾಗೆ
ಧರ್ಮ ತೊಡಕದ ಹಾಗೆ
ಪೊರೆದ ಧರೆ, ಕೇಡಡಸ
ಲಾಳ್ದನಸು ಪೊರೆವಳಹುದು. || ೯ ||

**ಹಂಸಕ**—ಆಗ, ಮೊದಲೇ ಒಡೆಯನ ಕುಂತದೇಟಿನಿಂದ ಮೂರ್ಛೆಬಿದ್ದಿದ್ದ ಶಾಲಂಕಾಯನನೆಂಬ ಪ್ರದ್ಯೋತನ ಅಮಾತ್ಯನು "ಬೇಡ, ಬೇಡ ಸಾಹಸ" ಎಂದು ಹೇಳುತ್ತಾ ಆ ಬಳಿಗೆ ಬಂದನು.

**ಯೌಗಂಧರಾಯಣ**—ಆಮೇಲಾಮೇಲೆ?

**ಹಂಸಕ**—ಆ ಮೇಲೆ ಆತನು ಅಂಥ ಕಾಲದಲ್ಲಿ ದುರ್ಲಭವಾದ ಪ್ರಣಾಮವನ್ನು ಮಾಡಿ ಒಡೆಯನ ಮೈಗೆ ಬಿಗಿದಿದ್ದ ಕಟ್ಟುಗಳನ್ನು ಬಿಚ್ಚಿಸಿದನು.

**ಯೌಗಂಧರಾಯಣ**—ಸ್ವಾಮಿಯ ಕಟ್ಟು ಬಿಚ್ಚಿಸಿದನೇ? ಭಲೆ ಶಾಲಂಕಾಯನ, ಭಲೆ! ದುರವಸ್ಥೆ ಹಗೆಯನ್ನೂ ಹಿತವನನ್ನಾಗಿ ಮಾರ್ಪಡಿಸುತ್ತದೆ. ಹಂಸಕ, ನನ್ನ ಮನಸ್ಸಿನ ದುಃಖ ಸ್ವಲ್ಪ ಇಳಿದಂತಿದೆ. ಆ ಮೇಲೆ ಆ ಸಾಧುವೇನು ಮಾಡಿದನು?

**ಹಂಸಕ**—ಆ ಮೇಲೆ ಆ ಆರ್ಯನು ಉಪಚಾರಪೂರ್ವಕವಾಗಿ ಅನೇಕ ಸಮಾಧಾನದ ಮಾತುಗಳನ್ನಾಡಿ, ಬಲವಾದ ಬಹಳ ಪಟುಬಿದ್ದು ವಾಹನವನ್ನೇರಲು ಅಸಮರ್ಥನಾಗಿರುವನೆಂದು *ಹೆಗಲುಮಂಚದಲ್ಲಿ ಮಲಗಿಸಿಕೊಂಡು ಪ್ರಭುವನ್ನು ಉಜ್ಜಯಿನಿಗೇ ಕರೆದುಕೊಂಡುಹೋದನು.

**ಯೌಗಂಧರಾಯಣ**—ಸ್ವಾಮಿಯನ್ನು ಕೊಂಡುಹೋದರೇ! ಇದು, ಆ ಅನರ್ಥ:

ಇದುವೆ ನಮಗಾ ಕೇಡು. ಇದುವೆ ಪ್ರದ್ಯೋತನಾ
ಹೆಬ್ಬಯಕೆ. ಮಾನಧನನೆಮ್ಮರಸನದರಿಂದ
ದುಃಖಗಳ ಪಡೆಯುವನು ತಾನು. || ೧೦ ||

---

* "ಸ್ಕಂಧಶಯನಂ." ದೋಲಿಯಿರಬಹುದೆ?

ಅಲ್ಲದೆ,

ದೊರೆ ಮುನ್ನ ಗಣಿಸದನ ತಾನೆಂತು ನೋಡುವನೊ,
ಹೇಡಿನುಡಿಗಳನೆಂತು ನುಡಿಜಾಣ ಕೇಳುವನೊ,
ಗುರಿಮುಟ್ಟದಾ ಬರಡುಸಿಟ್ಟೆಂತು ತಾಳುವನೊ,
ಮನ್ನಿಸಲಿ ಧರ್ಷಿಸಲಿ ಸೆರೆಯಾಳು ಕೀಳ್ಪಡುವನು. || ೧೧ ||

(ಪ್ರವೇಶಿಸಿ)

ಪ್ರತೀಹಾರಿ—ಆರ್ಯ, ಇಗೋ ರಕ್ಷಾಸೂತ್ರ.

ಯೌಗಂಧರಾಯಣ—

ಕಾಲ ಮೀರಿದ ಮೇಲೆ ಬರಿದೆ ದೊರೆಕೊಂಡವಿವು
ಮುರಿದಿರಲು ನಮ್ಮ ಭಾಗ್ಯ !
ಕುದುರೆಗಾರತಿಯೆತ್ತೆ, ಕದನ ಮುಗಿದಾ ಬಳಿಕ
ಮಂಗಳಗಳೊದಗಿದಂತೆ. || ೧೨ ||

ಪ್ರತೀಹಾರಿ—ಆರ್ಯ, ಇಗೋ, ರಕ್ಷಾಸೂತ್ರ.

ಯೌಗಂಧರಾಯಣ—ವಿಜಯೇ, ಅಲ್ಲಿರಲಿ.

ಪ್ರತೀಹಾರಿ—ರಾಜಮಾತೆಗೆ ಏನೆಂದು ಬಿನ್ನವಿಸಲಿ ?

ಯೌಗಂಧರಾಯಣ—ವಿಜಯೇ, ಇದು ಹೀಗೆ.

ವಿಜಯೆ—ಏನು, ಇದು ?

ಯೌಗಂಧರಾಯಣ—ಇದು,

ವಿಜಯೆ—ಹೇಳಿ, ಹೇಳಿ, ಆರ್ಯ, ಹೇಳಿಬಿಡಿ.

ಯೌಗಂಧರಾಯಣ—ಅಲ್ಲದೆ, ಇದನ್ನು ಹೇಳದಿರುವುದಕ್ಕೆ ಶಕ್ಯವಿಲ್ಲ. ಆಕೆಗೆ ತಿಳಿಸಿಯೇ ಬಿಡುವೆನು. ವಿಜಯೇ, ಮನಸ್ಸು ಗಟ್ಟಿಮಾಡಿಕೊ. (ಕಿವಿಯಲ್ಲಿ) ಹೀಗಾಯಿತು.

ಪ್ರತೀಹಾರಿ—ಹಾ !

ಯೌಗಂಧರಾಯಣ—ನೀನು ವಿಜಯೆಯಲ್ಲವೇ ?

ಪ್ರತೀಹಾರಿ—ನಾನು ಭಾಗ್ಯಹೀನೆ, ಇನ್ನು ಹೋಗುತ್ತೇನೆ.

ಯೌಗಂಧರಾಯಣ—ವಿಜಯೇ, ರಾಜಮಾತೆಗೆ ಸ್ವಾಮಿ ಸೆರೆಸಿಕ್ಕಿದರೆಂದು ತಟಕ್ಕನೆ ತಿಳಿಸಿಬಿಡಬೇಡ. ಪ್ರೀತಿಯಿಂದ ದುರ್ಬಲವಾದದ್ದು ತಾಯ ಹೃದಯ. ಅದನ್ನು ಕಾಪಾಡಬೇಕು.

ಪ್ರತೀಹಾರಿ—ಈಗ ಹೇಗೆ ಹೇಳಲಿ ?

ಯೌಗಂಧರಾಯಣ—ಕೇಳು,

ಸಂಶಯವ ಮೂಡಿಸುವ ಯುದ್ಧದೋಷಗಳ ನೀ
ಮೊದಲು ವರ್ಣಿಸು. ಬಳಿಕ ಸಂದೇಹ ತಲೆದೋರಿ
ಕೇಡನೇ ಚಿಂತಿಸುತ ಶೋಕ ಬೇರೂರಿರಲು,
ನಡೆದ ಕಾರ್ಯದ ಪರಿಯನಾಗ ಬಿನ್ನವಿಸು. || ೧೩ ||

ಪ್ರತೀಹಾರಿ—ತಿಳಿಯಿತು. (ಹೋಗುತ್ತಾಳೆ.)

ಯೌಗಂಧರಾಯಣ—ಹಂಸಕ, ಈ ಸಮಯದಲ್ಲಿ ನೀನೇಕೆ ಸ್ವಾಮಿಯೊಡನೆ ಹೋಗಲಿಲ್ಲ ?

ಹಂಸಕ—ಆರ್ಯ, (ಹಿಂಬಾಲಿಸಿ) ಕೃತಾರ್ಥನಾಗಲು ನಾನೇನೋ ಪ್ರಯತ್ನ ಮಾಡಿದೆನು. (ಆದರೆ) ಸಾಲಂಕಾಯನನು "ಹೋಗು, ಈ ಸಂಗತಿಯನ್ನು ಕೌಶಾಂಬಿಯಲ್ಲಿ ತಿಳಿಸು" ಎಂದು ಅಪ್ಪಣೆಮಾಡಿದನು.

ಯೌಗಂಧರಾಯಣ—ಬೆಂಬತ್ತುವುದರಲ್ಲಿ (ನಮಗೆ) ನಿರಾಶೆ ಹುಟ್ಟಿಸಬೇಕೆಂದು ಬಯಸಿದ್ದಾನು. ಅಥವಾ ನಚ್ಚಿನಾಳು ಹತ್ತಿರಿರಬಾರದೆಂದು ತಪ್ಪಿಸಿರಬಹುದು.

ಹಂಸಕ—ಇರಬಹುದು.

ಯೌಗಂಧರಾಯಣ—[10]ಅವನು ತನ್ನ ಗರ್ವವನ್ನು ತೋರಿಸಿಕೊಳ್ಳುತ್ತಿದ್ದಾನೆ. ಇಲ್ಲದಿದ್ದರೆ, ತನ್ನ ಕೆಲಸವೆಲ್ಲ ಕೈಗೂಡಿ ಬಂತೆಂದು ಆನಂದಪಡುತ್ತಿದ್ದಾನೆ. ಅದಿರಲಿ, ಸ್ವಾಮಿ ನನಗೇನೂ ಹೇಳಲಿಲ್ಲವೇ ?

ಹಂಸಕ—ಆರ್ಯ, ಹೇಳಿದರು. ನಾನು ಒಡೆಯನನ್ನು ಪ್ರದಕ್ಷಿಣೆ ಮಾಡುತ್ತಿರುವಾಗ ಕಣ್ಣೀರೊತ್ತಿಬಂದ ದೃಷ್ಟಿಯಿಂದ ಎಷ್ಟೋ ಮಾತುಗಳನ್ನು ಹೇಳಿಕಳುಹಿಸಬೇಕೆಂದಿರುವವನಂತೆ ತೋರುತ್ತಾ ಪ್ರಭು ಹೇಳಿದರು—"ಹೋಗು, ಯೌಗಂಧ—" (ಎಂದು ಅರ್ಧದಲ್ಲೇ ನಿಲ್ಲಿಸುತ್ತಾನೆ.)

ಯೌಗಂಧರಾಯಣ—ಅಳುಕದೆ ಹೇಳು. ಇದು ಸ್ವಾಮಿಯ ಮಾತು.

ಹಂಸಕ—"ಯೌಗಂಧರಾಯಣನನ್ನು ಕಾಣು" ಎಂದರು.

ಯೌಗಂಧರಾಯಣ—ಹಾಗಿರಲಾರದು. ಸಚಿವಮಂಡಲವನ್ನೆಲ್ಲಾ ಮೀರಿ ಯೌಗಂಧರಾಯಣನೊಬ್ಬನನ್ನೇ ನೋಡೆಂದು ಹೇಳಿದರೆ?

ಹಂಸಕ—ಹೂಂ.

ಯೌಗಂಧರಾಯಣ—[11]ಹಾಗಾದರೆ, ತಕ್ಕ ಪ್ರತಿಹೂಟ ಹೂಡದ, ವ್ಯರ್ಥವಾಗಿ ಒಡೆಯನ ಅನ್ನವನ್ನುಂಡಿರುವ, ಸುಮ್ಮಸುಮ್ಮನೆ ರಾಜಮರ್ಯಾದೆಯನ್ನು ಪಡೆದಿರುವ ನನ್ನನ್ನು ನೋಡಲು ಯೋಗ್ಯನೆಂದು ಸ್ವಾಮಿ ಭಾವಿಸಿದರೆ?

ಹಂಸಕ—ಹೌದು.

ಯೌಗಂಧರಾಯಣ—

ಬೇರೆರೂಪಾಂತೆನ್ನನರಿದೊರೆಯ ಪೊಳಲೊಳಗೊ,
ಸೆರೆಯಲೋ, ಕಾಡಿನಲೊ; ಅಳಿಯೆ ಸಮವೃತ್ತಿಯಲಿ
ಸತ್ತವನ ಸ್ವರ್ಗದಲೊ; ಗೆದ್ದೆನೆಂದೆಣಿಸುವಾ
ದೊರೆಯ ವಂಚಿಸಲಾಗ, ಮರಳಿ ರಾಜ್ಯವ ಪಡೆದು
ಮೆಚ್ಚಿಗೆಗೆ ತಕ್ಕನ್ನನಾದರದಿ ಪಕ್ಕದಲೊ,
ಕಾಣುವನು ಸ್ವಾಮಿ. || ೧೪ ||

(ನೇಪಥ್ಯದಲ್ಲಿ)

ಹಾ, ಹಾ! ಮಹಾರಾಜ!

ಯೌಗಂಧರಾಯಣ—ಈ ಹೆಂಗಸರು,

ಇಂತು ಕೈಲಾಪಂತು ಶೋಕವನು ತೊಡೆಯುವರು,
ಇಂತು ಮಂತ್ರಿಗಳಸಾಮರ್ಥ್ಯವನು ಬಣ್ಣಿಸುವರು. || ೧೫ ||

(ಪ್ರವೇಶಿಸಿ)

ಪ್ರತೀಹಾರಿ—ಆರ್ಯ, ರಾಜಮಾತೆಯವರು—

ಯೌಗಂಧರಾಯಣ—ಏನು, ಏನು?

ಪ್ರತೀಹಾರಿ—ಹೇಳಿದರು.

ಯೌಗಂಧರಾಯಣ—ಏನೆಂದು ?

ಪ್ರತೀಹಾರಿ—" ಇಂಥ (ಒಳ್ಳೆಯ) ಗೆಳೆಯರುಳ್ಳ ವತ್ಸರಾಜನಿಗೆ ಹೀಗಾಯಿತು ! (ಈಗ) ಪ್ರತಿಕ್ರಿಯೆ ಹೊರತು ಮತ್ತೇನು ತಾನೇ ಸಾಧ್ಯವಾದೀತು ? ಆದ್ದರಿಂದ ಹಿತವರನ್ನೆಲ್ಲ (ಕರಸಿಕೊಂಡು) ಸನ್ಮಾನಿಸಿ (ಮುಂದೆ ಮಾಡಬೇಕಾದುದನ್ನು) ಗೊತ್ತುಮಾಡಬೇಕು. ಯಾರು ಕಷ್ಟಗಳಲ್ಲಿ ಎದೆಗೆಡನೋ, ಯಾರು ವಿಷಮಸಂದರ್ಭಗಳಲ್ಲಿ ಸಿಕ್ಕಿಬಿದ್ದರೂ ಸುಮ್ಮನೆ ಕೂಡನೋ, ಮೋಸಹೋದರೂ ಮನಗುಂದನೋ, ಕೆಲಸ ಕೆಟ್ಟರೂ ಪ್ರಾಣಬಿಡನೋ, ನನ್ನ ಮಗನಿಗೆ ಮೊದಲು ಒಡನಾಡಿಯೂ ಆ ಮೇಲೆ ಮಂತ್ರಿಯೂ ಆಗಿ ನನಗೆ ಮಗನಂತಿರುವನೋ, ಆ ಬುದ್ಧಿವಂತ(ನಾದ ಯೌಗಂಧರಾಯಣ) ನನ್ನು 'ಮಗನೇ, ನನ್ನ ಮಗನನ್ನು ಕರೆದುಕೊಂಡು ಬಾ,' ಎಂದು ಕೇಳಿಕೊಳ್ಳುತ್ತೇನೆ " ಎಂದರು.

ಯೌಗಂಧರಾಯಣ—ಆಹಾ ! ರಾಜವಂಶಕ್ಕೆ ತಕ್ಕ ಧೀರವಾದ ಮಾತನ್ನೇ ಪೂಜ್ಯಳು ಆಡಿರುವಳು. ರಾಜಮಾತೆ ನನ್ನಲ್ಲಿಟ್ಟಿರುವ ಅಭಿಮಾನವನ್ನು (ಉಚಿತ ರೀತಿಯಿಂದ) ಮನ್ನಿಸುತ್ತೇನೆ. ವಿಜಯೇ, ನೀರು ತೆಗೆದುಕೊಂಡು ಬಾ.

ಪ್ರತೀಹಾರಿ—ಆರ್ಯ, ಆಗಲಿ. (ಹೋಗಿ, ಬಂದು) ಇಗೋ ನೀರು.

ಯೌಗಂಧರಾಯಣ—ತಾ ಇಲ್ಲಿ. (ಆಚಮನ ಮಾಡಿ) ವಿಜಯೇ, ರಾಣಿಯವರು ಏನು ಹೇಳಿದರು ?

ಪ್ರತೀಹಾರಿ—" ಮಗನೇ, ನನ್ನ ಮಗನನ್ನು ಕರೆದುಕೊಂಡು ಬಾ " ಎಂದು.

ಯೌಗಂಧರಾಯಣ—ಹಂಸಕ, ಸ್ವಾಮಿ ಏನು ಹೇಳಿದರು ?

ಹಂಸಕ—" ಯೌಗಂಧರಾಯಣನನ್ನು ನೋಡು " ಎಂದು.

ಯೌಗಂಧರಾಯಣ—ವಿಜಯೇ,

> ಶತ್ರುಬಲದಲಿ ಸಿಲ್ಕಿ ರಾಹು ತುಡುಕಿದ ಚಂದ್ರ
> ನಂತಿಹನು ; ಆ ದೊರೆಯ ಸೆರೆಯಿಂದ ಬಿಡಿಸದಿರೆ,
> ಯೌಗಂಧರಾಯಣನೆ ಅಲ್ಲ ನಾನು. || ೧೬ ||

ಪ್ರತೀಹಾರಿ—ಆರ್ಯ, ಹಾಗೆಯೇ ಸರಿ. (ಹೋಗುತ್ತಾಳೆ.)

(ಪ್ರವೇಶಿಸಿ)

ನಿರ್ಮುಂಡಕ—ಆರ್ಯ, (ಒಂದು) ಆಶ್ಚರ್ಯ ನಡೆಯಿತು. ಪ್ರಭುವಿನ ಶಾಂತಿಗಾಗಿ (ಏರ್ಪಡಿಸಿದ್ದ ಸಂತರ್ಪಣೆಯಲ್ಲಿ) ಭೋಜನಕ್ಕೆ ಕುಳಿತಿದ್ದ ಬ್ರಾಹ್ಮಣರನ್ನು ನೋಡಿ, ಹುಚ್ಚುವೇಷದ ಒಬ್ಬಾನೊಬ್ಬ ಬ್ರಾಹ್ಮಣನು ಗಟ್ಟಿಯಾಗಿ ನಕ್ಕು, "ತಾವೆಲ್ಲರೂ ಮನಬಂದಂತೆ ಯಥೇಚ್ಛವಾಗಿ ಊಟಮಾಡಿ. ಈ ರಾಜವಂಶಕ್ಕೆ ಮುಂದೆ ಏಳಿಗೆಯುಂಟಾಗುವುದು" ಎಂದು ನುಡಿದು, ಹಾಗೆ ಹೇಳಹೇಳುತ್ತಲೇ ಅದೃಶ್ಯನಾಗಿಬಿಟ್ಟನು.

ಯೌಗಂಧರಾಯಣ—ನಿಜವಾಗಿಯೂ ?

(ಬಳಿಕ ಬ್ರಾಹ್ಮಣನು ಪ್ರವೇಶಿಸುತ್ತಾನೆ.)

ಬ್ರಾಹ್ಮಣ—ಇವೇ ಆ ಪೂಜ್ಯನು ಧರಿಸಿದ್ದು ತನ್ನ ಕೆಲಸ ಮುಗಿದ ಬಳಿಕ ಬಿಚ್ಚಿ ಎಸೆದ ಉಡುಗೆಗಳು. ಇವುಗಳಿಂದ ಮೈಮರಸಿಕೊಂಡು ಭಗವಾನ್ ದ್ವೈಪಾಯನರು ಬಂದಿದ್ದರು.

ಯೌಗಂಧರಾಯಣ—ಹೀಗೋ. ದ್ವೈಪಾಯನರು ಬಂದಿದ್ದರೋ ?

ಬ್ರಾಹ್ಮಣ—ಹೌದು.

ಯೌಗಂಧರಾಯಣ—ಹಾಗಾದರೆ, ಇಲ್ಲಿ ತನ್ನಿ, ನೋಡೋಣ.

ಬ್ರಾಹ್ಮಣ—ಇಗೋ, ನೋಡಿ.

ಯೌಗಂಧರಾಯಣ—ಇದೇನು, ನನ್ನ ರೂಪವೇ ಬೇರೊಂದು ಪರಿಯಾದಂತಾಯಿತಲ್ಲಾ ! ಆಹಾ, ಈಗ ನಾನು ಸ್ವಾಮಿಯ ಬಳಿಗೇ ಹೋಗಿರುವಂತಿದೆ ! ನನಗೆ ಉಪದೇಶಮಾಡುವುದಕ್ಕಾಗಿಯೇ ಈಗ ಇವನ್ನು ಇಲ್ಲಿ ಬಿಟ್ಟು ಹೋಗಿರಬೇಕೆಂದು ತೋರುತ್ತದೆ.

ಹುಚ್ಚುವೇಷವನಿದನು ಧರಿಸಿ ಬಂದನು ಸಾಧು.
ಇದೆ ದೊರೆಯ ಬಿಡಿಸುವುದು. ನನ್ನಿರವ ಮಾರ್ಪಡಿಪುದು. ॥ ೧೭ ॥

(ಪ್ರವೇಶಿಸಿ)

ಪ್ರತೀಹಾರಿ—ಆರ್ಯ, ರಾಜಮಾತೆ ಹೇಳಿದರು—"ನನ್ನ ಮಗನನ್ನು ನೋಡ ಬಯಸುತ್ತೇನೆ" ಎಂದು.

ಯೌಗಂಧರಾಯಣ—ಇಗೋ ಬಂದೆ, ಬಂದೆ. ಆರ್ಯ, ಶಾಂತಿಗೃಹದಲ್ಲಿ ನನ್ನನ್ನು ನಿರೀಕ್ಷಿಸುತ್ತಿರಿ.

ಬ್ರಾಹ್ಮಣ—ಆಗಲಿ. (ಹೋಗುತ್ತಾನೆ.)

ಯೌಗಂಧರಾಯಣ—ಹಂಸಕ ಈಗ ವಿಶ್ರಮಿಸಿಕೊ.

ಹಂಸಕ—ಆರ್ಯ, ಅಪ್ಪಣೆ. (ಹೋಗುತ್ತಾನೆ.)

ಯೌಗಂಧರಾಯಣ—ವಿಜಯೇ, ಮುಂದೆ ನಡೆ.

ಪ್ರತೀಹಾರಿ—ಆರ್ಯ, ಆಗಲಿ.

ಯೌಗಂಧರಾಯಣ—ಆಹಾ !

ಕಡೆಕಡೆಯೆ ಮರಗೊರಡ, ಬೆಂಕಿ ತಾನುದಿಸುವುದು.
ಅಗೆಯುಗೆಯೆ ನೆಲನಸಮ ನೀರೊಗೆದು ಚಿಮ್ಮುವುದು.
ಉತ್ಸಾಹವಂತಂಗಸಾಧ್ಯವೆಂಬುದದಿಲ್ಲ.
ಸರಿದಾರಿಯಲಿ ಮಾಳ್ಪ ಯತ್ನ ಫಲಿಸುವುವೆಲ್ಲ. || ೧೮ ||

(ಹೊರಡುತ್ತಾರೆ.)

(ಮೊದಲನೆಯ ಅಂಕ ಮುಗಿಯಿತು.)

---

# ಎರಡನೆಯ ಅಂಕ

(ಬಳಿಕ ಕಾಂಚುಕೀಯನು ಪ್ರವೇಶಿಸುತ್ತಾನೆ)

**ಕಾಂಚುಕೀಯ**—ಆಭೀರಕ, ಆಭೀರಕ, ಹೋಗು; ಮಹಾಸೇನನ ಅಪ್ಪಣೆಯ ಪ್ರಕಾರ ದ್ವಾರಪಾಲಕನಿಗೆ ಹೀಗೆ ಹೇಳು—'ಕಾಶಿರಾಜನ ಉಪಾಧ್ಯಾಯನಾದ ಈ ಆರ್ಯ ಜೈವಂತಿಯು ದೂತನಾಗಿ ಬಂದಿದ್ದಾನೆ. ಸಾಮಾನ್ಯ ದೂತರಿಗೆ ಮಾಡುವ ಸತ್ಕಾರಗಳನ್ನು ಬಿಟ್ಟು ಈತನನ್ನು (ವಿಶೇಷ ರೀತಿಯಿಂದ ಸತ್ಕರಿಸಿ) ಸುಖವಾಗಿ ಇಳಿಸತಕ್ಕದ್ದು. ಅತಿಥಿಸತ್ಕಾರ ಚೆನ್ನಾಗಿ ನಡೆಯಿತೆಂದು ತಿಳಿಯುವಂತೆ ಪ್ರಯತ್ನಮಾಡಬೇಕು' ಎಂದು. ನೋಡಿ! ಹೀಗೆಯೇ ದಿನದಿನವೂ ಗೋತ್ರಾನುಕೂಲವುಳ್ಳ ರಾಜವಂಶಗಳವರು ಕನ್ಯೆಯನ್ನು ಕೇಳುವುದಕ್ಕಾಗಿ ದೂತರನ್ನು ಕಳುಹಿಸುತ್ತಲೇ ಇದ್ದಾರೆ. ಮಹಾಸೇನನಾದರೋ ಯಾರನ್ನೂ ತಿರಸ್ಕರಿಸುವುದೂ ಇಲ್ಲ, ಅನುಗ್ರಹಿಸುವುದೂ ಇಲ್ಲ. ಇದೇನಿದ್ದೀತು! ಅಥವಾ ಈ ಹೆಣ್ಣು ಕೊಡುವ ವಿಚಾರದಲ್ಲಿ ಅದೃಷ್ಟವೇ ಅಧಿಕಾರವುಳ್ಳದ್ದು. ಏಕೆಂದರೆ,

ಇವಳಾರ ಮಡದಿಯಾಗುವಳೆಂದು ವಿಧಿಯಿಹುದೊ
ಅವನಿಂದ ದೂತನಿನ್ನೂ ಬಂದುದಿಲ್ಲಹುದು.
ಅದರಿಂದ ನಮ್ಮಾಳ್ದನವನ ಬರವನೆ ಬಯಸಿ
ದೊರೆಗಳಲಿ ಗುಣವ ತಾನರಿತೊಡಂ ಗಣಿಸದಿಹನು. || ೧ ||

ಓಹೋ, ಅಂತಃಪುರದ ಸೇವಕರೆಲ್ಲರೂ (ಅಲ್ಲಲ್ಲೇ) ಅಡಗಿಕೊಳ್ಳುತ್ತಿರುವುದರಿಂದ ಈ ಸ್ಥಳಕ್ಕೆ ಒಡೆಯನು ಬಂದಂತಿದೆ. ಇಗೋ, ಇಲ್ಲಿಯೇ ಮಹಾಸೇನನು! ಇವನು

ಗರಿಕೆಕುಡಿಯಂತೊಗೆವ ನೀಲಮಣಿಕಿರಣಗಳು
ನಿಮಿರ್ವ ಹೊಂಗಡಗದಿಂದುಬ್ಬಿ ಬಲ್ದೋಳ್ ಮೆರೆಯೆ,
ಕನಕ ತಾಳಗಳಿಡಿದ ಬನದಿಂದ ಬರುತಿಹನು
ಶರವಣದಿನೆಯ್ತರ್ಪ ಕಾರ್ತಿಕೇಯನ ಹೋಲುತ. || ೨ ||

(ಹೋಗುತ್ತಾನೆ.)

**ವಿಷ್ಕಂಭಕ ಮುಗಿಯಿತು.**

(ಬಳಿಕ ಪರಿವಾರದೊಡನೆ ರಾಜನು ಪ್ರವೇಶಿಸುತ್ತಾನೆ.)

ರಾಜ— ಎನ್ನ ಶ್ವಖುರಪುಟಕೆ ಮೇಲೆದ್ದ ದೂಳನ್
ದೊರೆಗಳಾಂಪರ್ ದಾಸಭಾವದಲಿ ಮುಡಿಯೊಳ್.
ತಣಿಯೆ ನಾಂ ಗುಣಶಾಲಿಯಾ ವತ್ಸರಾಜನ್
ಹಸ್ತಿವಿದ್ಯಾಗರ್ವಿ ಮಣಿಯದಿರಲಿನ್ನುಂ. || ೩ ||

ಬಾದರಾಯಣ,

(ಪ್ರವೇಶಿಸಿ)

ಕಾಂಚುಕೀಯ—ಮಹಾಸೇನನಿಗೆ ಜಯವಾಗಲಿ.

ರಾಜ—ಜೈವಂತಿಯನ್ನು ಇಳಿಸಿ ಆಯಿತೋ ?

ಕಾಂಚುಕೀಯ—ಇಳಿಸಿ ಆಯಿತು. ಉಚಿತ ರೀತಿಯಲ್ಲಿ ಸತ್ಕಾರವನ್ನೂ ಮಾಡಲಾಯಿತು.

ರಾಜ—ರಾಜವಂಶದ ಗುಣವನ್ನರಿತು ಸತ್ಕಾರಮಾಡಿದ್ದು ನ್ಯಾಯವೇ ಆಯಿತು. ಬಂದವರನ್ನು ಆದರದಿಂದ ಬರಮಾಡಿಕೊಳ್ಳುವುದು ಯುಕ್ತವಾದದ್ದು. ಈಗ ಕನ್ಯಾದಾನದ ವಿಷಯದಲ್ಲಿ ಯಾರನ್ನು ಕೇಳಿದರೂ (ಎಲ್ಲರೂ) ಬೇರೆಯವರ ಅಭಿಪ್ರಾಯವನ್ನೇ ನಿರೀಕ್ಷಿಸುತ್ತಿರುವರು. (ಕಾಂಚುಕೀಯನನ್ನು ನೋಡಿ) ಬಾದರಾಯಣ, ನೀನು ಏನನ್ನೋ ಹೇಳಬೇಕೆಂದಿರುವಂತೆ ತೋರುವೆಯಲ್ಲಾ !

ಕಾಂಚುಕೀಯ—ಇನ್ನೇನೂ ಇಲ್ಲ. ಕನ್ಯಾದಾನ ಸಂಬಂಧವಾಗಿ ಒಂದು ಯೋಚನೆ ಹೊಳೆಯಿತು.

ರಾಜ—ಬೇಡ, ಬೇಡ, ಮುಚ್ಚಿಡಬೇಡ. ಇದು ಸರ್ವಸಾಧಾರಣವಾದ ವಿಷಯವೇ ತಾನೇ. ಹೇಳಿಬಿಡು.

ಕಾಂಚುಕೀಯ—ಮಹಾಸೇನ, ಇದೇ ನಾನು ಹೇಳಬೇಕೆಂದಿದ್ದದ್ದು—'ಹೀಗೆ ದಿನದಿನವೂ ಗೋತ್ರಾನುಕೂಲವುಳ್ಳ ರಾಜಕುಲಗಳಿಂದ ಹೆಣ್ಣು ಕೇಳುವುದಕ್ಕಾಗಿ ದೂತರು ಬರುತ್ತಲೇ ಇದ್ದಾರೆ. ಮಹಾಸೇನನಾದರೋ

ಯಾರನ್ನೂ ತಿರಸ್ಕರಿಸುವುದೂ ಇಲ್ಲ; ಅನುಗ್ರಹಿಸುವುದೂ ಇಲ್ಲ. ಇದೇ ನಿದ್ರೀತು?' ಎಂದು.

ರಾಜ—ಬಾದರಾಯಣ, ಹೌದು, ನಿಜ. ವರನ ಗುಣಗಳಲ್ಲಿ ಅತಿ ಲೋಭದಿಂದಲೂ ವಾಸವದತ್ತೆಯಲ್ಲಿ ಅತಿ ಪ್ರೀತಿಯಿಂದಲೂ ನಿಶ್ಚಯಕ್ಕೆ ಬರಲು ಅಶಕ್ತನಾಗಿದ್ದೇನೆ.

ಮೊದಲು ಬಯಸುವೆನಾನು ಹೆಸರಾಂತ ಕುಲವನ್,
ಮನದಿನೆಳಸುವೆನಾನು ಮೇಲಾದ ಕುಲವನ್.
ಬಳಿಕ ಅನುಕಂಪವನು ತಳೆದಿರುವ ಮನವನ್,
ಮೃದುಗುಣವಿದಾದೊಡಂ ಬಲಶಾಲಿಯುದರಿಂ.
ಬಳಿಕ ಕಣ್ಗಳ ಸೆಳೆವ ರೂಪದಾ ಸೊಬಗನ್,
ಗುಣಬುದ್ಧಿಯಿಂದಲ್ತು, ಪೆಣ್ಮನದ ಭಯದಿಂ.
ಬಳಿಕ ವೀರ್ಯಾಧಿಕಂ ತಾನೆನಿಪ ವರನನ್,
ಎಣಿಸೆ ಪೆಣ್ ಆಗಳುಂ ಪರಿಪಾಲ್ಯಳದರಿಂ. || ೪ ||

ಕಾಂಚುಕೀಯ—ಮಹಾಸೇನನನ್ನು ಬಿಟ್ಟರೆ ಮತ್ತೆಲ್ಲಿಯೂ ಈ ಗುಣಗಳೆಲ್ಲ ಈ ಕಾಲದಲ್ಲಿ ಒಂದೇ ಕಡೆ ಕಾಣಬರುವುದಿಲ್ಲ.

ರಾಜ—ಅದಕ್ಕೇ ತಾನೆ ಯೋಚನೆ.

ಕನ್ಯೆಗುತ್ತಮ ವರನು ದೊರೆಯುವುದು ಬಹುವಾಗಿ
ತಂದೆಯಾ ಯತ್ನದಿಂದ.
ಮಿಕ್ಕುದೋ ಅವರವರ ಪೂರ್ವಪುಣ್ಯಾದಧೀನ,
ಕಂಡುದಿದು, ಬೇರೆಯಿಲ್ಲ. || ೫ ||

ಮಗಳನ್ನು (ಮದುವೆಮಾಡಿ) ಕೊಡುವಾಗ ತಾಯಿಯರು ದುಃಖಕ್ಕೊಳಗಾಗುವುದು ಸಹಜವಷ್ಟೆ. ಆದ್ದರಿಂದ ದೇವಿಯನ್ನು ಸ್ವಲ್ಪ ಕರೆದುಕೊಂಡು ಬಾ.

ಕಾಂಚುಕೀಯ—ಮಹಾಸೇನನ ಅಪ್ಪಣೆಯ ಪ್ರಕಾರ. (ಹೋಗುತ್ತಾನೆ.)

ರಾಜ—ಆಹಾ! ಕಾಶಿರಾಜನು ದೂತನನ್ನು ಕಳುಹಿಸಿದ್ದರಿಂದ ವತ್ಸರಾಜನನ್ನು ಹಿಡಿತರುವುದಕ್ಕಾಗಿ ಹೋಗಿರುವ ಶಾಲಂಕಾಯನನ ಕಡೆಗೆ ನನ್ನ ಮನಸ್ಸು

ಹೋಗಿದೆ. ಆ ಬ್ರಾಹ್ಮಣನಿನ್ನೂ ಅದೇಕೆ ವರ್ತಮಾನವನ್ನು ಕಳುಹಿಸ ಲಿಲ್ಲವೋ ಕಾಣೆನಲ್ಲಾ !

ಆ ಲೀಲೆ, ತಡೆಯಿಲ್ಲದದರಲೇ ಮನವ ನೆಟ್ಟಿರುವನವನು.
ಅವನ ಆ ಮಂತ್ರಿಗಳೊ, ತಾವೆಲ್ಲ ಯತ್ನದಲೆ ತೊಡಗಿರುವರು. || ೬ ||

(ಬಳಿಕ ಪರಿವಾರದೊಡನೆ ದೇವಿ ಪ್ರವೇಶಿಸುತ್ತಾಳೆ.)

ದೇವಿ—ಮಹಾಸೇನನಿಗೆ ಜಯವಾಗಲಿ.

ರಾಜ—ಕುಳಿತುಕೊ.

ದೇವಿ—ಮಹಾಸೇನನ ಅಪ್ಪಣೆಯಂತಾಗಲಿ. (ಕುಳಿತುಕೊಳ್ಳುತ್ತಾಳೆ)

ರಾಜ—ವಾಸವದತ್ತೆಯೆಲ್ಲಿ ?

ದೇವಿ—ವೈತಾಳಿಕೆ ಉತ್ತರೆಯ ಹತ್ತಿರ ನಾರದೀಯ ವೀಣೆಯನ್ನು ಅಭ್ಯಾಸಮಾಡು ವುದಕ್ಕಾಗಿ ಹೋಗಿದ್ದಳು.

ರಾಜ—ಇವಳಿಗೆ ಗಾಂಧರ್ವವಿದ್ಯೆಯಲ್ಲಿ ಹೇಗೆ ಅಭಿಲಾಷೆ ಹುಟ್ಟಿತು ?

ದೇವಿ—ಯಾವುದೋ ಒಂದು ಸಂದರ್ಭದಲ್ಲಿ ಕಾಂಚನಮಾಲೆ ವೀಣೆಯನ್ನು ಕಲಿಯು ತ್ತಿದ್ದುದನ್ನು ಕಂಡು ತಾನೂ ಕಲಿಯಬೇಕೆಂದು ಆಸೆಪಟ್ಟಳು.

ರಾಜ—ಬಾಲ್ಯಕ್ಕೆ ಸಹಜವಾದದ್ದೇ.

ದೇವಿ—ಮಹಾಸೇನನಿಗೆ ಒಂದು ವಿಷಯವನ್ನು ವಿಜ್ಞಾಪಿಸಿಕೊಳ್ಳಬೇಕೆಂದಿದೇನೆ.

ರಾಜ—ಏನದು ?

ದೇವಿ—ಉಪಾಧ್ಯಾಯರು ಬೇಕೆಂದು.

ರಾಜ—ಮದುವೆಯ ಕಾಲ ಒದಗಿ ಬಂದಿರುವವಳಿಗೆ ಈಗ ಉಪಾಧ್ಯಾಯನಿಂದೇನು? ಗಂಡನೇ ಕಲಿಸಿಕೊಡುತ್ತಾನೆ.

ದೇವಿ—ಹಂ ! ಈಗಾಗಲೇ ನಮ್ಮ ಹುಡುಗಿಗೆ ಮದುವೆಯ ಕಾಲವೇ ?

ರಾಜ—ಏನು ! (ಮದುವೆಮಾಡಿ) ಕೊಡಬೇಕೆಂದು ನಿತ್ಯವೂ ನನ್ನನ್ನು ನಿರ್ಬಂಧಿಸು ತ್ತಿದ್ದು ಇದೇನು ಈಗ ಹೀಗೆ ವ್ಯಥೆಪಡುತ್ತಿರುವೆ ?

ದೇವಿ—ಕೊಡುವುದೇನೋ ನನಗೂ ಸಮ್ಮತ. ಆಗಲಿಕೆ ನನ್ನನ್ನು ದುಃಖಪಡಿಸುತ್ತದೆ. ಹಾಗಾದರೆ ಈಗ ಯಾರಿಗೆ ಕೊಟ್ಟಿತು ?

ರಾಜ—ಇನ್ನೂ ನಿಶ್ಚಯಕ್ಕೆ ಬಂದಿಲ್ಲ.

ದೇವಿ—ಈಗಲೂ ಇಲ್ಲವೇ ?

ರಾಜ—

ಕೊಡಲಿಲ್ಲವೆಂದೊಡನೆ ಲಜ್ಜೆಯನು ತಳೆದೆ ;
ಕೊಟ್ಟಾದುದೆಂದೆಣಿಸಿ ದುಃಖವನು ಪಡೆದೆ.
ಸ್ನೇಹಧರ್ಮಗಳೆರಡರಾ ನಡುವೆ ಸಿಲ್ಕಿ.
ತೊಳಲುವರು ತಾವಲ್ತೆ ತಾಯಿಯರು ಬಳ್ಕಿ. || ೭ ||

ಖಂಡಿತವಾಗಿಯೂ ವಾಸವದತ್ತೆ ಮಾವನನ್ನು ಉಪಚರಿಸಲು ಯೋಗ್ಯವಾದ ವಯಸ್ಸಿಗೆ ಬಂದಿದ್ದಾಳೆ. ಇನ್ನೊಂದು ವಿಷಯ. ಕಾಶಿರಾಜನ ಉಪಾಧ್ಯಾಯನಾದ ಆರ್ಯ ಜೈವಂತಿಯು ಈಗ ದೌತ್ಯಕ್ಕೆ ಬಂದು ಮೇಲಾದ ನಡತೆಯಿಂದ ನನ್ನ ಮನಸ್ಸನ್ನು ಮೋಹಗೊಳಿಸುತ್ತಿದ್ದಾನೆ. (ಆತ್ಮಗತವಾಗಿ) ಏನನ್ನೂ ಹೇಳಲಿಲ್ಲವಲ್ಲಾ ! ಮೊದಲೇ ಕಣ್ಣೀರು ಸುರಿಸುತ್ತಾ ಕಳವಳಗೊಂಡಿರುವವಳು ಹೇಗೆತಾನೇ ನಿಶ್ಚಯಕ್ಕೆ ಬಂದಾಳು ! ಆಗಲಿ, ಇವಳಿಗೆ ತಿಳಿಸಿಬಿಡುತ್ತೇನೆ. (ಪ್ರಕಾಶವಾಗಿ) ನಮಗೆ ತಿಳಿದಂತೆ, ನಮ್ಮೊಡನೆ ಸಂಬಂಧ ಬೆಳಸಬೇಕೆಂದು ಬಂದಿರುವ ರಾಜರಲ್ಲಿ. . . .

ದೇವಿ—ಹೆಚ್ಚು ಹೇಳಿದ್ದರಿಂದೇನು ? ಎಲ್ಲಿಗೆ ಕೊಟ್ಟರೆ ನಾವು ವ್ಯಥೆಪಡಬೇಕಾಗುವುದಿಲ್ಲವೋ ಅಲ್ಲಿಗೆ ಕೊಡಿ.

ರಾಜ—ಓಹೋ, ಈ ಕಷ್ಟದ ಕೆಲಸವನ್ನು ಹೇಳುವುದು ನಿನಗೆ ಈಗ ಬಹು ಸುಲಭವಾಗಿದೆ, ಆ ಮೇಲೆ ನಾನು ಆಕ್ಷೇಪಣೆ ಕೇಳುವುದಕ್ಕೆ. ಆದ್ದರಿಂದ ದೇವಿಯೇ ನಿಶ್ಚಯಮಾಡಬೇಕು. ಇಲ್ಲಿ ಕೇಳು,

ಕಾಶಿರಾಜನು, ವಾಂಗ ಸೌರಾಷ್ಟ್ರ ಮೈಥಿಲರು,
ಶೂರಸೇನನು, ನಮ್ಮ ಬಂಧುವಾ ಮಾಗಧನು,—
ಬಹು ಗುಣಗಳಿಂದೆನ್ನ ಮನವ ಮೋಹಿಸುತಿಹರು.
ಇವರೊಳಗದಾವ ದೊರೆ ತಕ್ಕವನು ? ಹೇಳು ನೀನು. || ೮ ||

(ಪ್ರವೇಶಿಸಿ)

ಕಾಂಚುಕೀಯ—ವತ್ಸರಾಜ.

ರಾಜ—ಏನು, ವತ್ಸರಾಜ?

ಕಾಂಚುಕೀಯ—ಪ್ರಸನ್ನನಾಗಬೇಕು, ಮಹಾಸೇನನು ಪ್ರಸನ್ನನಾಗಬೇಕು. ಪ್ರಿಯ ವಚನವನ್ನು ತಿಳಿಸುವ ಆತುರದಲ್ಲಿ ಕ್ರಮವನ್ನು ನೋಡಲಿಲ್ಲ.

ರಾಜ—ಪ್ರಿಯವಚನವನ್ನೇ?

ದೇವಿ—(ಎದ್ದು) ಮಹಾಸೇನನಿಗೆ ಜಯವಾಗಲಿ.

ರಾಜ—(ಹರ್ಷದಿಂದ) ಪ್ರಿಯವಚನವನ್ನು ಕೇಳಲು ದೇವಿ ಇರಬಾರದೆ? ಕುಳಿತು ಕೊಳ್ಳಬೇಕು.

ದೇವಿ—ಮಹಾಸೇನನ ಅಪ್ಪಣೆಯಂತೆ. (ಕುಳಿತುಕೊಳ್ಳುತ್ತಾಳೆ.)

ರಾಜ—ಏಳು, ಏಳು. ನಿರಾತಂಕವಾಗಿ ಹೇಳು.

ಕಾಂಚುಕೀಯ—(ಎದ್ದು) ಪೂಜ್ಯನಾದ ಅಮಾತ್ಯ ಶಾಲಂಕಾಯನನಿಂದ ವತ್ಸ ರಾಜನು ಹಿಡಿಯಲ್ಪಟ್ಟನು.

ರಾಜ—(ಹರ್ಷದಿಂದ) ಏನೆಂದೆ?

ಕಾಂಚುಕೀಯ—ಪೂಜ್ಯನಾದ ಅಮಾತ್ಯ ಶಾಲಂಕಾಯನನಿಂದ ವತ್ಸರಾಜನು ಹಿಡಿಯಲ್ಪಟ್ಟನು.

ರಾಜ—ಉದಯನನೇ?

ಕಾಂಚುಕೀಯ—ಸಂದೇಹವೇನು?

ರಾಜ—ಶತಾನೀಕನ ಮಗ?

ಕಾಂಚುಕೀಯ—ಖಂಡಿತವಾಗಿಯೂ.

ರಾಜ—ಸಹಸ್ರಾನೀಕನ ಮೊಮ್ಮಗ?

ಕಾಂಚುಕೀಯ—ಅವನೇ.

ರಾಜ—ಕೌಶಾಂಬಿಯೊಡೆಯ?

ಕಾಂಚುಕೀಯ—ಸ್ಪಷ್ಟವಾಗಿದೆ.

ರಾಜ—ಗಾಂಧರ್ವ(ವಿದ್ಯೆ)ವೇ ಧನವಾಗಿ ಉಳ್ಳವನು ?

ಕಾಂಚುಕೀಯ—ಹಾಗೆ ಹೇಳುತ್ತಾರೆ.

ರಾಜ—ವತ್ಸರಾಜನೇ ತಾನೇ ?

ಕಾಂಚುಕೀಯ—ಹೌದು, ವತ್ಸರಾಜನೇ.

ರಾಜ—ಹಾಗಾದರೆ ಸತ್ತನೇನು, ಯೌಗಂಧರಾಯಣ ?

ಕಾಂಚುಕೀಯ—ಇಲ್ಲ, ಇಲ್ಲ. ಕೌಶಾಂಬಿಯಲ್ಲಿದ್ದಾನೆ.

ರಾಜ—ಹಾಗಿದ್ದರೆ, ವತ್ಸರಾಜನನ್ನು ಹಿಡಿದಿಲ್ಲ.

ಕಾಂಚುಕೀಯ—ಮಹಾಸೇನನು ನಂಬಬೇಕು.

ರಾಜ—ನಂಬೆನ್ನೈ ನೀನೊರೆದ·ವತ್ಸರಾಜಗ್ರಹಣ ವಾರ್ತೆಯನ್,
ಮಂದರವ ಕೈಗಳಿಂ ಕಿತ್ತೆತ್ತಿ ತಿರುಗಿಸುವ ನುಡಿವೋಲ್.
ಕಾಳಗದೊಳವನ ಬಲ್ವಿಕ್ರಮಪ ಶತ್ರುಗಳು ಹೊಗಳುವರು ;
ಯೌಗಂಧರಾಯಣನ ಮಂತ್ರಗಳು ನಮ್ಮೆಡೆಯೆ ದನಿಗೈವುವು. || ೯ ||

ಕಾಂಚುಕೀಯ—ಮಹಾಸೇನನು ಪ್ರಸನ್ನನಾಗಬೇಕು. ನಾನು ಮುದುಕ, ಬ್ರಾಹ್ಮಣ. ಹಿಂದೆಂದೂ ಮಹಾಸೇನನ ಸನ್ನಿಧಿಯಲ್ಲಿ ಸುಳ್ಳು ಹೇಳಿಲ್ಲ.

ರಾಜ—ಆಃ, ಹೌದು, ನಿಜ. ಶಾಲಂಕಾಯನನು ಕಳುಹಿಸಿರುವ ಪ್ರಿಯದೂತನು ಯಾರು ?

ಕಾಂಚುಕೀಯ—ದೂತನು ಬಂದಿಲ್ಲ. ವಿಶೇಷ ವೇಗಶಾಲಿಯಾದ (ಹೇಸರ) ಕತ್ತೆಯ ತೇರಿನಲ್ಲಿ* ವತ್ಸರಾಜನನ್ನು ಮುಂದೆ ಮಾಡಿಕೊಂಡು ಅಮಾತ್ಯನು ತಾನೇ ಬಂದಿದ್ದಾನೆ.

ರಾಜ—ಹಾಗೇನು ! ಬಂದನೇ ! ಆಹಾ ! ಈಗ ಸೈನ್ಯವೆಲ್ಲವೂ ಸನ್ನಾಹವನ್ನು ಬಿಟ್ಟು ಸುಖವಾಗಿ ವಿಶ್ರಮಿಸಲಿ. ಗುಟ್ಟಾಗಿ ದೂತರನ್ನು ಕಳುಹಿಸುತ್ತಿದ್ದ ರಾಜರೆಲ್ಲರೂ ಇಂದು ಮೊದಲುಗೊಂಡು ಸಂಶಯವಿಲ್ಲದೆ ನಿರಾತಂಕವಾಗಿರುತ್ತಾರೆ. ಒಟ್ಟಿನಲ್ಲಿ ಇಷ್ಟು—ಈಗ ನಾನು ಮಹಾಸೇನನಾದೆ.

---

* ಖರರಥೇನ.

ದೇವಿ—ಅಮಾತ್ಯನು ಹಿಡಿತಂದನೇ ?

ರಾಜ—ಹೌದು.

ದೇವಿ—[12]ಹಾಗಾದರೆ ವಾಸವದತ್ತೆಯನ್ನು ಕೊಡುವುದಾಗಿ ಯಾರಿಗೂ ವಾಗ್ದಾನ ಮಾಡಲು ನನಗೆ ಇಷ್ಟವಿಲ್ಲ.

ರಾಜ—ಅವನು ನನಗೆ ಯುದ್ಧದಲ್ಲಿ ಸೋತ ಶತ್ರುವಲ್ಲವೇ ? ಬಾದರಾಯಣ, ಶಾಲಂಕಾಯನನೆಲ್ಲಿ ?

ಕಾಂಚುಕೀಯ—ಭದ್ರದ್ವಾರದಲ್ಲಿ ಇಳಿದಿದ್ದಾನೆ.

ರಾಜ—ಹೋಗು, ಭರತರೋಹಕನಿಗೆ ಹೇಳು—'ಯುವರಾಜನಿಗೆ ಉಚಿತವಾದ ಸತ್ಕಾರಗಳಿಂದ ವತ್ಸರಾಜನನ್ನು ಮುಂದಿಟ್ಟುಕೊಂಡು ಅಮಾತ್ಯನನ್ನು ಒಳ ಮಾಡಿಕೊಳ್ಳತಕ್ಕದ್ದು' ಎಂದು.

ಕಾಂಚುಕೀಯ—ಮಹಾಸೇನನ ಅಪ್ಪಣೆಯ ಪ್ರಕಾರ.

ರಾಜ—ಸ್ವಲ್ಪ ಬಾ, ಇಲ್ಲಿ.

ಕಾಂಚುಕೀಯ—ಇಗೋ ಬಂದೆ.

ರಾಜ—ವತ್ಸರಾಜನನ್ನು ನೋಡುವಲ್ಲಿ ಯಾರಿಗೂ ಅಡ್ಡಿಮಾಡಕೂಡದು.

> ತನ್ನ ಕಾರ್ಯಗಳಿಂದ ಮೊದಲೆ ಕಿವಿಮೊಕ್ಕಿರುವ
> ನನ್ನ ಶತ್ರುವ ಪೌರರೀಕ್ಷಿಸಲಿ ನಲಿದು.
> ಯಜ್ಞಕೋಸುಗ ಹಿಡಿದು ತಂದಿರಲು, ರೋಷವನು
> ನುಂಗಿ ನಿಂದಿರುವ ಸಿಂಹವ ನೋಡುವಂತೆ. || ೧೦ ||

ಕಾಂಚುಕೀಯ—ಮಹಾಸೇನನು ಆಜ್ಞಾಪಿಸಿದಂತೆ. (ಹೋಗುತ್ತಾನೆ.)

ದೇವಿ—ಈ ಅರಮನೆಯಲ್ಲಿ ಅನೇಕ ಉತ್ಸವಗಳನ್ನು ಕಂಡಿದ್ದೇವೆ. (ಆದರೆ) ಮಹಾ ಸೇನನಿಗೆ ಇಷ್ಟು(ಮಟ್ಟಿಗೆ) ಸಂತೋಷವುಂಟುಮಾಡಿದ ಬೇರೆ ಯಾವು ದನ್ನೂ ನಾನು ಕಂಡರಿಯೆ.

ರಾಜ—'ವತ್ಸರಾಜ ಸೆರೆ ಸಿಕ್ಕಿದನು' ಎಂಬ ಇಂಥ ವಿಶೇಷ ಪ್ರೀತಿಕರವಾದ ವಿಷಯ ವನ್ನು ಹಿಂದೆಂದಾದರೂ ಕೇಳಿರುವಂತೆ ನನಗೂ ನೆನಪಿಲ್ಲ.

ದೇವಿ—ವತ್ಸರಾಜನಲ್ಲವೆ ?

ರಾಜ—ಹೌದು.

ದೇವಿ—ನಮ್ಮ ಸಂಬಂಧ ಬೆಳಸಬೇಕೆಂದು ಅನೇಕ ರಾಜಮನೆತನಗಳವರು ಬಂದದ್ದನ್ನು ಕೇಳಿದ್ದೇನೆ. ಇವನು ದೂತನನ್ನು ಕಳುಹಿಸಿರಲಿಲ್ಲ.

ರಾಜ—ದೇವಿ, ಇವನು ಮಹಾಸೇನ ಶಬ್ದವನ್ನೂ ಗಣಿಸುವುದಿಲ್ಲ. (ಹಾಗಿರುವಲ್ಲಿ) ಸಂಬಂಧವನ್ನು ಅಪೇಕ್ಷಿಸುವನೇ ?

ದೇವಿ—ಗಣಿಸುವುದಿಲ್ಲ ! (ಇವನೇನು) ಹುಡುಗನೋ, ತಿಳಿವಿಲ್ಲದವನೋ ?

ರಾಜ—ಹುಡುಗ, (ಆದರೆ) ಅರಿಯದವನಲ್ಲ.

ದೇವಿ—ಇವನನ್ನು ಹೀಗೆ ಕೊಬ್ಬಿಸಿರುವುದು ಅದೇನಿರಬಹುದು ?

ರಾಜ—ಪ್ರಸಿದ್ಧ ರಾಜರ್ಷಿಗಳ ಹೆಸರನ್ನೊಳಕೊಂಡು ವೇದಪ್ರತಿಪಾದ್ಯವಾಗಿರುವ ಭರತವಂಶವು ಇವನನ್ನು ಉಬ್ಬಿಸಿದೆ. ಕುಲಕ್ರಮವಾಗಿ ಬಂದ ಗಾಂಧರ್ವ ವೇದವು ಇವನನ್ನು ಕೊಬ್ಬಿಸಿದೆ. ವಯಸ್ಸಿಗೆ ಸಹಜವಾದ ರೂಪವು ಇವನನ್ನು ಮೈಮರಸಿದೆ. ಹೇಗೋ ಉಂಟಾಗಿರುವ ಜನಾನುರಾಗವು ಇವನನ್ನು ಆತ್ಮವಿಶ್ವಾಸಿಯನ್ನಾಗಿ ಮಾಡಿದೆ.

ದೇವಿ—ಆಸೆಪಡುವಂಥವು ವರಗುಣಗಳು. ಯಾವ ಗುಣ ಹಸಗೆಟ್ಟು ದೋಷವುಂಟಾಯಿತೋ ?

ರಾಜ—ದೇವಿ, ಸಲ್ಲದೆಡೆಯಲ್ಲಿ ಹೀಗೇಕೆ ಆಶ್ಚರ್ಯಪಡುವೆ ? ನೋಡು,

> ಪೊದೆಯಲಿಟ್ಟಾ ಬೆಂಕಿ ಹಬ್ಬಿ ಲೋಕವನೆಲ್ಲ
> ಸುಡುವಂತೆ ತಾನುರಿದು ಹರಡಿದೆನ್ನಾಜ್ಞೆಯಿದು
> ಸಂದಿ ನಿಲ್ಲುವುದಿವನ ಗಡಿನಾಡ ಸೇರಲೊಡನೆ. ॥ ೧೧ ॥

(ಪ್ರವೇಶಿಸಿ)

ಕಾಂಚುಕೀಯ—ಮಹಾಸೇನನಿಗೆ ಜಯವಾಗಲಿ. ತಮ್ಮ ಅಪ್ಪಣೆಯ ಪ್ರಕಾರವಾಗಿಯೇ ಸತ್ಕರಿಸಿ ಶಾಲಂಕಾಯನನನ್ನು ಬರಮಾಡಿಕೊಳ್ಳಲಾಯಿತು. ಅವನು ಹೀಗೆ ವಿಜ್ಞಾಪಿಸಿಕೊಳ್ಳುತ್ತಾನೆ—‘ ಇದು ಭರತಕುಲದವರಿಂದ ಉಪಯೋ

ಗಿಸಲ್ಪಟ್ಟ ವತ್ಸರಾಜನ ಮನೆಯಲ್ಲಿದ್ದ ಘೋಷವತಿಯೆಂಬ ವೀಣಾರತ್ನ. ಇದನ್ನು ಮಹಾಸೇನನು ಒಪ್ಪಿಸಿಕೊಳ್ಳಬೇಕು!' ಎಂದು. (ವೀಣೆಯನ್ನು ತೋರಿಸುತ್ತಾನೆ)

ರಾಜ—ಜಯಮಂಗಲವನ್ನು ಸ್ವೀಕರಿಸುತ್ತೇನೆ. (ವೀಣೆಯನ್ನು ತೆಗೆದುಕೊಂಡು) ಇದೇಯೋ ಆ ಪ್ರಸಿದ್ಧವಾದ ಘೋಷವತಿ! ಇದು,

ತಂತಿಗಳು ತುದಿಯುಗುರ ಮೃದುಸೋಂಕಿಗದುರುತ್ತ
ಮೆಲ್ಲುಲಿಯ ಸೂಸುತಿರೆ ಕಿವಿಗಿಂಪನೆರೆಯುವುದು;
ಸಹಜರಾಗದ ಸರಿಯ ಸುರಿಯುವುದು; ಋಷಿ ಜನರ
ವಚನದೊಳಗಡಗಿರುವ ಮಂತ್ರವಿದ್ಯೆಯ ಹಾಗೆ
ಮದಿಸಿದಾನೆಯ ಮನವ ಕೂಡೆ ಕೈವಶಗೊಳಿಪುದು. || ೧೨ ||

ಆಃ! ಯುದ್ಧದಲ್ಲಿ ಗೆದ್ದುಕೊಂಡ ರತ್ನಗಳನ್ನು ಇಷ್ಟಬಂದಂತೆ ಅನುಭವಿಸುವುದರಿಂದ ಸಂತೋಷವುಂಟಾಗುತ್ತದೆ.

ಅರ್ಥಶಾಸ್ತ್ರದ ಗುಣವನರಿವನಾ ಹಿರಿಯಮಗ ಗೋಪಾಲಕನ್.
ಗಾಂಧರ್ವವಿದ್ಯೆಯೊಳ್, ವ್ಯಾಯಾಮಶಾಲಿ ತಾನನುಪಾಲಕನ್. || ೧೩ ||

ಇದನ್ನು ಯಾರಿಗೆ ಕೊಟ್ಟರೆ ಸಾರ್ಥಕವಾದೀತು? ದೇವಿ, ವಾಸವದತ್ತೆ ವೀಣೆಯನ್ನು ಪ್ರಾರಂಭಿಸಿರುವಳಲ್ಲವೇ?

ದೇವಿ—ಹೂ.

ರಾಜ—ಹಾಗಾದರೆ ಇದನ್ನು ಅವಳಿಗೇ ಕೊಡೋಣ.

ದೇವಿ—ವೀಣೆಯನ್ನು ಕೊಡುವುದರಿಂದ (ಇನ್ನೂ) ಹುಚ್ಚಳಂತಾಗುತ್ತಾಳೆ.

ರಾಜ—ಆಟವಾಡಲಿ, ಆಟವಾಡಲಿ. ಮಾವನ ಮನೆಯಲ್ಲಿ ಇದು ಸುಲಭವಲ್ಲ. ಬಾದರಾಯಣ, ಅವಳೆಲ್ಲಿ?

ಕಾಂಚುಕೀಯ—ಮಂತ್ರಿಯ ಜೊತೆ (ಯಲ್ಲಿ) ಕೂತಿದ್ದಾಳೆ.

ರಾಜ—ವತ್ಸರಾಜನೋ?

ಕಾಂಚುಕೀಯ—ಕಾಲಿಗೆ ಸಂಕೋಲೆ ತೊಡಿಸಿರುವುದರಿಂದಲೂ ಮೈಯಲ್ಲಿ ಬಹಳ

ಏಟು ಬಿದ್ದಿರುವುದರಿಂದಲೂ *ಹೆಗಲ ಮೇಲೆ ಸಾಗಿಸುವ ಹಾಸಿಗೆಯಲ್ಲಿ ಅವನನ್ನು ಮಧ್ಯಮ ಗೃಹಕ್ಕೆ ಕರೆತಂದು ಇಳಿಸಿದೆ.

ರಾಜ—ಬಹಳ ಏಟುಗಳೇ ! ಅಯ್ಯೋ, ಅನ್ಯಾಯವಾಯಿತು. ಇದು ವಿವೇಕವಿಲ್ಲದ ಪರಾಕ್ರಮದ ದೋಷ. ಈ ಕಾಲದಲ್ಲಿ ಉಪೇಕ್ಷೆ ಮಾಡಿದವನು ಘಾತುಕನಾಗುವನಲ್ಲವೇ ! ಬಾದರಾಯಣ, ಹೋಗು ; ಇವನ ಗಾಯಗಳಿಗೆ ಚಿಕಿತ್ಸೆ ನಡಸಬೇಕೆಂದು ಭರತರೋಹಕನಿಗೆ ಹೇಳು.

ಕಾಂಚುಕೀಯ—ಮಹಾಸೇನನ ಅಪ್ಪಣೆ.

ರಾಜ—ಅಥವಾ, ಸ್ವಲ್ಪ ಬಾ ಇಲ್ಲಿ.

ಕಾಂಚುಕೀಯ—ಇಗೋ ಬಂದೆ.

ರಾಜ—ಅವನ ಎಲ್ಲ ನೋಟಗಳನ್ನೂ ಸತ್ಕಾರಪೂರ್ವಕವಾಗಿಯೇ ತಿಳಿದುಕೊಳ್ಳಬೇಕು. ಇಂಗಿತದಿಂದಲೇ ಅವನ ಇಷ್ಟಗಳನ್ನು ಅರಿತುಕೊಳ್ಳಬೇಕು. ಕಳೆದ ಯುದ್ಧಕ್ಕೆ ಸಂಬಂಧಪಟ್ಟ ಯಾವ ಮಾತನ್ನೂ (ಅವನೆದುರಿಗೆ) ಆಡಲಾಗದು. ಸೀನು (ಆಕಳಿಕೆ) ಮೊದಲಾದುವು ಬಂದಾಗ ಹರಕೆಯ ನುಡಿಗಳನ್ನು ನುಡಿಯತಕ್ಕದ್ದು. ಕಾಲಕಾಲಕ್ಕೆ ತಕ್ಕ ಸ್ತುತಿಪಾಠದಿಂದ ಗೌರವಿಸುತ್ತಿರಬೇಕು.

ಕಾಂಚುಕೀಯ—ಮಹಾಸೇನನ ಅಪ್ಪಣೆಯ ಪ್ರಕಾರ. (ಹೋಗಿ ಬಂದು) ಮಹಾಸೇನನಿಗೆ ಜಯವಾಗಲಿ. ದಾರಿಯಲ್ಲೇ ವತ್ಸರಾಜನ ಗಾಯಗಳಿಗೆ ಚಿಕಿತ್ಸೆ ನಡಸಿದೆ. ಎರಡನೆಯ (ಸಬಲ) ಚಿಕಿತ್ಸೆಗೆ ಈಗ ಇನ್ನೂ ಕಾಲ ಒದಗಿಲ್ಲವಂತೆ. ಸೂರ್ಯನು ಮಧ್ಯಾಹ್ನಕ್ಕೆ ಏರುತ್ತಿದ್ದಾನೆ.

ರಾಜ—ಆ ವೀರಮಾನಿ ಯಾವ ಸ್ಥಳದಲ್ಲಿದ್ದಾನೆ ?

ಕಾಂಚುಕೀಯ—ಮಯೂರಯಷ್ಟಿಯ ಮುಖಭಾಗದಲ್ಲಿ.

ರಾಜ—ಛೇ, ಛೇ. ಆ ಸ್ಥಳ ವಾಸಕ್ಕೆ ತಕ್ಕದ್ದಲ್ಲ. ಬಿಸಿಲ ಬೇಗೆಯ ಪರಿಹಾರಕ್ಕಾಗಿ ಮಣಿಭೂಮಿಕೆಗೆ ಕರೆದುಕೊಂಡು ಹೋಗಿ ಇಳಿಸಬೇಕೆಂದು ಆಜ್ಞಾಪಿಸು.

---

* ಸ್ಕಂಧವಾಹ್ಯೇನ ಶಯನೀಯೇನ=ಡೋಲಿಯಲ್ಲಿ ?

ಕಾಂಚುಕೀಯ—ಮಹಾಸೇನನು ಅಪ್ಪಣೆ ಮಾಡಿದಂತೆ. (ಹೋಗಿ ಬಂದು) ಮಹಾಸೇನನು ಏನೇನು ಆಜ್ಞೆಮಾಡಿದನೋ ಅದೆಲ್ಲವನ್ನೂ ನಡಸಲಾಯಿತು. ಅಮಾತ್ಯ ಭರತರೋಹಕನಾದರೋ ಮಹಾಸೇನನನ್ನು ಕಾಣಬಯಸುತ್ತಾನೆ.

ರಾಜ—ವತ್ಸರಾಜನನ್ನು ಸತ್ಕರಿಸುವುದು ಅವನಿಗೆ ರುಚಿಸದೆಂದು ಸ್ಪಷ್ಟವಾಯಿತು. ಇದು ಅವನ ನೀತಿಯ ಫಲ. ನಾನೇ ಅವನನ್ನು ಸಮಾಧಾನ ಪಡಿಸುತ್ತೇನೆ.

ದೇವಿ—ಸಂಬಂಧ ನಿಶ್ಚಯವಾಯಿತೇ ?

ರಾಜ—ಇನ್ನೂ ನಿಶ್ಚಯಕ್ಕೆ ಬಂದಿಲ್ಲ.

ದೇವಿ—ಈಗ ಅವಸರ ಪಡಬೇಕಾದದ್ದಿಲ್ಲ. ನನ್ನ ಮಗಳಿನ್ನೂ ಹುಡುಗಿ.

ರಾಜ—ನಿನ್ನಿಷ್ಟ ಹೇಗೋ ಹಾಗೇ ಆಗಲಿ. (ಈಗ) ಅಂತಃಪುರಕ್ಕೆ ಹೋಗು.

ದೇವಿ—ಮಹಾಸೇನನ ಅಪ್ಪಣೆ. (ಪರಿವಾರ ಸಹಿತವಾಗಿ ಹೋಗುತ್ತಾಳೆ)

ರಾಜ—(ಯೋಚಿಸಿ)

ಮುನ್ನಿವನ ಗರ್ವದಿಂ ವೈರವುಂಟಾಯ್ತೆನಗೆ.
ಸೆರೆಹಿಡಿದು ತರಲೊಡನುದಾಸೀನವಾಯ್ತು.
ರಣದಿ ಕಡುನೊಂದೀ ವಿಪತ್ತಡಸಿ ಸಂಶಯ
ಸ್ಥಿತಿಯಲಿಹನೆನೆ ಕೇಳಿ ಕೇಡೆಣಿಸಿ ಚಿಂತಿಸುವೆನು. || ೧೪ ||

(ಇಬ್ಬರೂ ಹೋಗುತ್ತಾರೆ)

ಎರಡನೆಯ ಅಂಕ ಮುಗಿಯಿತು

# ಮೂರನೆಯ ಅಂಕ

(ಬಳಿಕ ಡಿಂಡಿಕವೇಷದ* ವಿದೂಷಕನು ಪ್ರವೇಶಿಸುತ್ತಾನೆ.)

ವಿದೂಷಕ—(ಚೆನ್ನಾಗಿ ನೋಡಿ)[18] ಓಹೋ! ದೇಗುಲದ ಮೆಟ್ಟಿಲಿನಲ್ಲಿ ನನ್ನ ಕಡುಬಿನ ಪಾತ್ರೆಯನ್ನಿಟ್ಟು ದಕ್ಷಿಣೆಯ ದುಡ್ಡುಗಳನ್ನು ಎಣಿಸಿ ಗಂಟುಹಾಕಿಕೊಂಡು ಹಿಂದಿರುಗಿ ಬಂದು (ನೋಡಲಾಗಿ) ಈಗ ಕಡುಬಿನ ಪಾತ್ರೆ ಕಾಣುವುದೇ ಇಲ್ಲ! (ಯೋಚಿಸಿ) ಆ! ಹಿಂದೆ ಮುಂದೆ ಸುತ್ತುತ್ತಿದ್ದ ಅವನು ಒಂದು ಕಡುಬಿನಿಂದಲೇ ತೃಪ್ತಿಪಟ್ಟುಕೊಂಡು ನನ್ನ ಬೆನ್ನಂಟಿ ಬಂದಿಲ್ಲ. ಪ್ರಾಕಾರ ಎತ್ತರವಾಗಿರುವುದರಿಂದ ನಾಯಿಗಳಿಗೆ ದಾರಿಯಿಲ್ಲ. ಬುತ್ತಿ ಬೇಕಾದಷ್ಟಿರುವುದರಿಂದ ದಾರಿಗರಿಗೆ (ಇದು) ಮೋಹಕವಾಗಿಲ್ಲ. ಇಲ್ಲ, ನಾನೇ ಏನಾದರೂ ತಿಂದುಬಿಟ್ಟೆನೋ? ಆಗಲಿ. ಸ್ವಲ್ಪ ತೇಗಿ ನೋಡುತ್ತೇನೆ. ಹೀ! ಹೀ! ಉಬ್ಬಿದ ಹಂದಿಯ ಬಸ್ತಿಯಂತೆ ಶುದ್ಧವಾದ ಗಾಳಿಯನ್ನೇ ಹೊರಬಿಡುತ್ತಿದ್ದೇನೆ. ಅಥವಾ ಲೋಹಿತಕಾತ್ಯಾಯನಿ†ಗೆ ಸೇರಿದ್ದು ತನಗೇ ಸೇರಿದ್ದೆಂದು ತಿಳಿದು ಶಿವನೇ ಕೈವಶಮಾಡಿಕೊಂಡಿರಬಹುದೇ? (ಚೆನ್ನಾಗಿ ನೋಡಿ) ಬಗೆಬಗೆಯ ರೂಪಗಳಿಂದ (ತೋರುವ) ಈ ಬ್ರಹ್ಮಚಾರಿ‡ಯೇನಾದರೂ ಚೇಷ್ಟೆಮಾಡುತ್ತಿದ್ದಾನೇ! ಆಗಲಿ, ಸ್ವಲ್ಪ ನೋಡುತ್ತೇನೆ. ಓಹೋ, ಈ ನನ್ನ ಸವಿಗಡುಬು ಶಿವನ ಪಾದಮೂಲದಲ್ಲಿ ಬಿದ್ದಿದೆ! ಇದನ್ನು ತೆಗೆದುಕೊಳ್ಳುತ್ತೇನೆ. ಕೊಡಪ್ಪಾ ಸ್ವಾಮಿಾ! ನನ್ನ ಕಡುಬನ್ನು ಕೊಡು, ನನ್ನೊಡೆಯಾ! ನೀನೂ ನನಗೆ ಕಳ್ಳನೇ? ಅಯ್ಯೋ, ಇದು ಚಿತ್ರದ ಕಡುಬು. ಬಿಸಿಲಿನ ಝಳಕ್ಕೆ ಕಣ್ಣುಗತ್ತಲೆ ಬಂದು ನನ್ನ ಸವಿಗಡುಬು ಸರಿಯಾಗಿ ಕಾಣಿಸುವುದಿಲ್ಲ. ಆಗಲಿ ಕೈಯಿಂದ ಒರಸಿನೋಡುತ್ತೇನೆ. ಹೀ! ಹೀ! ಭೇಷ್, ಭೇಷ್, ಲೋ ಚಿತ್ರಗಾರ! ಅಣ್ಣಾ, ಭೇಷ್!

---

* ವಿಕೃತವಾದ ವೇಷಭಾಷೆ ಮೊದಲಾದುವುಗಳಿಂದ ಜನರಿಗೆ ಹಾಸ್ಯವುಂಟುಮಾಡುತ್ತಾ ಭಿಕ್ಷವೆತ್ತುವವನು —ಗ. ಶಾ.

† ರಕ್ತಚಾಮುಂಡಿ. ‡ ಗಣಪತಿ.

ಒಣ್ಣಗಳನ್ನು ಉಚಿತ ರೀತಿಯಲ್ಲಿ ಸೇರಿಸಿ ಬರೆದಿರುವುದರಿಂದ ಎಷ್ಟೆಷ್ಟು ಒರಸಿನೋಡಿದರೆ ಅಷ್ಟಷ್ಟು ಪ್ರಕಾಶವಾಗಿ ಕಾಣುತ್ತಿದೆ. ಆಗಲಿ, ನೀರಿನಿಂದ ತೊಳೆದು ಒರಸುತ್ತೇನೆ. ನೀರೆಲ್ಲಿದ್ದೀತು ? ಇಗೋ, ಇದು ಸೊಗಸಾದ ತಿಳಿಗೊಳ. ನನ್ನ ಹಾಗೆಯೇ ಶಿವನೂ ಕೂಡ ಈ ನವಿಗಡುಬುಗಳಲ್ಲಿ ನಿರಾಶನಾಗಲಿ.

(ನೇಪಥ್ಯದಲ್ಲಿ)

ಕಡುಬುಗಳು ! ಕಡುಬುಗಳು ! ಹಹ್ಹಹ್ಹಾ !

ವಿದೂಷಕ—ಅಯ್ಯೋ, ಈ ಹುಚ್ಚನು ನನ್ನ ನವಿಗಡುಬನ್ನು ಹಿಡಿದುಕೊಂಡು ನಗುತ್ತಾ, ಬಿರುಮಳೆಯಲ್ಲಿ ನೊರೆಗರೆಯುತ್ತ ಬರುವ ಬೀದಿಯ ಕೊಳಕು ನೀರಿನಂತೆ ಇತ್ತಕಡೆಗೇ ಓಡಿ ಬರುತ್ತಿದಾನೆ. ನಿಲ್ಲು, ನಿಲ್ಲು, ಹುಚ್ಚಾ, ನಿಲ್ಲು. ಈ ದೊಣ್ಣೆಕೋಲಿನಿಂದ ನಿನ್ನ ತಲೆ ಒಡೆದುಬಿಡುತ್ತೇನೆ.

(ಬಳಿಕ ಹುಚ್ಚನು ಪ್ರವೇಶಿಸುತ್ತಾನೆ)

ಹುಚ್ಚ—ಕಡುಬುಗಳು ! ಕಡುಬುಗಳು ! ಹಹ್ಹಹ್ಹಾ !

ವಿದೂಷಕ—ಲೋ ಹುಚ್ಚಾ! ನನ್ನ ಕಡುಬುಗಳನ್ನು ಇಲ್ಲಿ ತೆಗೆದುಕೊಂಡು ಬಾ.

ಹುಚ್ಚ—ಯಾವ ಕಡುಬುಗಳು? ಎಲ್ಲಿ ಕಡುಬುಗಳು? ಯಾರ ಕಡುಬುಗಳು? ಈ ಕಡುಬುಗಳನ್ನೇನು ಎಸೆದುಬಿಡಬೇಕೋ, ಕಟ್ಟಿಡಬೇಕೋ ಅಥವಾ ತಿನ್ನಬೇಕೋ ?

ವಿದೂಷಕ—ತಿನ್ನಬಾರದು, ತಿನ್ನಬಾರದು, ಬಿಸುಡಲೂ ಬಾರದು.

ಹುಚ್ಚ—ಈ ನನ್ನ ನಾಲಗೆಯಾದರೋ ತಿನ್ನಬೇಕೆಂದು ಆಸೆಪಟ್ಟು ಸೂಚನೆಗಳನ್ನು ತೋರಿಸುತ್ತಿದೆ.

ವಿದೂಷಕ—ಅಯ್ಯಾ ಹುಚ್ಚ, ಇಲ್ಲಿ ತಾ ನನ್ನ ಕಡುಬನ್ನು. ಇನ್ನೊಬ್ಬರ ಒಡವೆಗೆ ಆಸೆಪಟ್ಟು ಕಟ್ಟಿಗೆ ಸಿಕ್ಕಿಕೊಳ್ಳಬೇಡ.

ಹುಚ್ಚ—ಯಾರು, ಯಾರು, ನನ್ನನ್ನು ಕಟ್ಟುವವರು? ಈ ಕಡುಬುಗಳೇ ನನ್ನನ್ನು ಕಾಪಾಡುತ್ತವೆ.

ಒಗೆಬಗೆಯ ಅಲಂಕಾರವ
ತಳೆದಿರುವೀ ಕಡುಬುಗಳು,
ತೃಪ್ತಿಯ ತರೆ ನಿಂದಿಹವು ;
ಅರಮನೆಯುಲಿ ಬೆಲೆಗೊಟ್ಟವು,
ಕಾಲಸ್ಥಿತಿಗೊಳಗಾಗಿ
ಸದ್ಯಕೆ ಮೆಲ್ಲಿತ್ತಹವು.
ಕಡುಬುಗಳೇ ಕಾಪಾಡುವುವು. || ೧ ||

**ವಿದೂಷಕ**—ಅಯ್ಯಾ ಹುಚ್ಚ, ನನ್ನ ನವಿಗಡುಬನ್ನು ಇಲ್ಲಿ ಕೊಡಪ್ಪಾ. ಇದನ್ನು ನಂಬಿಕೊಂಡು, (ನಾನು) ಉಪಾಧ್ಯಾಯರ ಮನೆಗೆ ಹೋಗಬೇಕಾಗಿದೆ.

**ಹುಚ್ಚ**—ನಾನು ಕೂಡ ಇದನ್ನು ನಂಬಿಕೊಂಡು, ನೂರು ಯೋಜನ ಹೋಗ ಬೇಕಾಗಿದೆ.

**ವಿದೂಷಕ**—ನೀನೇನು ಐರಾವಣವೇ ?

**ಹುಚ್ಚ**—ಹೌದು, ನಾನು ಐರಾವಣ. ಆದರೆ ದೇವರಾಜನು ಮಾತ್ರ ನನ್ನ ಮೇಲೆ ಪೀಠ ಹತ್ತಿಕೊಂಡಿಲ್ಲ. ಕಾಲ್ಕಟ್ಟುಗಳಿಂದ ಇಂದ್ರನನ್ನು ಕಟ್ಟಿಹಾಕಿದ ರೆಂದು ಕೇಳಿದೆ. ಜಲಧಾರೆಗಳನ್ನು ತಡೆಯುವ ಮಿಂಚಿನ ಚಾವಟಿಗಳಿಂದ ಹೊಡೆದು ಸುಂಟರಗಾಳಿಯಿಂದ ಗಿರ್ರನೆ ತಿರುಗಿಸಿ ಮೋಡದ ಕಟ್ಟನ್ನು ಒಡೆದುಹಾಕಿಬಿಡುತ್ತೇನೆ.

**ವಿದೂಷಕ**—ಏ ಹುಚ್ಚ, ನೀನು ನನಗೆ ಕೊಡದೆ ಹೋದರೆ, ಕೂಗಿಕೊಂಡು ಬಿಡು ತ್ತೇನೆ, ನೋಡು.

**ಹುಚ್ಚ**—ಕೂಗು ! ಕೂಗು ! ಕಿರಿಚಿಕೊ ! ಅಳು.

**ವಿದೂಷಕ**—ಅಬ್ರಹ್ಮಣ್ಯವೋ ಅಬ್ರಹ್ಮಣ್ಯ !

**ಹುಚ್ಚ**—ನಾನೂ ಕೂಗಿಕೊಳ್ಳುತ್ತೇನೆ. ಇಂದ್ರ ಸಿಕ್ಕಿಬಿದ್ದನಲ್ಲೋ ! ಇಂದ್ರ ಸಿಕ್ಕಿ ಬಿದ್ದನಲ್ಲೋ !

**ವಿದೂಷಕ**—ಅಬ್ರಹ್ಮಣ್ಯವೋ ಅಬ್ರಹ್ಮಣ್ಯ !

(ನೇಪಥ್ಯದಲ್ಲಿ)

ಹೆದರಬೇಡ, ಹೆದರಬೇಡ, ಬ್ರಾಹ್ಮಣೋಪಾಸಕ, ಹೆದರಬೇಡ.

ವಿದೂಷಕ—(ಹರ್ಷದಿಂದ) ಚಂದ್ರನು ಬಂದರೆ ಎಲ್ಲ ನಕ್ಷತ್ರಗಳೂ ಬಂದಂತೆಯೇ. ಅಯ್ಯೋ ಬ್ರಾಹ್ಮಣ್ಯವೇ! ಈ ಸತ್ಪುರುಷನಾದ ಶ್ರಮಣಕನು ಅಭಯ ಕೊಡುತ್ತಿದ್ದಾನೆ!

(ಬಳಿಕ ಶ್ರಮಣಕನು ಪ್ರವೇಶಿಸುತ್ತಾನೆ)

ಶ್ರಮಣಕ—ಹೆದರಬೇಡ, ಹೆದರಬೇಡ, ಬ್ರಾಹ್ಮಣೋಪಾಸಕ, ಹೆದರಬೇಡ. ಇಲ್ಲಿ ಯಾರುಯಾರು, ಯಾವಯಾವ ಕಾರ್ಯಕ್ಕಾಗಿ ಅಳುತ್ತಿದ್ದೀರಿ?

ವಿದೂಷಕ—ಓಹೋ! ಶ್ರಮಣಕನು ದ್ವಾರಪಾಲಕನ ಕೆಲಸವನ್ನು ಮಾಡುತ್ತಿದ್ದಾನೆ! ಶ್ರಮಣಕ, ಭಗವನ್, ಈ ಹುಚ್ಚನು ನನ್ನ ಸವಿಗಡುಬನ್ನು ತೆಗೆದುಕೊಂಡು (ಹಿಂದಕ್ಕೆ) ಕೊಡುವುದಿಲ್ಲ.

ಶ್ರಮಣಕ—ಎಲ್ಲಿ, ಕಡುಬನ್ನು ಸ್ವಲ್ಪ ನೋಡೋಣ.

ಹುಚ್ಚ—ನೋಡು, ನೋಡು, ಶ್ರಮಣಕ, ನೋಡು ನೀನು.

ಶ್ರಮಣಕ—ಥೂ, ಥೂ.

ವಿದೂಷಕ—ಅಯ್ಯಯ್ಯೋ! ಹುಚ್ಚನ ಕೈಯಲ್ಲಿರುವ ನನ್ನ ಕಡುಬುಗಳು ಈ ಸತ್ಪುರುಷ ಶ್ರಮಣಕನು ಥೂಕರಿಸಿದ್ದರಿಂದ ಅಭಾಗ್ಯನಾದ ನನಗೆ ಹಿಂದೆ ನೋಡಿದ್ದೇ ಲಾಭವಾಯಿತು.

ಶ್ರಮಣಕ—ಅಯ್ಯಾ, ಉನ್ಮತ್ತೋಪಾಸಕ, ಕೊಟ್ಟುಬಿಡು, ಕೊಟ್ಟುಬಿಡು. ಇಬ್ಬನಿಯಂತೆಯೂ ನೊರೆಯಂತೆಯೂ ಬೆಳ್ಳಗಿರುವ, ತಿರುವಿ ತಿರುವಿ ತುಂಬಾ ಕೋಮಲವಾಗಿರುವ, ರುಚಿ ಕಟ್ಟಿದ ಹೆಂಡದಂತೆ ಸವಿಯಾಗಿರುವ, ಈ ಕಡುಬುಗಳನ್ನು ಹಿಂದಕ್ಕೆ ಕೊಟ್ಟುಬಿಡು. ಅವನ್ನು ತಿಂದು ನಿನಗೆ ಕ್ಷಯ ಬರದಿರಲಿ.

ವಿದೂಷಕ—ಅಯ್ಯೋ, ಸವಿಗಡುಬುಗಳೆಂದುಕೊಂಡಿದ್ದರೆ, ಹೆಂಡದವನ ಲಡ್ಡುಗೆಗಳು ದೊರಕಿದಂತಾಯಿತಲ್ಲಾ!

ಶ್ರಮಣಕ—ಉನ್ಮತ್ತೋಪಾಸಕ, ಕೊಡು ಹಿಂದಕ್ಕೆ. ಕೊಟ್ಟುಬಿಡು. ಕೊಡುವುದಿಲ್ಲವಾದರೆ ನಿನಗೆ ಶಾಪಹಾಕಿಬಿಡುತ್ತೇನೆ.

ಹುಚ್ಚ—ಪ್ರಸನ್ನನಾಗು, ಪ್ರಸನ್ನನಾಗು, ಶ್ರಮಣಕ. ಭಗವನ್, ಬೇಡ, ಬೇಡ, ನನ್ನನ್ನು ಶಪಿಸಬೇಡ. ತೆಗೆದುಕೊ, ತೆಗೆದುಕೊ.

ಶ್ರಮಣಕ—ಬ್ರಾಹ್ಮಣೋಪಾಸಕ, ನೋಡು, ನೋಡು, ನನ್ನ ಪ್ರಭಾವವನ್ನು.

ವಿದೂಷಕ—ಈ ಹುಚ್ಚನು ಸತ್ಕಾರ್ಯಾಸಕ್ತನಾದ ಈ ಶ್ರಮಣಕನು ಇಟ್ಟ ಶಾಪವನ್ನು ಕಂಡು ಅಂಜುತ್ತಂಜುತ್ತ ಕಡುಬುಗಳನ್ನು ಬೆರಳ ತುದಿಯಲ್ಲಿ ನೀಡಿ ಹಿಡಿದುಕೊಂಡು ನಿಂತಿದ್ದಾನೆ. ಏ ಹುಚ್ಚ, ತಾ ಇಲ್ಲಿ ನನ್ನ ಕಡುಬನ್ನು.

ಶ್ರಮಣಕ—ಬಾರಪ್ಪಾ, ಬಾ. ಈ ಕಡುಬುಗಳನ್ನು ಕೊಟ್ಟು ನನ್ನಿಂದ ಸ್ವಸ್ತಿವಾಚನಮಾಡಿಸಿಕೊ.

ವಿದೂಷಕ—ಹೀ, ಹೀ ! ನನ್ನ ಈ ಕಡುಬುಗಳನ್ನು ಕೊಟ್ಟು ಸ್ವಸ್ತಿವಾಚನಮಾಡಿಸುತ್ತೇನೆ. ನನಗೆ ಕೂಡ ಇವು ಗೃಹಸ್ಥನ ಕೈಯಿಂದ ದಾನವಾಗಿ ಬಂದವು. ಅವು ನಿನಗೂ ಉಪಾಯನವಾಗುತ್ತವೆ. ಅವನಿಗೂ ಸಮೃದ್ಧಿಯುಂಟಾಗಲಿ. ಈ ಹುಚ್ಚನು ಅಗ್ನಿಗೃಹಕ್ಕೆ ಅಭಿಮುಖವಾಗಿ ಹೋಗುತ್ತಿದ್ದಾನೆ. ಮಧ್ಯಾಹ್ನವಾಯಿತು. ಪೂರ್ವಾಹ್ಣದಲ್ಲಿ ಕೂಡ ಈ ಸ್ಥಳ ನಿರ್ಜನವಾಗಿರುತ್ತದೆ. ಈಗ ನಾನು ಕೂಡ ಈ ದಕ್ಷಿಣೆಯ ದುಡ್ಡುಗಳನ್ನು ದಾರಿಯ ಮನೆಯಲ್ಲಿ ಇಟ್ಟು ಹೋಗುತ್ತೇನೆ. ಒಬ್ಬನಿಗೆ ಬಟ್ಟೆ ಬೇಕು; ಒಬ್ಬನಿಗೆ ದುಡ್ಡು ಬೇಕು.

(ಎಲ್ಲರೂ ಅಗ್ನಿಗೃಹವನ್ನು ಪ್ರವೇಶಿಸುತ್ತಾರೆ)

ಯೌಗಂಧರಾಯಣ—ವಸಂತಕ, ಈ ಅಗ್ನಿಗೃಹ ನಿರ್ಜನವಾಗಿದೆಯಷ್ಟೆ ?

ವಿದೂಷಕ—ಹೌದು, ಹೌದು, ಬರಿದಾಗಿದೆ.

ಯೌಗಂಧರಾಯಣ—ಹಾಗಾದರೆ, ಇಬ್ಬರೂ ನನ್ನನ್ನು ಆಲಿಂಗಿಸಿಕೊಳ್ಳಿ.

ಇಬ್ಬರೂ—ಆಗಲಿ. (ಆಲಿಂಗಿಸುತ್ತಾರೆ.)

ಯೌಗಂಧರಾಯಣ—ಸರಿ, ಸರಿ. ನೀವಿಬ್ಬರೂ ಒಂದೇ ರೀತಿಯಾಗಿ ಕಷ್ಟಪಡುತ್ತಿರುವವರು. ಕೂತುಕೊಳ್ಳಪ್ಪಾ. ನೀನೂ ಕೂತುಕೊ.

ಇಬ್ಬರೂ—ಆಗಲಿ. (ಎಲ್ಲರೂ ಕೂತುಕೊಳ್ಳುತ್ತಾರೆ)

ಯೌಗಂಧರಾಯಣ—ವಸಂತಕ, ನೀನು ಸ್ವಾಮಿಯನ್ನು ಕಂಡಿದ್ದೆಯಾ?

ವಿದೂಷಕ—ಹೂ, ಪ್ರಭುವನ್ನು ಕಂಡಿದ್ದೆ.

ಯೌಗಂಧರಾಯಣ—[14] ಉಸ್ಸಪ್ಪಾ, ರಾತ್ರಿಯಲ್ಲಿ ಕ್ಷೇಮವಿಲ್ಲ. ಈಗ ಹಗಲನ್ನು ಎದುರುನೋಡುತ್ತೇವೆ.

ಹಗಲು ಕಳೆಯಲು ಮುಂದಿನಿರುಳ ಹಾರೈಕೆ!
ನಲ್ಬೆಳಗು ಮೂಡುತಿರೆ ಹಗಲಿನಾ ಚಿಂತೆ!
ಇನ್ನವೊದಗದ ಕೇಡನೆಣಿಸಿ ಕಾಂಬರಿಗೆ
ಕಳಕಳದ ಕಾಲವನು ನೆನೆದೆ ಸುಖವೆಮಗೆ. || ೨ ||

ರುಮಣ್ವಂತ—ನೀನು ಹೇಳಿದ್ದು ಸರಿ. ಹಗಲುರಾತ್ರಿಗಳು ಒಂದೇ ಆದರೂ ಚಕ್ಕಟ್ಟಿನ ಸ್ಥಿತಿಗಳಲ್ಲಿ ರಾತ್ರಿಯೇ ಹೆಚ್ಚು ದೋಷಯುಕ್ತವಾಗುತ್ತದೆ. ಏಕೆಂದರೆ,

ವ್ಯವಹಾರಕಸಾಧ್ಯರಾಗಿ
ಜನರೊಲ್ಮೆಗೆ ವಿಮುಖರಾಗಿ,
ಬಯಲಾಗಿರೆ ದೋಷ ಹಗಲು,
ಹಗೆಗೆ ರಾತ್ರಿ ಮಿಗಿಲು ದಿಗಿಲು. || ೩ ||

ಯೌಗಂಧರಾಯಣ—ವಸಂತಕ, ಸ್ವಾಮಿಯೊಡನೆ ಮಾತಾಡಿದೆಯಷ್ಟೆ?

ವಿದೂಷಕ—ಓಹೋ, ಬಹಳ ಹೊತ್ತಿನವರೆಗೂ ಅವರೊಡನೆ ಇದ್ದೆ. ಇವತ್ತು ಚತುರ್ದಶಿಯ ದಿನ ಮೀಯುತ್ತಿದ್ದಾಗ, ಅವರ ಬಳಿ ಇದ್ದೆ.

ಯೌಗಂಧರಾಯಣ—ಸ್ವಾಮಿ ಮಿಂದರೇ?

ವಿದೂಷಕ—ಅವರು ಮಿಂದರು.

ಯೌಗಂಧರಾಯಣ—ದೇವಕಾರ್ಯವನ್ನು ನೆರವೇರಿಸಿದರೋ?

ವಿದೂಷಕ—ಹೌದು, ಬರಿಯ ನಮಸ್ಕಾರದಿಂದಲೇ ದೇವತೆಗಳನ್ನು ಪೂಜಿಸಿದರು.

ಯೌಗಂಧರಾಯಣ—ಸ್ವಾಮಿ ಇಂಥ ಮೇಲಾದ ಈ ಬಗೆಯ ಬಹುಮಾನದ ಅವಸ್ಥೆಯನ್ನೂ ಪಡೆದರೇ! ಏಕೆಂದರೆ,

ಮಿಂದು, ದೇವರಿಗೆ ಬಲವಂದು, ಪುಣ್ಯಾಹದುರು
ಘೋಷ ಮುಗಿವಂದಾರ್ಗೆ ಭೇರಿಗಳು ಮೊಳಗುವುವೊ,
ಕಾಲವಶದಿಂದವಗೆ ತಿಥಿಪೂಜೆಯಲಿ ದೇವ
ಗೆರಗುವಂದಲುಗುತ್ತ ಸಂಕೋಲೆ ದನಿಗೈವುವು. || ೪ ||

ರುಮಣ್ವಂತ—ಈಗ ನಿನ್ನ ಪ್ರಯತ್ನವು ಸ್ವಾಮಿಗೆ ಉಚಿತವಾದ ತಿಥಿಸತ್ಕಾರವನ್ನು ತಂದೇ ತರುತ್ತದೆ.

ಯೌಗಂಧರಾಯಣ—ವಸಂತಕ, ಹೋಗು, ಮತ್ತೆ ಸ್ವಾಮಿಯನ್ನು ಕಾಣು. ಕಂಡು ಹೀಗೆ ವಿಜ್ಞಾಪಿಸು—"ಪ್ರಯಾಣದ ವಿಷಯವಾಗಿ ಪ್ರಸ್ತಾಪಿಸುತ್ತಿದ್ದೆ ವಲ್ಲಾ, ಅದನ್ನು ನಡಸುವುದಕ್ಕೆ ನಾಳೆ ಸಕಾಲವಾಗಿದೆ. ಏಕೆಂದರೆ, ನಲಾಗಿರಿ ನಿಲ್ಲುವ, ಮಲಗುವ, ಮೇಯುವ ಮತ್ತು ಮಲಗುವ ಕಡೆಗಳಲ್ಲೆಲ್ಲಾ ಮೂಲಿಕೆಗಳನ್ನು ಹಾಕಿ, ನಿಯಮಾನುಸಾರವಾಗಿ ಮಂತ್ರೌಷಧಿಗಳನ್ನು ಪ್ರಯೋಗಿಸಿರುವುದರಿಂದ (ಆ ಆನೆ) ತನ್ನ ದಿನದಿನದ ಕಾರ್ಯಗಳನ್ನು ಮರೆತು ಮರುಳುಗೊಂಡಿದೆ. ಅನುಕೂಲವಾಗಿ ಗಾಳಿ ಬೀಸುವಾಗ ಹೊಗೆ ಹಾಕುವುದಕ್ಕಾಗಿ ಧೂಪವನ್ನು ಸಿದ್ಧಮಾಡಿಟ್ಟಿದೆ. ಇದರ ರೋಷವನ್ನು ಹೆಚ್ಚಿಸುವುದಕ್ಕೆ ಮದಿಸಿದ ಪ್ರತಿಗಜವೂ ಸಿದ್ಧವಾಗಿದೆ. ಆನೆಗಳಿಗೆ ಬೆಂಕಿಯ ದಿಗಿಲಿರುವುದರಿಂದ ಗಜಶಾಲೆಯ ಹತ್ತಿರದಲ್ಲಿ ಅಲ್ಪಸಾಧನಗಳುಳ್ಳ ಮನೆಯೊಂದನ್ನು ಹೊತ್ತಿಸಿ ಉರಿಸುವುದಕ್ಕೆ ಏರ್ಪಾಡು ಮಾಡಿದೆ. ಈ ಮದ್ದಾನೆಯ ಮನಸ್ಸನ್ನು ಕೆರಳಿಸುವುದಕ್ಕಾಗಿ ದೇಗುಲಗಳಲ್ಲಿ ಶಂಖ ದುಂದುಭಿಗಳನ್ನು ಇಡಲಾಗಿದೆ. ಸರ್ವಸಾಧನಗಳಿಂದಲೂ ಕೂಡಿದ ಆ (ದೊಡ್ಡ) ಅಬ್ಬರದಿಂದ ನಾಳೆ ಪ್ರದ್ಯೋತನು ಖಂಡಿತವಾಗಿಯೂ ಸ್ವಾಮಿಯ ರಕ್ಷಣೆಯನ್ನು ಕೋರಬರುತ್ತಾನೆ. ಆ ಬಳಿಕ ಶತ್ರುವಿನ ಅನುಮತಿಯಿಂದಲೇ ಸ್ವಾಮಿ ಸೆರೆಯಿಂದ ಹೊರಬಂದು, ತನ್ನೊಡನೆಯೇ ವಿಪತ್ತಿಗೆ ಸಿಕ್ಕಿದ ಘೋಷವತಿಯನ್ನು ಕೈಯಲ್ಲಿ ತೆಗೆದುಕೊಂಡು ನಲಾಗಿರಿಯನ್ನು ಸ್ವಾಧೀನಪಡಿಸಿಕೊಳ್ಳಬೇಕು. ಬಳಿಕ ನಲಾಗಿರಿ ಕೈವಶವಾದ ಕೂಡಲೇ, ಸ್ವಾಮಿ ಅದರ ಮೇಲೆ ಸರಿಯಾಗಿ ಕುಳಿತುಕೊಂಡು,

ಆಸೆಯನು ಪಡೆ ಮನದಿ ಮಾತ್ರ ಬೆಂಬತ್ತುವೊಲು
ವೇಗದಿಂ ನಡಸುತ್ತ, ಸಿಂಹಗಳ ಗರ್ಜನೆಯು
ಮುಗಿವ ಮುನ್ನವೆ ಸಂಧ್ಯದಡವಿಯನು ಸೆರೆ ದಾಟಿ;
ಒಂದೆ ದಿನ ಕೊರಗಿನಲಿ ಕಾಡಿನಲಿ ಪೊಳಲಿನಲಿ
ಮೂವಗೆಯ ದೆಸೆಯಾಂತು; ಗಜಕುಟಿಲದಿಂದೆಂತು
ಪಿಡಿವಟ್ಟನಂತೆಯೇ ಬಿಡುಗಡೆಯ ಪಡೆವನಹುದು. || ೫ ||

ಎಂದು.''

ರುಮಣ್ವಂತ—ವಸಂತಕ, ಇದೇನು ಈಗ ಯೋಚಿಸುತ್ತಿರುವೆ?

ವಿದೂಷಕ—ಇದೇ ನನ್ನ ಯೋಚನೆ; ಮಹತ್ತಾದ (ಈ) ನಿನ್ನ ಪ್ರಯತ್ನ ಹಾಳಾಗುವುದಲ್ಲಾ ಎಂದು.

ಇಬ್ಬರೂ—ನಮಗಂತೂ ಏನೂ ಗೊತ್ತಾಗಲಿಲ್ಲ.

ವಿದೂಷಕ—ಮೊದಲು ನನಗೆ (ಗೊತ್ತು), ಆ ಮೇಲೆ ನಿಮಗೆ ತಿಳಿಯುತ್ತದೆ.

ಯೌಗಂಧರಾಯಣ—ಹಾಗಾದರೆ, ಅದೇತರಿಂದ ಕಾರ್ಯಕ್ಕೆ ವಿಪತ್ತು?

ವಿದೂಷಕ—ವತ್ಸರಾಜನ ಸ್ವಯಂಕಾರ್ಯತ್ವದಿಂದ.

ಯೌಗಂಧರಾಯಣ—ಅದು ಹೇಗೆ?

ವಿದೂಷಕ—ಕೇಳಿ.

ಇಬ್ಬರೂ—ಸಿದ್ಧವಾಗಿದ್ದೇವೆ.

ವಿದೂಷಕ—ಕಳೆದುಹೋಯಿತಲ್ಲಾ ಕಾಲಾಷ್ಟಮಿ, ಅವತ್ತು ವಾಸವದತ್ತೆಯೆಂಬ ರಾಜಕುಮಾರಿ ತನ್ನ ದಾದಿಯೊಡನೆ, ಕನ್ಯಕೆಯನ್ನು ನೋಡುವುದರಲ್ಲಿ ದೋಷವಿಲ್ಲವೆಂದು ತಿಳಿದು ಮೇಲ್ಮುಸುಕು ತೆಗೆದುಹಾಕಿದ ಪಲ್ಲಕ್ಕಿಯಲ್ಲಿ (ಕುಳಿತು), ಕಟ್ಟಿಹೋದ ಚರಂಡಿಗಳಿಂದ ನೀರು ಹರಿದು ತಗ್ಗುತಿಟ್ಟಾದ ರಾಜಮಾರ್ಗವನ್ನು ಬಿಟ್ಟು, ಸೆರೆಮನೆಯ ಬಾಗಿಲೆದುರಿಗೆ ಭಗವತಿ ಯಕ್ಷಿಣಿಯ ಆಲಯವಿದೆಯಲ್ಲಾ, ಅಲ್ಲಿ ದೇವರ ಪೂಜೆಮಾಡುವುದಕ್ಕಾಗಿ ಹೋಗಿದ್ದಳು.

ಯೌಗಂಧರಾಯಣ—ಆಮೇಲಾಮೇಲೆ?

ವಿದೂಷಕ—ಆ ಮೇಲೆ ಆ ದಿವಸ ಒಳಸೆರೆ (ಮನೆ)ಯ ಕಾವಲುಗಾರನಾಗಿ ಒಂದಿದ್ದ ಶಿವಕನೆಂಬ ರಾಜದಾಸನನ್ನು ಒಪ್ಪಿಸಿ ಸ್ವಾಮಿಯವರು ಸೆರೆಮನೆಯ ಬಾಗಿಲಿನಲ್ಲಿ ಹೊರಗೆ ಬಂದರು.

ಇಬ್ಬರೂ—ಆಮೇಲಾಮೇಲೆ?

ವಿದೂಷಕ—ಆಗ ಹಗಲು ಬದಲಾಯಿಸಿಕೊಳ್ಳುವುದಕ್ಕಾಗಿ ಬೋಯಿಗಳು ಪಲ್ಲಕ್ಕಿಯನ್ನು ನಿಲ್ಲಿಸಲು ಮನದಣಿಯುವಂತೆ ಆ ರಾಜಪುತ್ರಿಯನ್ನು ನೋಡಿದರು.

ಯೌಗಂಧರಾಯಣ—ಆಮೇಲಾಮೇಲೆ?

ವಿದೂಷಕ—ಆಮೇಲೇನು, ಆಮೇಲೆ? ಈಗ ಬಂಧನವನ್ನು ಪ್ರಮದವನವೆಂದು ಭಾವಿಸಿಕೊಂಡು ರಾಗಲೀಲೆಮಾಡಲು ತೊಡಗಿದ್ದಾರೆ.

ಯೌಗಂಧರಾಯಣ—ಸ್ವಾಮಿಗೆ ಅವಳ ಮೇಲೆ ಪ್ರೀತಿ ಹುಟ್ಟಿಲ್ಲವಷ್ಟೇ?

ವಸಂತಕ—ನೋಡಿ, ಕೇಡುಗಳು ಒಟ್ಟೊಟ್ಟಾಗಿ ಬರುವುವೆಂದರೆ ಹೀಗೆಯೇ.

ಯೌಗಂಧರಾಯಣ—ಮಿತ್ರ, ರುಮಣ್ವಾನ್, ಮನಸ್ಸು ಸ್ಥಿರಮಾಡಿಕೊ. ಈ ವೇಷದಲ್ಲೇ ನಾವು ಮುಪ್ಪಾಗಬೇಕು.

ವಿದೂಷಕ—ಅಯ್ಯಾ, (ಇಲ್ಲಿ ಕೇಳಿ.) ಸ್ವಾಮಿ ನನ್ನ ಸಂಗಡ (ಹೀಗೆ) ಹೇಳಿದರು— "ಯೌಗಂಧರಾಯಣನಿಗೆ ಹೇಳು: 'ನೀನು ಸಮರ್ಥಿಸಿರುವ ಕಾರ್ಯನಿರ್ಧಾರ ನನಗೆ ರುಚಿಸುವುದಿಲ್ಲ. ಪ್ರಯಾಣ (ನನಗೆ) ಸಮರ್ಪಕವಾಗಿರುವುದಾದರೂ ಪ್ರದ್ಯೋತನಿಗೆ ಹೆಚ್ಚಿನ ಅವಮಾನವೊಂದನ್ನು ನೆನೆಯುತ್ತಿದ್ದೇನೆ. ಕಾಮದಲ್ಲೇ ಕಣ್ಣಿಟ್ಟವನೆಂದು ನನ್ನನ್ನು ಕಡೆಗಣಿಸಬೇಡ. (ನನಗೆ ಮಾಡಿದ) ಅವಮಾನಕ್ಕೆ ಮುಯ್ಯಿ ತೀರಿಸಲು (ದಾರಿ) ಹುಡುಕುತ್ತಿದ್ದೇನೆ' ಎಂದು."

ಯೌಗಂಧರಾಯಣ—ಆಹಾ! ಶತ್ರುಗಳು ಅಪಹಾಸ್ಯಮಾಡುವಂಥ ಮಾತಾಯಿತಲ್ಲಾ! ಎಂಥ ನಾಚಿಕೆಗೇಡಿತನವಿದು! ಅಯ್ಯೋ, ಸ್ನೇಹಿತರಿಗೆ ಎಂಥ ಕಷ್ಟಕ್ಕೆ ಕಾರಣವಾಯಿತು! ಸ್ಥಳವಲ್ಲದ ಸ್ಥಳದಲ್ಲಿ, ಹೊತ್ತಲ್ಲದ ಹೊತ್ತಿನಲ್ಲಿ, ಸ್ವಾಮಿ ಕಾಮವನ್ನು ಅಪೇಕ್ಷಿಸುವರಲ್ಲಾ! ಏಕೆಂದರೆ,

ಹುಲ್ಲುಚಾಪೆಯ ಹಾಸಿ ತಾನೆ ಕೈಯಿಂದಲೇ
ಅಣಿಮಾಡಿದಾ ಭೂಮಿ ದರ್ಪಗೊಳಿಸಿತು! ಕಾಲ
ಸಂಕೋಲೆಗಳ ಸದ್ದು ಕಾಮವನು ಕೆರಳಿಸಿತು!
ಸೆರೆಯೊಳಗೆ ಕಾವಲಿನ ಕೆಲವು ದೂತರು ಕರೆವ
ರಾಜನೆಂಬಾ ನುಡಿಯ ಕಿವಿಯಾರ ಕೇಳುವಗ
ದಾವನಿಗೆ ಕಾಮ ಕೆರಳದೆ ಮಾಣ್ಬುದು? || ೬ ||

ವಿದೂಷಕ—ನೋಡಿ, ಸ್ವಾಮಿಭಕ್ತಿಯನ್ನು ತೋರಿಸಿದ್ದಾಯಿತು. ಪುರುಷ ಪ್ರಯತ್ನ ವನ್ನು ಮಾಡಿಯಾಯಿತು. ಇನ್ನು ಇವನನ್ನು ಬಿಟ್ಟುಹೋಗಿಬಿಡೋಣ. ಅದೇ ಸರಿ ಇವನಿಗೆ.

ಯೌಗಂಧರಾಯಣ—ನೀನು ವಸಂತಕನೇ ಅಲ್ಲವೇ? ಆಗದು, ಆಗದು.

15 ದುಃಖದಲಿ ಕಾಮದಲಿ ನೊಂದು, ಹಿತವರ ನೆಮ್ಮಿ,
ಕಾಲವನು ಕಾಣದನ ತೊರೆಯುವುದು ತರವೇ? || ೭ ||

ವಿದೂಷಕ—ಹೀಗೆಯೇ ನಾವು ಮುಪ್ಪಾಗಬೇಕು.

ಯೌಗಂಧರಾಯಣ—ಅದು ಶ್ಲಾಘ್ಯವಲ್ಲವೇ?

ವಿದೂಷಕ—ಶ್ಲಾಘನೀಯವೇ ಸರಿ. ಜನ ತಿಳಿಯುವುದಾದರೆ.

ಯೌಗಂಧರಾಯಣ—ಜನರನ್ನು ಕಟ್ಟಿಕೊಂಡು ನಮಗೇನು? ಸ್ವಾಮಿಯ ಪ್ರಿಯ ಕ್ಕಾಗಿ ಮಾಡುತ್ತಿರುವುದು ಈ ಪ್ರಯತ್ನ.

ವಿದೂಷಕ—ಅವನು ಕೂಡ ಇದನ್ನರಿಯನು.

ಯೌಗಂಧರಾಯಣ—ಕಾಲ ಬಂದಾಗ ತಿಳಿಯುತ್ತಾನೆ.

ವಿದೂಷಕ—ಆ ಕಾಲ ಇನ್ನು ಯಾವಾಗಲೋ!

ಯೌಗಂಧರಾಯಣ—ಈ ಪ್ರಯತ್ನ ಸಿದ್ಧಿಯಾದಾಗ.

ವಿದೂಷಕ—ಹಾಗಿದ್ದರೆ, ನೀನು ಅಂಥವನೇ ಆದ ಪಕ್ಷದಲ್ಲಿ, ಸೆರೆಯಿಂದ ರಾಜನನ್ನೂ ಅಂತಃಪುರದಿಂದ ರಾಜಪುತ್ರಿಯನ್ನೂ ಇಬ್ಬರನ್ನೂ ಹೊರಡಿಸಬೇಕು.

ರುಮಣ್ವಂತ—ಇದನ್ನು ನೀನು ನೋಡಿಕೊಳ್ಳಬೇಕು.

ಯೌಗಂಧರಾಯಣ—ಇಬ್ಬರನ್ನೂ ? ಆಗಲಿ. (ಇಗೋ) ಇದು ಎರಡನೆಯ ಪ್ರತಿಜ್ಞೆ:

ಅರ್ಜುನ ಸುಭದ್ರೆಯನು, ಪದ್ಮಲತೆಯನು ನಾಗ,
ಸೆಳೆದುಯ್ದವೋಲವಳ ದೊರೆ ಹರಣಮಾಡದಿರೆ,
ಯೌಗಂಧರಾಯಣನೆ ಅಲ್ಲ ನಾನು. || ೮ ||

ಮತ್ತೂ

[16] ವೀಣೆಯ, ನಲಾಗಿರಿಯನಾ ತುಂಬುಗಣ್ಣವಳ
ನೆಮ್ಮ ದೊರೆಯೊಡನೆಯೇ ನಾ ಹರಣಮಾಡದಿರೆ
ಯೌಗಂಧರಾಯಣನೆ ಅಲ್ಲ ನಾನು. || ೯ ||

(ಕಿವಿಗೊಟ್ಟು ಆಲಿಸಿ) .ಓಹೋ, ಸದ್ದಾಗುವಂತಿದೆ. ಇದೇನೋ ನೋಡಿ ಬಾ.

ವಿದೂಷಕ—ಆಗಲಿ (ಹೋಗಿ ಬಂದು), ಅಯ್ಯಾ, ಹೊತ್ತು ಮಾಲಿತೆಂಬ ನಂಬಿಕೆಯಿಂದ ಸ್ವಸ್ಥರಾಗಿ ಜನರು ಸಂದಣಿಸಿ ತಿರುಗಾಡುತ್ತಿದ್ದಾರೆ. ಈಗೇನು ಮಾಡೋಣ ?

ರುಮಣ್ವಂತ—ಹಾಗಾದರೆ, ಅಗ್ನಿಗೃಹಕ್ಕೆ ನಾಲ್ಕು ಬಾಗಿಲುಗಳಿವೆ. ಈಗ ನಮ್ಮ ಸಂಘ ಒಡೆಯಲಿ.

ಯೌಗಂಧರಾಯಣ—ಬೇಡ, ಬೇಡ, ನಮ್ಮ ಸಂಘ ಒಡೆಯದಂಥದು. ಅರಿಗಳ ಒಡ್ಡು ಮುರಿಯಲಿ. ನಮ್ಮ ನಮ್ಮ ಕೆಲಸಗಳನ್ನು ಮಾಡೋಣ.

ಇಬ್ಬರೂ—ಹಾಗೇ ಆಗಲಿ. (ಹೋಗುತ್ತಾರೆ.)

ಹುಚ್ಚ—[17]ಹೀ ! ಹೀ ! ಚಂದ್ರನನ್ನು ರಾಹು ನುಂಗುತ್ತಿದಾನೆ. ಬಿಡೋ, ಬಿಡೋ, ಚಂದ್ರನನ್ನು. ಬಿಡದೆ ಇದ್ದರೆ ನಿನ್ನ ಬಾಯಿ ಒಡೆದು ಬಿಡಿಸುತ್ತೇನೆ. ಇಗೋ, ಇಗೋ, ತುಂಟಕುದುರೆ ಕಟ್ಟು ಹರಿದುಕೊಂಡು ಬರುತ್ತಿದೆ. ಇಗೋ, ಇಗೋ, ಇದು ಚೌಕದ ದಾರಿಯಲ್ಲಿ (ಬಂತು). ಈಗ ಇದನ್ನೇ ಏರಿಕೊಂಡು ಭಿಕ್ಷವನ್ನು ತಿನ್ನುತ್ತೇನೆ. ಓಹೋ, ಓಹೋ, ಹುಡುಗಪ್ಪಗಳಾ, ನನ್ನನ್ನು ಹೊಡೆಯುತ್ತೀರಾ ? ಬೇಡಿ, ಬೇಡಿ, ನನ್ನನ್ನು ಹೊಡೆಯಬೇಡಿ. ಏನೆಂದಿರಿ—"ನಮಗೆ ಏನಾದರೂ ಸ್ವಲ್ಪ ಕುಣಿದು ತೋರಿಸು" ಎಂದಿರಾ ?

ನೋಡಿ, ನೋಡಿ, ಹುಡುಗಪ್ಪಗಳಾ, ನೋಡಿ. ಅಯ್ಯೋ, ಹುಡುಗಪ್ಪಗಳಾ, ಮತ್ತೂ ನನ್ನನ್ನು ಕೋಲುಗಳಿಂದ ಹೊಡೆಯುತ್ತೀರಾ? ಬೇಡಿ, ಬೇಡಿ, ಹೊಡೆಯಬೇಡಿ. ಹಾಗಾದರೆ, ನಾನೂ ನಿಮ್ಮನ್ನು ಹೊಡೆಯುತ್ತೇನೆ.

(ಹೋಗುತ್ತಾನೆ)

ಮೂರನೆಯ ಅಂಕ ಮುಗಿಯಿತು.

# ನಾಲ್ಕನೆಯ ಅಂಕ

(ಬಳಿಕ ಆಳು ಪ್ರವೇಶಿಸುತ್ತಾನೆ)

ಆಳು—ಎಷ್ಟೊತ್ತಾಯ್ತಪ್ಪಾ, ನೀರಾಟಕ್ಕೋಗ್ಬೇಕೂಂತಿರೋ ವಾಸವದತ್ತ ಮ್ನೋರ ಬದ್ರವತೀ ಆನೇ ಪರ್ಚಾರ್ಕ ಆ ಗಾತ್ರಸೇವಕ ಕಾಣಾಕೇ ಇಲ್ವಲ! ಅಪ್ಪೋ ಪುಷ್ಪದಂತಕ, ಗಾತ್ರಸೇವಕನ್ ಕಾಣ್ಲಿಲ್ವಾ? ಏನಂತೀ? ಆ ಗಾತ್ರಸೇವಕ ಯಂಡ್ದಂಗ್ಡ್ಯೇಳ್ ಮನೆಗೋಗಿ ಯಂಡಾ ಕುಡಿತಿದಾನೇಂತಲೇ? ಹೋಗ್ ನೀನಿಸ್ನು. (ಮುಂದಕ್ಕೆ ಹೋಗಿ) ಇದೇ ಯಂಡ್ದಂಗ್ಡ್ಯೇಳ್ ಮನೆ. ಅವನ್ ಕೂಗಿ ನೋಡ್ತೀನಿ. ಲೋ, ಗಾತ್ರ ಸೇವಕಾ!

(ನೇಪಥ್ಯದಲ್ಲಿ)

ಯಾವ್ನೋನ್ ಅವ ನೀಗ ಇಲ್ಲಿ ರಾಜಬೀದೀಲ್ ನಿಂತ್ಕೊಂಡು 'ಗಾತ್ರ ಸೇವಕಾ, ಗಾತ್ರಸೇವಕಾ!' ಅಂತ ನನ್ ಕೂಗ್ತಿರೋನು?

ಆಳು—ಈ ಗಾತ್ರಸೇವಕ ಯಂಡ ಕುಡ್ದು ಕುಡ್ದು, ಸಕ್ಕ ಸಕ್ಕ, ಪಟ್ಟಾಗ್ ಅಮಲೇರಿ, ದಾಸವಾಳ್ದುವಿನಂಗೆ ಕಣ್ ಮಾಡ್ಕೊಂಡು, ಇತ್ಲಾಗೇ ಬರ್ತಿದಾನೆ. ಇವನಿದಿರ್ಗೆ ನಿಂತ್ಕೋಬಾರದು. (ಸರಿದು ನಿಲ್ಲುತ್ತಾನೆ.)

(ಬಳಿಕ ಮೇಲೆ ಸೂಚಿಸಿದಂತಿರುವ ಗಾತ್ರಸೇವಕನು ಪ್ರವೇಶಿಸುತ್ತಾನೆ.)

ಗಾತ್ರಸೇವಕ—ಯಾವ್ನೋನ್ ಅವ್ನೀಗ ಇಲ್ಲಿ ರಾಜಬೀದೀಲ್ ನಿಂತ್ಕೊಂಡು 'ಗಾತ್ರ ಸೇವಕಾ, ಗಾತ್ರಸೇವಕಾ!' ಅಂತ ನನ್ ಕೂಗ್ತಿರೋನು? ಕುಡ್ತದ್ ಮನೆಯಿಂದ ಹೊರಗ್ ಬರ್ತಿರೋವಾಗ ನಮ್ಮಾವ ನನ್ ಕಂಡ್ಬಿಟ್ಟು ಒಲೇ ಸಿಟ್ಟಾಗವ್ನೆ. ಅಮುರುತ್‌ದಂಗಿರೋ ಯಂಡ ತುಂಬಿದ್ ಬುಂಡೇನೂ ತುಪ್ಪಾ ಮೆಣಸೂ ಉಪ್ಪೂ ಆಕಿದ್ ಮಾಂಸದ್ ಕಂಡಾನೂ ರಪ್ಪಂತ ಮಕ್ಕೊಗದ್ಬಿಟ್ನಲಾ! ನೊಸೆ ರಂಗು ರಂಗಾಗಿ ಕಣ್ಣಾಕ್ತಾಳೆ ಕುಡ್ದು ಬುಟ್ರೆ! ಅತ್ತೆ ದೊಣ್ಣೇನೇ ತಕೋತಾಳೆ, ಚಚ್ಚಾಕೆ.

ಯಂಡದ್ ಅಮಲೇರ್ದೋನೆ ಪುಣ್ವಂತ, ವ್ಯೆಗೆಲ್ಲ
ಯಂಡ ಬಳ್ಕೊಂಡೋನೆ ಪುಣ್ವಂತ.
ಯಂಡಾನೆ ತಕ್ಕೊಂಡು ಮೈತೊಳ್ದೋನ್ ಪುಣ್ವಂತ,
ಯಂಡ್ದಲ್ಲಿ ಸತ್ತೋನೆ ಪುಣ್ವಂತ. || ೧ ||

ಪಾಪಿಗ್ಳೇ ಸರಿ ಆ ದಡ್ ಬಡ್ಡೀಮಕ್ಳು, ಯಂಡದ್ರ ಮಕ್ಕಳ್ ಕಷ್ಟಕಾರ್ಪ ಣ್ಯಾನೇ ಕೇಳ್ಕೊಂಡು ಕೈತುಂಬಾ ಅನ್ಕೂಲಿದ್ರು ಯಂಡದ್ ಕೆರೇ ಕಟ್ಟಿಸ್ದೇ ಇರೋರು! [18]ನಾ ಕಾಣ್ಣಪ್ಪಾ ಅದ್ಕಿಂತ ಬೇರೆ ನರಕ ಯಮ ಲೋಕ್ದಲ್ಲಾದ್ರೂ ಇದೆಯೋ ಇಲ್ವೋ.

ಆಳು (ಹತ್ತಿರ ಹೋಗಿ)—ಲೋ ಗಾತ್ರಸೇವಕಾ, ಎಷ್ಟೊತ್ತಯ್ಯಾ ನಿನ್ ಉಡ್ಕೋದು? ನೀರಾಟಕ್ ಓಗ್ಬೇಕೂಂತಿರೋ ವಾಸವ್ದತ್ತಮ್ನೋರ್ ಬದ್ರವತೀ ಆನೆ ಕಾಣಾಕೇ ಇಲ್ಲ! ನೀನೋ ಅಮಲೇರಿ ಇಲ್ಲಿ ಅಲೀತಾ ಇದೀಯ.

ಗಾತ್ರಸೇವಕ—ಸರಿ. ಅದ್ಕೂ ಅಮಲೇರಿದೆ, ಅವಂಗೂ ಅಮಲೇರಿದೆ, ನಂಗೂ ಅಮಲೇರಿದೆ, ನಿಂಗೂ ಅಮಲೇರಿದೆ, ಎಲ್ರಿಗೂ ಅಮಲೇರ್ದಂಗೇ ಕಾಣಿ ಸ್ತದೆ.

ಆಳು—ಅದೆಲ್ಲಾ ಹಾಗಿರ್ಲಿ. ಅರಮನೇಲ್ ಕೇಳ್ತಾರೆ, ಬದ್ರವತೀನ್ ತಕೊಂಡ್ ಬರ್ದೆ ಇವನೆಲ್ಲಲೀತಿದಾನೇಂತ?

ಗಾತ್ರಸೇವಕ—ಇಲ್ಲಲೀತೀನಿ. ಇಲ್ಲಿ ಕುಡೀತೀನಿ. ಇದ್ರಲ್ ಕುಡೀತೀನಿ. ಸಿಟ್ಟಾಗ್ ಬ್ಯಾಡಪ್ಪಾ; ಈಗೇನುಮಾಡ್ಬೇಕೇಳು.

ಆಳು—ಸಾಕು, ಹಿಂದಕ್ಕುಮುಂದಕ್ಕೆ ಹೊಂದಿಕಿಲ್ಲದ ಮಾತು! ಬ್ಯಾಗ ಬದ್ರವತೀನ್ ತಗೊಂಡ್ ಬಾ.

ಗಾತ್ರಸೇವಕ—ಬರ್ಲಿ, ಬರ್ಲಿ, ಬದ್ರವತಿಯೇ ಬರ್ಲಿ. ಅಯ್ಯಯ್ಯೋ, ಬದ್ರವತೀ ಅಂಕುಸಾನ ಒತ್ತೇ ಇಟ್ಟಿದೀನಲಾ!

ಆಳು—ತನ್ನಷ್ಟಕ್‌ತಾನೇ ಹೇಳಿದಂಗೆ ಕೇಳೋ ಬದ್ರವತಿಗೆ ಅಂಕುಸ್ದಿಂದೇನ್ ಕೆಲ್ಸ? ಹೋಗು, ಬ್ಯಾಗ್ ಬದ್ರವತೀನಾ ತಗೊಂಡ್‌ಬಾ.

ಗಾತ್ರಸೇವಕ—ಬರ್ಲಿ, ಬದ್ರವತಿಯೇ ಬರ್ಲಿ. ಅಯ್ಯಯ್ಯೋ! ಬದ್ರವತಿಯ ಅರ್ಧಚಂದ್ರಮಾಲೇ[19]ನ ಒತ್ತೆ ಇಟ್ಟಿದೀನಲಾ!

ಆಳು—ಹೂವ್ ಸಲ್ ಕಟ್ಟಾಕ್ ಬೌದಾದ ಬದ್ರವತಿಗೆ ಅರ್ಧಚಂದ್ರಮಾಲೆ ಯಿಂದೇನ್ ಕೆಲ್ಸ? ಬ್ಯಾಗ್ ತಗೊಂಡ್ ಬಾ ಬದ್ರವತೀನ.

ಗಾತ್ರಸೇವಕ—ಬರ್ಲಿ, ಬರ್ಲಿ, ಬದ್ರವತಿಯೇ ಬರ್ಲಿ. ಅಯ್ಯೋ! ಬದ್ರವತಿಯ ಗಂಟೇನ್ ಇಟ್ಬಿಟ್ನಲಾ!

ಆಳು—ನೀರ್ನಲ್ಲಾಡ್ಬೇಕೂಂತೀರೋ ಬದ್ರವತಿಗೆ ಗಂಟೆಕಟ್ಕೊಂಡೇನ್ ಕೆಲ್ಸ? ಬ್ಯಾಗ್ತಗೊಂಡ್ಬಾ ಒದ್ರವತೀನ.

ಗಾತ್ರಸೇವಕ—ಬರ್ಲಿ, ಬದ್ರವತಿಯೇ ಬರ್ಲಿ. ಅಯ್ಯೋ! ಬದ್ರವತಿಯ ಚಾವ್ಟೀ ಇಟ್ಬಿಟ್ನಲಾ!

ಆಳು—ಚಾವ್ಟಿಯಿಂದೇನ್ ಕೆಲ್ಸ? ಬದ್ರವತೀನ್ ಬ್ಯಾಗ್ ತಗೊಂಡ್ಬಾ.

ಗಾತ್ರಸೇವಕ—ಬರ್ಲಿ, ಬರ್ಲಿ, ಬದ್ರವತಿಯೇ ಬರ್ಲಿ. ಅಯ್ಯೋ—

ಆಳು—ಏನು ಅಯ್ಯೋ?

ಗಾತ್ರಸೇವಕ—ಅಯ್ಯೋ, ನಾನು—

ಆಳು—ಏನು ನೀನು?

ಗಾತ್ರಸೇವಕ—ಅಯ್ಯೋ, ಬದ್ರ—

ಆಳು—ಏನು ಬದ್ರ?

ಗಾತ್ರಸೇವಕ—ಅಯ್ಯೋ, ಬದ್ರವತಿ—

ಆಳು—ಏನು ಬದ್ರವತಿ?

ಗಾತ್ರಸೇವಕ—ಬದ್ರವತೀನೂ ಇಟ್ಬಿಟ್ನಲಾ!

ಆಳು—ಇದರಲ್ಲಿ ನಿಂದೇನೂ ತಪ್ಪಿಲ್ಲ. ರಾಜವಾಹನಾ ತಗೊಂಡು ಯಂಡಾ ಕೊಡ್ತಾಳಲಾ ಆ ಯಂಡ್ದಂಗ್ಯೋಳದ್ದೇ ತಪ್ಪು.

ಗಾತ್ರಸೇವಕ—ಅಯ್ಯೋ! ನಾನೇಳ್ದ್ದೆಕಣಪ್ಪಾ ಅವ್ಳಿಗೆ—ಅಸಲೂ ಬಡ್ಡೀ ಎರಡ್ನೂ ಹಾಳ್ಮಾಡ್ಬ್ಯಾಡಾ ಅಂತ.

ಆಳು—ಹಾಂ ; ಏನೋ ಸದ್ದು !

ಗಾತ್ರಸೇವಕ—ಅಯ್ಯಯ್ಯೋ ; ತಿಳೀತು, ತಿಳೀತು ! ಯಂಡ್ರೋಳ್ ಮನೇ ಮುಕರ್ಕೊಂಡು ಬದ್ರಪತಿ ಓಟ ಕಿತ್ತಿದೆ.

ಆಳು—ಏನಂದೇ ?

(ಆಕಾಶವಲ್ಲಿ)

ವತ್ಸರಾಜಪ್ರಭು ವಾಸವದತ್ತೆಯನ್ನು ಹರಣಮಾಡಿಕೊಂಡುಹೋದರು.

ಗಾತ್ರಸೇವಕ—(ಹರ್ಷದಿಂದ) ಸ್ವಾಮಿಗೆ ನಿರ್ವಿಘ್ನವಾಗಲಿ !

ಆಳು—ಕುಡಿ, ಕುಡಿ. ಈಗ್ಲೂ ಅಮಲೇರಿ ಅಲೀತಲೇ ಇರು.

ಗಾತ್ರಸೇವಕ—ಆಃ ! ಯಾರು ಅಮಲೇರಿರುವವರು ? ಯಾರಿಗೆ ಅಮಲು ? ಆರ್ಯ ಯೌಗಂಧರಾಯಣನು ತಮ್ಮ ತಮ್ಮ ಸ್ಥಾನಗಳಲ್ಲಿ ಗೊತ್ತುಮಾಡಿಟ್ಟಿದ್ದ ಚಾರಪುರುಷರೇ ನಾವು ! ಈಗ ನಾನು ಕೂಡ ಸ್ನೇಹಿತರಿಗೆ ಸೂಚನೆ ಕೊಡಬೇಕಾಗಿದೆ. ಈ ನಮ್ಮ ಗೆಳೆಯರು ಕಟ್ಟಿನಿಂದ ಹೊರಬಿದ್ದ ಕೃಷ್ಣ ಸರ್ಪಗಳ ಹಾಗೆ ಅಲ್ಲಿ ಇಲ್ಲಿ ಓಡಾಡುತ್ತಾ ಇದ್ದಾರೆ. ಎಲೆ ಎಲೆ ಗೆಳೆಯರೇ, ಕೇಳಿ, ಕೇಳಿ !

ಉಂಡ ದಣಿಯನ್ನಕ್ಕೆ ಹೋರದಿಹ ಮಾನವಗೆ
ದೊರೆಯದೈ ನೀರ್ತುಂಬಿ ದರ್ಭೆಯಿನಲಂಕರಿಸಿ
ಮಂತ್ರದಿಂ ಸಂಸ್ಕರಿಸಿ ತರುವ ನೂತನ ಕುಂಭ
ಸತ್ಕಾರ. ಮೇಣವಗೆ ದೊರೆವುದಾ ನರಕಗತಿಯೆ. || ೨ ||

ಆರ್ಯ ಯೌಗಂಧರಾಯಣನೆಲ್ಲಿರಬಹುದು ? ಇಗೋ, ಪೂಜ್ಯನಾದ ಆರ್ಯ ಯೌಗಂಧರಾಯಣ. ಇವನು,

ಹುಚ್ಚುವೇಷವ ಕಳೆದು, ಹೊಳೆವ ಕೂರಸಿಪಿಡಿದು,
ತುಂಬುಬಟ್ಟೆಯನುಟ್ಟು, ಬಿಳಿಪಾಗ ತಲೆಗಿಟ್ಟು,
ಹೊನ್ನ ಕೆತ್ತಿದ ತೋಲನೆಡಗಯ್ಯಲಾಡಿಸುತ,
ಪೆರೆಯ ನಸುವುಗುಳುತಿಹ ಮಿಂಚುಮೋಡವ ಪೋಲ್ವನು. || ೩ ||

ಓಹೋ ಬಹು ದೊಡ್ಡ ಯುದ್ಧ ಮೊದಲಾಯಿತು!

ಆನೆಗಳ, ಕುದುರೆಗಳ, ಮಾವುತರ, ರಾವುತರ,
ತರಿದೊಟ್ಟಿ; ಬಲದಿಂದ ಮುನ್ನುಗ್ಗಿ ಪಡೆಯನೊಂ
ದರೆಗಳಿಗೆ ಮಿಗೆ ಕಲಕಿ; ಮದಿಸಿದಾನೆಯ ದಂತ
ದೊಸಕೆಯೇಟುಗಳಿಂದ ತೋಳ್ಮುರಿದು; ಕೈದು ಕೆಳ
ಗುರುಳಲುಂ ಕಾಲ್ದೆಗೆಯುದರಿಯು ಮೇಲೆರಗುತಿಹನು. || ೪ ||

ಅಯ್ಯೋ, ಅಯ್ಯೋ, ಆರ್ಯ ಯೌಗಂಧರಾಯಣನು ಸೆರೆ ಸಿಕ್ಕಿದನಲ್ಲಾ! ಈಗ ನಾನು ಕೂಡ ಆರ್ಯ ಯೌಗಂಧರಾಯಣನ ಬಳಿಗೇ ಹೋಗುತ್ತೇನೆ. (ಹೋಗುತ್ತಾನೆ.)

ಆಳು—ಇದೇನಪ್ಪಾ ಇದು! ಕೋಟೆ, ಹೆಬ್ಬಾಗ್ಲು (ಎರಡ್) ಬಿಟ್ರೆ ಇದು ಕೌಶಾಂಬಿಯೇ (ಆಗೋಯ್ತಲ್ಲ)! ಆಗಲಿ ಈ ಸಮಾಚಾರಾನ ಮಂತ್ರಿ ಪ್ಪಂಗೇಳ್ತೀನಿ. (ಹೋಗುತ್ತಾನೆ.)

(ಪ್ರವೇಶಕ ಮುಗಿಯಿತು.)

---

[ಬಳಿಕ ಸಾಧಾರಣ (ಭಟ)ರಿಬ್ಬರು ಪ್ರವೇಶಿಸುತ್ತಾರೆ.]

ಇಬ್ಬರೂ—ದೂರಹೋಗಿ, ದೂರಹೋಗಿ ಸ್ವಾಮಿಾ, ದೂರಹೋಗಿ.

ಮೊದಲನೆಯವನು—ಆಹಾ! ನನ್ನ ಗಂಟಲು ಕಿತ್ತುಹೋದರೂ ಗದ್ದಲ ನಿಲ್ಲುವ ಹಾಗಿಲ್ಲ.

ಎರಡನೆಯವನು—ಓಹೋ! ರಾಜಕುಮಾರಿ ವಾಸವದತ್ತೆಯ ಅಪಹರಣವನ್ನು ಕೇಳಿ ಮನಸ್ಸು ಕಲಕಿರುವುದರಿಂದ, ನಾನು ಕಿರಿಚಿಕೊಳ್ಳುತ್ತಿದ್ದರೂ ಯಾರೂ ನನ್ನ ಮಾತನ್ನು ಕೇಳುವುದೇ ಇಲ್ಲ. ಹಾ, ಏನೆಂದಿರಿ? ಅದೇಕೆ ದಾರಿ ಬಿಡಿಸುತ್ತಿದೀರೆಂದೋ? ಆರ್ಯ ಯೌಗಂಧರಾಯಣನನ್ನು ಸೆರೆ ಹಿಡಿದಿದೆ. ಏನೆಂದಿರಿ? ಹೇಗೆ ಸಿಕ್ಕಿಬಿದ್ದನೆಂದಿರಾ? ಕೇಳಿ ಸ್ವಾಮಿಾ, ಕೇಳಿ. ಕತ್ತಿ ಹಿಡಿದು ಆರ್ಯ ಯೌಗಂಧರಾಯಣನು ಸೇನೆಯ ಮೊದಲುರುಬನ್ನು ಒಂದು ಗಳಿಗೆ ತಡೆದು ನಿಲ್ಲಿಸಿದನು. ವಿಜಯಸುಂದರವೆಂಬ ಆನೆಯ

ದಂತದ ತುದಿ ತಾಕಿ ಕತ್ತಿ ಮುರಿದುಹೋಯಿತು. ಹೀಗೆ ಕತ್ತಿಯ ತಪ್ಪಿನಿಂದ ಸೆರೆ ಸಿಕ್ಕಿದನು ; ತನ್ನ ತಪ್ಪಿನಿಂದಲ್ಲ.

ಮೊದಲನೆಯವನು—ಹೋ, ಹೋ ! ಎಲ್ಲರೂ ಎಚ್ಚರವಾಗಿರಬೇಕು ! ಕೋಟೆ, ಹೆಬ್ಬಾಗಿಲು ಹೊರತಾಗಿ ಇದು ಕೌಶಾಂಬಿಯೇ ಆಗಿಬಿಟ್ಟಿದೆ.

ಇಬ್ಬರೂ—ಇಳಿಯಬೇಕು, ಇಳಿಯಬೇಕು, ಆರ್ಯನು ಇಳಿಯಬೇಕು.

(ಬಳಿಕ ರಟ್ಟೆಗಳನ್ನು ಕಟ್ಟಿ ಫಲಕಯಾನದಲ್ಲಿ ತರುತ್ತಿರುವ ಯೌಗಂಧರಾಯಣನು ಪ್ರವೇಶಿಸುತ್ತಾನೆ)

ಯೌಗಂಧರಾಯಣ—ಇಗೋ ಇಳಿಯುತ್ತೇನೆ.

ಹಗೆಯ ಕೈಯಲಿ ಬಿದ್ದ ವತ್ಸರಾಜನ ಬಿಡಿಸಿ,
ಕಾಳಗದಿ ಕೈದುಗಳ ತಪ್ಪಿಂದ ಸೆರೆಸಿಕ್ಕಿ,
ದಣಿಯ ದುಃಖವ ಕಳೆದು, ಗೆದ್ದೆನೆಂದೆಣಿಸುತ್ತ,
ಸುಖದಲೇ ನಾನಿಂದು ನಡೆವೆನರಮನೆಗೆ. || ೫ ||

ಅಯ್ಯಾ! ಹೆಂಡಿರುಮಕ್ಕಳಿಲ್ಲದವರಿಗೆ ಕಾಡಿಗೆ ಹೋಗುವುದು ಸುಖ. ಇಷ್ಟಾರ್ಥ ಕೈಗೂಡಿದವರಿಗೆ ಕೇಡಡಸುವುದು ಮತ್ತೂ ಸೊಗಸು. ಧರ್ಮವನ್ನು ಕೂಡಿಟ್ಟಿರುವವರಿಗೆ ಸಾವು ಪಶ್ಚಾತ್ತಾಪಕರವಲ್ಲ. ನಾನಾದರೋ,

ವೈರಭಯಪರಿಭವಗಳೊಂದೆಂದು ಕಡೆಗಣಿಸಿ,
ನಯವಿನಯಶರಗಳಿಂ ಕೂಡೆ ಕಾರ್ಯವನೆಸಗಿ,
ಶತ್ರುಸಿರಿಯನು ಮಿತ್ರರಯಶವನು ತೊಡೆದಿಕ್ಕಿ,
ಜಯನೃಪತಿಯುರುಕೀರ್ತಿಗಳನಿಂದು ಪಡೆದೆ. || ೬ ||

ಇಬ್ಬರೂ—ದೂರಹೋಗಿ, ದೂರಹೋಗಿ ಸ್ವಾಮಿ, ದೂರಹೋಗಿ.

ಯೌಗಂಧರಾಯಣ—ನನ್ನನ್ನು ನೋಡಬಯಸುವ ಯಾರನ್ನೂ ದೂರ ಕಳುಹಬೇಕಾಗಿಲ್ಲ.

ಆಳ್ದನೊಲ್ಮೆಗೆ ನೋಂತು ಬನ್ನವಟ್ಟಿರುವೆನ್ನ
ಕಡುಗಲಿಗಳೀ ರಾಜಪುರುಷರೀಕ್ಷಿಸಲಿ.

ಮಂತ್ರಿಪದವಿಯ ಮನದಲಾಶಿಸುವರೀಕ್ಷಿಸಲಿ,
ಅವರಾಸೆ ನೆಲೆಗೊಳಲಿ ಮೋಣಳಿದೆಬಿಡಲಿ. || ೭ ||

ಇಬ್ಬರೂ—ದೂರಹೋಗಿ, ದೂರಹೋಗಿ. ಏನು, ನೀವು ನೋಡಿಲ್ಲವೇ, ಆರ್ಯ ಯೌಗಂಧರಾಯಣನನ್ನು?

ಯೌಗಂಧರಾಯಣ—ಹಿಂದೆ ನೋಡಿದ್ದಾರೆ: ಆದರೆ ಹೀಗಲ್ಲ.

ಹುಚ್ಚುವೇಷದಿ ಮುಚ್ಚಿ ಬೀದಿಗಳಲೋಡಾಡು
ವೆನ್ನ ರೂಪವನಿದನು ಹಳಿದರಂದು;
ಕರ್ಮವನು ಕಾಂಬರಿಂದು. || ೮ ||

(ಪ್ರವೇಶಿಸಿ)

ಭಟ—ಆರ್ಯ, ನಿಮಗೆ ಪ್ರಿಯವಾರ್ತೆಯೊಂದನ್ನು ಬಿನ್ನಹಮಾಡುತ್ತೇನೆ. ವತ್ಸ ರಾಜರನ್ನು ಹಿಡಿದರಂತೆ!

ಯೌಗಂಧರಾಯಣ—ಇದಿರಲಾರದು.

ಬಹಳವೊದಲೇ ಸೆರೆಯನುಳಿದು ಹೊರಬಂದವನು,
ಭದ್ರವತಿಯಲಿ ವಿಂಧ್ಯದಡವಿಯನು ಪಡೆದವನು,
ನಡೆಯುತಿರೆ ನಿಮಿಷದಲಿ ಹಲವು ಯೋಜನಗಳನು
ವತ್ಸರಾಜನನೀಗ ಹಿಡಿದರವರಹುದು! || ೯ ||

ಅಯ್ಯೋ, ಹೇಗೆ ಹಿಡಿದರೆಂದು ಕೇಳಿದೆ?

ಭಟ—ನಲಾಗಿರಿಯ ಮೇಲೆ ಬೆಂಬತ್ತಿಹೋಗಿ ಹಿಡಿದರಂತೆ.

ಯೌಗಂಧರಾಯಣ—ವಾಹನಸಾಮರ್ಥ್ಯವೇನೋ ಉಂಟು. ಆದರೆ ಅದಕ್ಕೆ ತಕ್ಕ ಮಾವುತನಿಲ್ಲ.

ಆನೆಗಪ್ಪುದು ವೇಗ ಮಾವಟಿಗನಿಂದ.
ಶಿಕ್ಷೆಯಿಲ್ಲದ ನಲಾಗಿರಿಯನಿದನೀಗ
ವತ್ಸರಾಜನ ಕೂಡೆ ನಡಸುವನದಾರು? || ೧೦ ||

ಭಟ—ಆರ್ಯ, ಅಮಾತ್ಯರು ಹೇಳಿದರು—"ಆರ್ಯನು ಆಯುಧಾಗಾರದಲ್ಲಿರಬೇಕು. ಈ ಪ್ರದೇಶಕ್ಕೆ ಭಟರ ಕಾವಲಿದೆ" ಎಂದು.

ಯೌಗಂಧರಾಯಣ—ಓಹೋ, ಹಾಸ್ಯದ ಮಾತಿದು!

ವತ್ಸರಾಜನ ರೂಪದಗ್ನಿಯನು ಹಿಡಿದಿಟ್ಟು
ಯಾವ ಕಾಲದಲೆಲ್ಲ ಕಡೆ ಕಾವಲಿಡಬೇಕೊ
ಆ ಕಾಲದಲಿ ಸಿದ್ಧಮಾಡಿದರು ಮಂತ್ರಿಗಳು.
ರತ್ನ ಕಳವಾಗಿರಲು ಪೆಟ್ಟಿಗೆಗೆ ಕಾವಲೇಕೆ? || ೧೧ ||

ಭಟ—(ಮುಂದೆ ನಡೆದು) ಇದು ಆಯುಧಾಗಾರ. ಆರ್ಯನು ಪ್ರವೇಶಿಸಬೇಕು.

(ಪ್ರವೇಶಿಸಿ)

ಭಟ—ಅಮಾತ್ಯರ. "ಕಟ್ಟು ಬಿಚ್ಚಬೇಕು" ಎಂದು ಹೇಳಿದರು.

ಯೌಗಂಧರಾಯಣ—ನನಗೆ ವಿಶ್ರಾಂತಿ ಕೊಡು. ಭರತರೋಹಕನು ನನ್ನನ್ನು ನೋಡ ಬಯಸುವನೆಂಬುದು ಸ್ಪಷ್ಟವಾಯಿತು. ನಾನು ಕೂಡ ಭರತರೋಹಕನನ್ನು ನೋಡಲಪೇಕ್ಷಿಸುತ್ತೇನೆ.

ರೋಷದಿಂ ಪೇಗಿ ನುಡಿವೆನ್ನ ಕಲೆನುಡಿಗೇಳಿ
ಮಿಗೆ ನೊಯ್ದ ಮನದವನ; ಕೈಕೊಂಡ ನಯಗಳಲಿ,
ಛಲಗಳಲಿ, ತೂಗಿದನ; ಸಮಶಕ್ತಿಯುಳಿದವನ;
ಸೂಕ್ತವೆನಿಸಿದ ಶಾಸ್ತ್ರನಿಶ್ಚಯಗಳರಿಯದನ;
ಬುದ್ಧಿಯಿಂ ಮಿಗೆ ಮೋಸಹೋದವನ; ಕಾಳಗದಿ
ಮಾರ್ವರಿಸೆಗಳಲುರುಳಿ ನಾಚಿ ತಲೆತಗ್ಗಿಸಿದ
ಮಲ್ಲನಿರವನು ಪೋಲ್ವ ಭರತರೋಹಕನ; ನೆರೆ
ನೋಡಲೆನಗೂ ಬಯಕೆ ಮಿಗಲಪ್ಪುದು. || ೧೨ ||

(ಬಳಿಕ ಭರತರೋಹಕನು ಪ್ರವೇಶಿಸುತ್ತಾನೆ.)

ಭರತರೋಹಕ—ಎಲ್ಲಿ, ಎಲ್ಲಿ, ಆ ಯೌಗಂಧರಾಯಣನೆಲ್ಲಿ?

ವಂಚನೆಗಳಿಂ ತನ್ನ ಕಾರ್ಯಸಾಧಿಸಿದವನು;
ನೋಟಕರಿದಾದವನು; ದಣಿಹಿತಕೆ ಕೇಡಿನಲಿ

ಬಿದ್ದವನು ; ಪಲಕಾಲ ನಿಜಕಾರ್ಯ ಕೀಳ್ಗತಿಗೆ
ಸಂದೊಡಂ ಮಂತ್ರಪ್ರಯೋಗಗಳನೆಸಗಿದನು ;
ಮೆಟ್ಟಿ ಬಿಡಲುರಿದೆದ್ದ ಕನಲುಸರ್ಪದ ಪರಿಯ
ಹೋಲುವನನಿವನನಾಂ ನುಡಿಸುವೆನದೆಂತು ? || ೧೩ ||

ಭಟ—ಆರ್ಯ ಯೌಗಂಧರಾಯಣನು ಆರ್ಯನನ್ನು ನಿರೀಕ್ಷಿಸುತ್ತಾ ಆಯುಧಾಗಾರದಲ್ಲಿದ್ದಾನೆ.

ಭರತರೋಹಕ—ಸರಿ, ಸರಿ.

ಮಂತ್ರದಲಿ ಠಕ್ಕಿಸುತ ನೀಲಗಜದಿಂದಿವನ
ವಂಚಿಸಿದೆನೆಂದು.
ಆ ಹಗೆಯನಿವನು ಹಿಮ್ಮೆರಳಿಸಲು ನನ್ನನೇ
ಕಾದಿರುವನಿಂದು. || ೧೪ ||

ಭಟ—ಆರ್ಯ, ಈತನೇ ಅಮಾತ್ಯ.

ಭರತರೋಹಕ—(ಹತ್ತಿರ ಹೋಗಿ) ಭೋಃ, ಯೌಗಂಧರಾಯಣ.

ಯೌಗಂಧರಾಯಣ—ಭೋಃ !

ಭಟ—ಅಬ್ಬಾ ! ಸ್ವರ ಎಷ್ಟು ಗಂಭೀರವಾಗಿದೆ ! ಆರ್ಯನ ಇದೊಂದು ದನಿಯಿಂದಲೇ ಈ ಸ್ಥಳವೆಲ್ಲಾ ತುಂಬಿಹೋಯಿತು.

ಭರತರೋಹಕ—(ಕುಳಿತುಕೊಂಡು) ಭೋಃ, ಪ್ರತ್ಯಕ್ಷವಾಗಿ ನೋಡದೆ ಯೌಗಂಧರಾಯಣ ಎಂಬ ಹೆಸರನ್ನು ಮಾತ್ರ ಕೇಳಿದ್ದೆ. ಈಗ ಅದೃಷ್ಟವಶದಿಂದ ನಿನ್ನನ್ನು ಕಂಡೆ.

ಯೌಗಂಧರಾಯಣ—ಅದೃಷ್ಟವಶದಿಂದ ನಿನ್ನನ್ನು ಕಂಡೆನೆಂದೆಯಾ? ನೋಡು ನನ್ನನ್ನು,

ಇಂತು ನೆತ್ತರು ಬಳಿದ ಮೈಯವನ, ವೀರರಾ
ನಿಯಮವನೆ ಕೊಂಡವನ, ಗುರುವ ಗೆದ್ದನ ಕೊಂದು
ಶಾಂತನಾದಾ ದ್ರೌಣಿಯನು ಪೋಲ್ತು ನಿಂದವನ. || ೧೫ ||

ಭರತರೋಹಕ—ಅಬ್ಬಾ, ಮೋಸದಿಂದ ಆನೆಯನ್ನು ಪಯೋಗಿಸಿ ತಂತ್ರಮಾಡಿಯೂ ಆತ್ಮಪ್ರಶಂಸೆಯೇ !

ಯೌಗಂಧರಾಯಣ—ಏನು, ಮೋಸದಿಂದೆಂದೆಯಾ? ಹಾಗಾದರೆ ಇದು ಬಹು ಯೋಗ್ಯವಾದದ್ದಲ್ಲವೇ,

ಅಂದು ಮಲ್ಲಿಕಸಾಲ ವೃಕ್ಷಗಳಲೆಸಗಿದಾ
ಕೃತಕದಾನೆಯು ಮೋಸ? ಸೆರೆವಿಡಿದ ನಮ್ಮ ದೊರೆ
ತೋಳೆ ತಲೆದಿಂಬಾಗೆ ನೆಲದಮೇಲ್ಮಲಗಿದುದು?
[20]ದೊರೆಗಾನೆಗಳ ಗೆಲ್ವ ಬಲ್ಮೆಯಿರಲೊಡ್ಡಿದೆನು
ವೀಣೆಗಾ ಮೋಸವನು. ಮೊದಲೆ ನೀನ್ ಮಾಡಿದುದ
ನನುಸರಿಸಿ ನಡೆಯುವೆನು; ತಪ್ಪೇನು ನನ್ನದಿಲ್ಲಿ? || ೧೬ ||

ಭರತರೋಹಕ—ಅಯ್ಯಾ, ಯೌಗಂಧರಾಯಣ, ಮಹಾಸೇನನ ಮಗಳನ್ನು ಅಗ್ನಿಸಾಕ್ಷಿಯಾಗಿ ಶಿಷ್ಯೆಯೆಂದು ಪರಿಗ್ರಹಿಸಿ (ಇನ್ನೂ ಧಾರೆಯೆರೆದು) ಕೊಡದಿರುವ ಅವಳನ್ನು ಹಾರಿಸಿಕೊಂಡುಹೋದನಲ್ಲಾ, ಈ ಕಳ್ಳಕೆಲಸ ಯುಕ್ತವೇನಯ್ಯಾ, ಇದು?

ಯೌಗಂಧರಾಯಣ—ಬೇಡ, ಬೇಡ; ಹೀಗೆನ್ನಬೇಡ. ಇದು ಸ್ವಾಮಿಗೆ ಮದುವೆಯೇ ಸರಿ.

ಭರತಕುಲದಲಿ ಹುಟ್ಟಿ, ವತ್ಸರಿಗೆ ದೊರೆಯಾಗಿ,
ಪೆಂಡಿರೆಂದೆಣಿಸದೆಯೆ ಪಾಠಕಲಿಸುವನೇ? || ೧೭ ||

ಭರತರೋಹಕ—[21]ಈಗಲೂ ವತ್ಸರಾಜನು ಮಹಾಸೇನನಿಂದ ಸತ್ಕಾರಪಡೆದೇ ಇದ್ದಾನೆ. ಈಗ ಅದನ್ನೇಕೆ ಲಕ್ಷಿಸುವುದಿಲ್ಲ?

ಯೌಗಂಧರಾಯಣ—ಬೇಡ, ಬೇಡ; ಹಾಗೆನ್ನಬೇಡ.

ಈತನಪ್ಪಣೆಗಳನೆ ನಡಸುವ ನಲಾಗಿರಿಯು
ಶಿಕ್ಷೆಯಲಿ ನುರಿತವರ ಮಾತುಗಳ ಕೇಳುವುದು.
ಅದರಿಂದ ಬಿಡಿಸಿದನು ಆತ್ಮರಕ್ಷಣೆಗಾಗಿ,
ನೇಹಿಗರ ಜೀವರಕ್ಷಣೆಗಾಗಿ, ಹೆಸರಿಗಾಗಿ. || ೧೮ ||

ಭರತರೋಹಕ—ಹಾಗಾದರೆ, ನಲಾಗಿರಿಯನ್ನು ಹಿಡಿಯುವುದಕ್ಕಾಗಿ ಬಿಡುಗಡೆ ಹೊಂದಿದನೆಂದರೆ, ನಿಮ್ಮೊಡೆಯನನ್ನು ಮತ್ತೆ ಬಂಧಿಸಲಿಲ್ಲವಲ್ಲಾ.

ಯೌಗಂಧರಾಯಣ—ಆಗದೆಂದು ಮಾಡಿದ್ದು ಜನ ಏನೆಂದಾರೋ ಎಂಬ ಭಯದಿಂದ.

ಭರತರೋಹಕ—ನಿನಗೆ ರಾಜ್ಯವ್ಯವಹಾರ ಪ್ರತ್ಯಕ್ಷವಾಗಿದೆಯೆಂದು ಹೇಳುತ್ತಾರೆ. ಯುದ್ಧದಲ್ಲಿ ಗೆದ್ದ ಶತ್ರುಗಳ ವಿಷಯದಲ್ಲಿ ಶಾಸ್ತ್ರ ಏನು ಹೇಳುತ್ತದೆ?

ಯೌಗಂಧರಾಯಣ—ವಧೆ.

ಭರತರೋಹಕ—ವತ್ಸರಾಜನು ವಧಾರ್ಹನಾಗಿರುವಲ್ಲಿ ಅವನನ್ನು ನಾವು ಸತ್ಕರಿಸಿದ್ದೇಕೆ?

ಯೌಗಂಧರಾಯಣ—ಇದನ್ನು ನೋಡಿಯೇ ತಾನೇ ಪ್ರದ್ಯೋತನನ್ನು ಅಪಹರಿಸದೆ ಬಿಟ್ಟದ್ದು.

ಭರತರೋಹಕ—ಇದೂ ಸಂಭವವೆಂದು ಭಾವಿಸುವನೇ ನಿಮ್ಮ ಸ್ವಾಮಿ?

ಯೌಗಂಧರಾಯಣ—ಸಂಶಯವೇನು?

[22]ಕೈಗೆ ಸಿಕ್ಕಿದನಲ್ತೆ ನಿಮ್ಮದೊರೆ, ಆ ಸಾಧು ಪೊರೆದನವನ.
ಮದ್ದಾನೆಯೇರದೆಯೆ ಮೇಲಿಸ ಪತಾಕೆಯನು ಕೆಡಹರಲ್ತೆ! || ೧೯ ||

ಭರತರೋಹಕ—ಇರಲಿ, ಇರಲಿ. ಮಹಾಸೇನನಿಗೆ ಪ್ರತಿಕೂಲವನ್ನು ಮಾಡಿ ಕೌಶಾಂಬಿಯ ವಿಷಯದಲ್ಲಿ ನಿನ್ನ ಮನಸ್ಸಿನಲ್ಲಿ ಏನು ಮಾಡಿಕೊಂಡಿರುವೆ?

ಯೌಗಂಧರಾಯಣ—ಆಹಾ, ಎಂಥ ಹಾಸ್ಯದ ಮಾತಿದು!

ನಿಮ್ಮ ಮುಂದೆಯೆ ನಡೆದನುಳಿದ ಕಾರ್ಯದ ಕಥೆಯ ಕೇಳಲೇಕೆ?
ಬೇರ್ವರಸಿ ಮರಕಿತ್ತು ಕೊಂಬೆಯನು ಕಡಿಯಲಾಯಾಸವೇಕೆ? || ೨೦ ||

(ಪ್ರವೇಶಿಸಿ)

ಕಾಂಚುಕೀಯ—(ಕಿವಿಯಲ್ಲಿ) ಹೀಗೆ . . .

ಭರತರೋಹಕ—ಪ್ರಕಾಶವಾಗಿ ಹೇಳು.

ಕಾಂಚುಕೀಯ—"ಹಲವುಚಿತಕಾರಣದಿನಪಕಾರವೆನಗಿಲ್ಲ.
ಗುಣಕೆ ಮತ್ಸರವೇಕೆ? ಸ್ವೀಕರಿಸು ಬಂಗಾರವ." || ೨೧ ||

ಎಂದು (ಮಹಾರಾಜರು ಹೇಳಿದರು).

ಯೌಗಂಧರಾಯಣ—ಅಯ್ಯೋ ಕಷ್ಟ.

ನಾನು ಕಿಚ್ಚುಟ್ಟುರಿಸಿದಾ ಮನೆಗಳಾರಿಲ್ಲ.
ಅಂತೆಯೇ ಮಂತ್ರಿಗಳ ಹೃದಯವಾರಿಲ್ಲ.
ಇಂತಿರಲು ಈ ಪೂಜೆ[28] ದಂಡಧಾರಿಯದೆನಗೆ.
ಅಪರಾಧಿಯಾದವಗೆ ಸತ್ಕೃತಿಯೆ ವಧೆಯಲ್ತೆ. || ೨೨ ||

(ನೇಪಥ್ಯದಲ್ಲಿ ಹಾಹಾಕಾರರಾಗುತ್ತದೆ.)

ಭರತರೋಹಕ—ಓಹೋ,

ಮಂದಿರದ ಮೇಲಿಂದ ತಟ್ಟನೆದ್ದಿಹುದೇನು,
ಡೇಗೆರೆಕ್ಕೆಗೆ ಸೊಂದ ಕುರರಿಗಳದೆನಲು ಸದ್ದು ? || ೨೩ ||

ಅಯ್ಯಾ, ಇದೇನು ಸದ್ದು, ತಿಳಿದುಕೊಂಡು ಬಾ.

ಕಾಂಚುಕೀಯ—ಆರ್ಯನು ಆಜ್ಞಾಪಿಸಿದಂತೆ. (ಹೋಗಿ ಬಂದು) ಅಂಗಾರವತೀ ದೇವಿಯು ಶೋಕದಿಂದ ಎದೆಕುಗ್ಗಿದವಳಾಗಿ ಮೇಲ್ಮಾಳಿಗೆಯಿಂದ ಬಿದ್ದು ಶರೀರವನ್ನು ತೊರೆಯಬೇಕೆಂದಿರಲು, ಮಹಾಸೇನನು ಆಕೆಗೆ ಹೇಳಿದನು ; ಏನೆಂದರೆ—" ನಿನ್ನ ಮಗಳ ಮದುವೆ ಕ್ಷತ್ರಧರ್ಮದಿಂದ ವಿಹಿತವಾದ ರೀತಿಯಲ್ಲಿಯೇ ನಡೆದಿದೆ. ಈಗ ಹರ್ಷಕಾಲದಲ್ಲಿ ಅದೇಕೆ ಸಂಕಟಪಡುತ್ತಿರುವೆ ? ಚಿತ್ರಪಟದಲ್ಲಿ (ಬರೆದಿರುವ) ವಾಸವದತ್ತಾ ವತ್ಸರಾಜರಿಗೇ ಮದುವೆ ಮಾಡೋಣ " ಎಂದು. ಅಲ್ಲಿಯಾದರೋ—

ಈಗ ಮಡದಿಯರೆಲ್ಲ ಕಣ್ಣೀರ ಸುರಿಸುತ್ತ,
ಸಡಗರದಿ ಮಂಗಳದ್ರವ್ಯಗಳ ಹರಡಿಟ್ಟು,
ಮಿಗಿಲುಸಂತಸದಿಂದ ಪರಿವಿಡಿಯ ಪಲ್ಲಟಿಸಿ,
ಮದುವೆಮಂಗಳಗಳನು ಮಾಡುತಿಹರು. || ೨೪ ||

ಯೌಗಂಧರಾಯಣ—ಹೀಗೋ, ಮಹಾಸೇನನು ಸಂಬಂಧವನ್ನು ಒಪ್ಪುವನಲ್ಲವೇ ? ಆದ್ದರಿಂದ ತನ್ನಿ ಇನ್ನು ಬಂಗಾರವನ್ನು.

ಕಾಂಚುಕೀಯ—ಸ್ವೀಕರಿಸಬೇಕು. (ಹತ್ತಿರಕ್ಕೆ ತರುತ್ತಾನೆ.)

ಭರತರೋಹಕ—ಅಯ್ಯಾ, ಯೌಗಂಧರಾಯಣ, ಮಹಾಸೇನನು ನಿನಗೆ ಮತ್ತೆ ಯಾವ ಪ್ರಿಯವನ್ನು ಉಂಟುಮಾಡಬೇಕು ?

ಯೌಗಂಧರಾಯಣ—ಮಹಾಸೇನನು ನನ್ನಲ್ಲಿ ಪ್ರಸನ್ನನಾಗಿರುವಲ್ಲಿ, ಮತ್ತೇನನ್ನು ಅಪೇಕ್ಷಿಸಲಿ ?

(ಭರತವಾಕ್ಯ)

ಆಕಳ್ ಆಕುಲವಿಲ್ಲವಾಗಲಿ.
ಹಗೆಗಳುರುಬಲವಡಗಿ ಹೋಗಲಿ.
ನೆಲವನಿದನೆಲ್ಲವನು ನಮ್ಮಯ
ರಾಜಸಿಂಹನೆ ಆಳಲಿ. || ೨೫ ||

(ಎಲ್ಲರೂ ಹೋಗುತ್ತಾರೆ.)

ನಾಲ್ಕನೆಯ ಅಂಕ ಮುಗಿಯಿತು.

ಪ್ರತಿಜ್ಞಾ ಯೌಗಂಧರಾಯಣ ಮುಗಿಯಿತು.

---

# ಟಿಪ್ಪಣಿಗಳು

[1] 'ಪ್ರಕರಣ' ದಶರೂಪಕಗಳಲ್ಲೊಂದು. ಇದರಲ್ಲಿ ಐದರಿಂದ ಹಿಡಿದು ಹತ್ತರ ತನಕ ಅಂಕಗಳಿರಬಹುದು. ಆದರೆ ಈ ನಾಟಕದಲ್ಲಿ ನಾಲ್ಕೇ ಅಂಕಗಳಿವೆ. ಇದರ ಮುಂದಿನ ಭಾಗವಾದ ಸ್ವಪ್ನವಾಸವದತ್ತ ನಾಟಕದಲ್ಲಿ ಆರು ಅಂಕಗಳಿವೆ. ಈ ಎರಡು ನಾಟಕಗಳೂ ವತ್ಸರಾಜನ ಕಥೆಗೇ ಸಂಬಂಧಿಸಿ ಒಂದೇ ನಾಟಕದ ಪೂರ್ವೋತ್ತರ ಭಾಗಗಳಂತಿರುವುದರಿಂದ, ಮೊದಲು ಈ ಕಥೆ ಹತ್ತು ಅಂಕಗಳ ಪ್ರಕರಣವಾಗಿದ್ದು ಬಳಿಕ ರಂಗಸೌಕರ್ಯಕ್ಕಾಗಿಯೋ ಏನೋ ಒಡೆದು ಎರಡಾಗಿರಬಹುದೆಂದು ಕೆಲವರು ಊಹಿಸುತ್ತಾರೆ.

[2] ಸ್ನಿಗ್ಧೇಷ್ವಾಸಜ್ಯಂ ಕರ್ಮ ಯದ್ ದುಷ್ಕರಂ ಸ್ಯಾತ್
ಯೋ ವಾ ವಿಜ್ಞಾತಾ ಸತ್ಕೃತಾನಾಂ ಗುಣಾನಾಂ |
ಕ್ರೀತಂ ಸಾಮರ್ಥ್ಯಂ ಯಸ್ಯ ತಸ್ಯ ಕ್ರಮೇಣ
ದೈವಪ್ರಾಮಾಣ್ಯಾದ್ ಭ್ರಶ್ಯತೇ ವರ್ಧತೇ ವಾ ||

ಈ ಪದ್ಯದ ಉತ್ತರಾರ್ಧಕ್ಕೆ ಶ್ರೀಮಾನ್ ಗಣಪತಿಶಾಸ್ತ್ರಿಗಳು ಬೇರೆ ರೀತಿ ವ್ಯಾಖ್ಯಾನ ಮಾಡಿದ್ದಾರೆ. 'ಸ್ನಿಗ್ಧ ಗುಣಜ್ಞರಲ್ಲಿ ಯಾರದಾದರೂ ನ್ಯಾಯರೀತಿಯಾಗಿ ದಣಿಗೆ ಮಾರಲ್ಪಟ್ಟ ಸಾಮರ್ಥ್ಯವು ದಣಿಯ ಅದೃಷ್ಟವಶದಿಂದ ನೆರವೇರುವುದಿಲ್ಲ ಅಥವಾ ನೆರವೇರುತ್ತದೆ'' ಎಂಬುದು ಅವರು ಮಾಡಿರುವ ಅರ್ಥ. ಸ್ನಿಗ್ಧ ಗುಣಜ್ಞರಲ್ಲಿ ಯಾವನೇ ಆದರೂ ತನ್ನ ಸಂಪೂರ್ಣ ಸಾಮರ್ಥ್ಯವನ್ನೂ ವಿನಿಯೋಗಿಸಿ ಕೆಲಸ ಮಾಡಬೇಕು, ಕೆಲಸ ಕೈಗೂಡುವುದೂ ಇಲ್ಲದ್ದೂ ಯಜಮಾನನ ಅದೃಷ್ಟ—ಎಂಬುದು ಇದರ ತಾತ್ಪರ್ಯ. ಈ ಅರ್ಥವನ್ನು ಅಂಗೀಕರಿಸುವುದಾದರೆ ಉತ್ತರಾರ್ಧವನ್ನು

''ಆವನಾದೊಡಮುಳ್ಳ ಸಾಮರ್ಥ್ಯವನು ಮಾರಿ
ಮಾಡುವುದು. ಫಲಬಹುದೊ. . . . .''

ಎಂದು ತಿದ್ದಿಕೊಳ್ಳಬೇಕಾಗುತ್ತದೆ.

ಆದರೆ ಮೂರನೆಯ ಪಾದದಲ್ಲಿ ಎರಡನೆಯದರಲ್ಲಿಯಂತೆಯೇ ಕಷ್ಟಕಾರ್ಯವನ್ನು ವಹಿಸಲು ಮತ್ತೊಂದು ಬಗೆಯ ಅರ್ಹತೆಯನ್ನು ಸೂಚಿಸುತ್ತಾನೆಂದು ತೋರುತ್ತದೆ. ''ದಣಿಯಲ್ಲಿ ಪ್ರೀತಿಯುಳ್ಳವನು, ಅದಿಲ್ಲವಾದರೆ ಕಾರ್ಯದ ಗುಣವರಿತವನು, ಎರಡೂ ಇಲ್ಲದಿದ್ದರೆ ಹಣ ಮುಂತಾದ್ದಕ್ಕಾಗಿ ತನ್ನ ಸಾಮರ್ಥ್ಯವನ್ನು ಮಾರಿಕೊಂಡಿರುವವನು—ಈ ಮೂವರಲ್ಲಿ ಯಾರಿಗಾದರೂ ಒಪ್ಪಿಸಬಹುದು.'' ಇದು ನಾನು ಮಾಡಿಕೊಂಡಿರುವ ಅರ್ಥ. ದಣಿಯಲ್ಲಿ

ಪ್ರೀತಿಯಿಲ್ಲದೆ, ಕಾರ್ಯಗೌರವದಲ್ಲಿ ನಂಬಿಕೆಯಿಲ್ಲದೆ ಕೇವಲ ಸ್ವಂತ ಲಾಭದ ಆಸೆಯಿಂದ ಕಾರ್ಯವನ್ನು ಚೆನ್ನಾಗಿ ನಿರ್ವಹಿಸುವಂಥ ಜನಕ್ಕೇನೂ ಕೊರತೆಯಿಲ್ಲ.

3 'ಸಂಖ್ಯಾತ ವೀರಪುರುಷಂ ಚ ನಚಾನುರಕ್ತಂ'—ಈ ಪಂಕ್ತಿಗೆ "ವೀರರು ಎಣಿಸುವಷ್ಟು ಮಂದಿ (ಎಂದರೆ ಬಹು ಸ್ವಲ್ಪ ಜನ), ಅವರಿಗೂ ಆಳ್ದನಲ್ಲಿ ಒಲವಿಲ್ಲ" ಎಂದೂ ಅರ್ಥ ಮಾಡಬಹುದು.

4 'ಔಪಸ್ಥಿತಿಕಃ' ಉಪ=ಸಮೀಪದಲ್ಲಿ ಸ್ಥಿತಿ=ಇರುವಿಕೆ ಉಳ್ಳವನು ಎಂದರೆ ಸದಾ ಹತ್ತಿರ ಇರುವವನು.

5 'ಅನುತ್ಪನ್ನಕಾರ್ಯಪಂಡಿತೋ ರುಮಣ್ವಾನ್ ಕ್ವ ಗತಃ'—ಇದಕ್ಕೆ ಇನ್ನೊಂದು ರೀತಿ ಅರ್ಥ ಮಾಡಬಹುದು. ಕಾರ್ಯ ಉತ್ಪನ್ನವಾದ ಕೂಡಲೇ ಅದಕ್ಕೆ ತಕ್ಕ ಪರಿಹಾರಮಾಡುವವನು ಉತ್ಪನ್ನಕಾರ್ಯಪಂಡಿತ; ಅದಲ್ಲದವನು. ಈ ಮಾತಿನಲ್ಲಿ ವಿಪತ್ತು ಉಂಟಾದ ಕೂಡಲೆ ತಕ್ಕ ಉಪಾಯದಿಂದ ಅದನ್ನು ಪರಿಹರಿಸಿಕೊಳ್ಳಬೇಕಾಗಿತ್ತು. ರುಮಣ್ವಂತ ಹಾಗೆ ಮಾಡದೆ ತನ್ನ ಅಯೋಗ್ಯತೆಯನ್ನು ತೋರಿಸಿಕೊಂಡನೆಂಬ ನಿಂದೆ ಸೂಚಿತನಾಗುತ್ತದೆ.

6 'ಅರ್ಧನಿರ್ಮಿತಶಿಲಾಕರ್ಮೇವ ವಿಷಮದರ್ಶನಂ'—"ಅರ್ಧಭಾಗಕ್ಕೆ ಮಣಿಶಿಲೆಯನ್ನು ಬಳಿದಂತೆ ತೋರುತ್ತ ಭಯಂಕರವಾಗಿ ಕಾಣುವ" ಎಂದು ವ್ಯಾಖ್ಯಾನಕಾರರು ಅರ್ಥ ಮಾಡುತ್ತಾರೆ. 'As uneven in appearance as stone-work half-finished' ಎಂದು ಶ್ರೀಮಾನ್ ವುಲ್ನರ್ ಅವರ ಭಾಷಾಂತರ.

7 "ಅವನು ಎಲ್ಲರೆದುರಿಗೂ ಹಾಗೆ ಹೇಳಿದ್ದು ಮಾತ್ರವೇ ಸಾಲದು ಹೇಗಾದರೂ ಮಾಡಿ ದೊರೆ ಅಸಹಾಯನಾಗಿ ಹೋಗದಂತೆ ತಡೆಯಬೇಕಾಗಿತ್ತು. ಹಾಗೆ ಮಾಡದೆ ಹೋದದ್ದರಿಂದ ಅವನ ಸ್ವಾಮಿಭಕ್ತಿ ನಿರಾಕ್ಷೇಪಣೀಯವಾಗಲಿಲ್ಲ"—ಎಂದು ಭಾವ. ಇಲ್ಲಿ 'ಏವಮಪ್ಯವಕ್ತವ್ಯಾಂ ಸ್ವಾಮಿಭಕ್ತಿಮಿಚ್ಛಾಮಿ' ಎಂಬುದು ಮೂಲ. ಇದಕ್ಕೆ "ಈ ರೀತಿಯಲ್ಲಾದರೂ ನಿಂದೆಗೆ ಆಸ್ಪದವಿಲ್ಲದ ಸ್ವಾಮಿಭಕ್ತಿಯನ್ನು ಅಪೇಕ್ಷಿಸುತ್ತೇನೆ" ಎಂದು ಪದಶಃ ಅರ್ಥಮಾಡಬಹುದು. ಆದರೆ ಇದರ ತಾತ್ಪರ್ಯವೇನೆಂದು ಸ್ಪಷ್ಟವಾಗುವುದಿಲ್ಲ ಶ್ರೀಮಾನ್ ಗಣಪತಿ ಶಾಸ್ತ್ರಿಗಳು, 'ಏವಮಪಿ ಅನೇನಪ್ರಕಾರೇಣಾಪಿ ಅವಕ್ತವ್ಯಾಮಿಚ್ಛಾಮಿ ನಿರಪವಾದಾಂ ಮನ್ಯೇ' ಎಂದು ವ್ಯಾಖ್ಯಾನ ಮಾಡಿದ್ದಾರೆ ಅದರ ಪ್ರಕಾರ, ಈ ರೀತಿಯಿಂದಲಾದರೂ (ಅವನ) ಸ್ವಾಮಿಭಕ್ತಿ ನಿಂದೆಗೆ ಆಸ್ಪದವಿಲ್ಲದಂತಾಯಿತೆಂದು ಭಾವಿಸುತ್ತೇನೆ ಎಂದು ಅರ್ಥವಾಗುತ್ತದೆ. ಇಲ್ಲಿ 'ಅಪಿ' ಶಬ್ದಕ್ಕೆ ಸಾರ್ಥಕವೇನೋ ಕಾಣುವುದಿಲ್ಲ. 'ಏವಂ' ಎಂದು ಮಾತ್ರ ಇದ್ದರೆ ಸಾಕು ಹೀಗೆ ಅರ್ಥಮಾಡುವುದಕ್ಕೆ. 'ಇಚ್ಛಾಮಿ' ಎಂಬುದಕ್ಕೆ ಬದಲಾಗಿ 'ಇಚ್ಛತಿ' ಎಂದು ಪಾಠಾಂತರವಿದೆಯೆಂದು ಸೂಚಿಸುತ್ತಾರೆ. ಅದು ಸ್ವಲ್ಪ ವಾಸಿ. "(ರುಮಣ್ವಂತನು) ಈ ರೀತಿಯಿಂದಲಾದರೂ ತನ್ನ ಸ್ವಾಮಿಭಕ್ತಿ ಅನಿಂದ್ಯವಾಗಿರಬೇಕೆಂದು ಅಪೇಕ್ಷಿಸುತ್ತಾನೆ" ಎಂದಾಗುತ್ತದೆ. ಸ್ವಾಮಿಗೆ ಪ್ರತಿ ಹೇಳುವುದು, ಅದರಲ್ಲಿಯೂ ಎಲ್ಲರೆದುರಿಗೂ

ಹಾಗೆ ಹೇಳುವುದು ಉಚಿತವಲ್ಲ. ಆದರೂ ಸ್ವಾಮಿಗೆ ಒಳ್ಳೆಯದಾಗಬೇಕಾದರೆ ಹಾಗೆ ಎದುರಾಡುವುದು ಆವಶ್ಯಕವಾದಾಗ ಸ್ವಾಮಿಭಕ್ತನಾದವನು ಸುಮ್ಮನಿರುವುದು ಸರಿಯಲ್ಲ. ಸುಮ್ಮನಿದ್ದರೆ ಅವನ ಸ್ವಾಮಿಭಕ್ತಿಗೆ ಕಳಂಕ ತಪ್ಪುವುದಿಲ್ಲ. ಆದ್ದರಿಂದ ರುಮಣ್ವಂತನು ಎಲ್ಲರೆದುರಿಗೂ ಸ್ವಾಮಿಗೆ ಎದುರಾಡಿಯಾದರೂ ತನ್ನ ಸ್ವಾಮಿಭಕ್ತಿ ನಿಷ್ಕಳಂಕವಾದದ್ದೆಂದು ತೋರಿಸಿದನು.—ಎಂದು ಸಾಮಂಜಸ್ಯ ಹೇಳಬಹುದು.

ಶ್ರೀಮಾನ್‌ಗಳಾದ ವುಲ್ನರ್ ಮತ್ತು ಲಕ್ಷ್ಮಣ ಸರೂಪರವರು ಈ ವಾಕ್ಯಕ್ಕೆ 'I wish I too could show such unspeakable devotion to my master' (ನಾನು ಕೂಡ ಇಂಥ ಅವರ್ಣನೀಯವಾದ ಸ್ವಾಮಿಭಕ್ತಿಯನ್ನು ತೋರಿಸುವಂತಾಗಬಾರದೇ ?) ಎಂದು ಅರ್ಥ ಮಾಡಿದ್ದಾರೆ

8 'ಸ್ನೇಹಾತ್ ಪೂರ್ವವೃತ್ತಾಂತೋ ನಾವೇಕ್ಷಿತಃ'—"ದೊರೆಯ ವಿಷಯದಲ್ಲಿ ನನಗಿರುವ ಪ್ರೀತಿಯಿಂದ ನೀನು ಹೇಳಿದ ಹಿಂದಿನ ಸಮಾಚಾರವನ್ನು ಮರೆತು ಬಿಟ್ಟೆ" ಎಂದೂ ಅರ್ಥಮಾಡಬಹುದು ಶ್ರೀಮಾನ್‌ಗಳಾದ ವುಲ್ನರ್ ಮತ್ತು ಲಕ್ಷ್ಮಣ ಸರೂಪರವರು 'In my zeal I am forgetting your previous story' ಎಂದು ಭಾಷಾಂತರಮಾಡಿದ್ದಾರೆ.

9 'ಸರ್ವತೋ ಅಭಿದ್ರುತಾಃ ತೇ ಪಾಪಾಃ'—'ಆ ಪಾಪಿಗಳು ಸುತ್ತ ಮುತ್ತಿಕೊಂಡರು' ಎಂದೂ ಅರ್ಥವಾಗುತ್ತದೆ ಆದರೆ ವತ್ಸರಾಜನ ಪರಾಕ್ರಮವನ್ನು ಅವರು ಪ್ರತ್ಯಕ್ಷ ಕಂಡವರಾದ್ದರಿಂದ ಅವನಿಗೆ ಎಚ್ಚರವಾದ ಕೂಡಲೆ ಹೆದರಿ ಓಡಿಹೋದರೆಂದು ಹೇಳುವುದು ಹೆಚ್ಚು ಸಮಂಜಸವಾಗಿ ತೋರುತ್ತದೆ

10 'ಸಃ ಸ್ವಕಂ ವಿಸ್ಮಯಾದಾತ್ಮಾನಮಾವಿಷ್ಕರೋತಿ'—ಅವನು ಗರ್ವಪಟ್ಟುಕೊಂಡು ವಂಚನೆಯಿಂದ ಕುತ್ಸಿತವಾದ ತನ್ನ ಬುದ್ಧಿಯನ್ನು ತೋರಿಸಿಕೊಳ್ಳುತ್ತಿದ್ದಾನೆ ಸ್ವಾಮಿಯ ವೃತ್ತಾಂತವನ್ನು ಹೇಳಿ ಕಳುಹಿಸುವ ನೆವದಲ್ಲಿ ಕೌಶಾಂಬೀ ಜನರೆದುರಿಗೆ ತನ್ನ ಬುದ್ಧಿಸಾಮರ್ಥ್ಯವನ್ನು ಮೆರಸುತ್ತಿರಬಹುದಲ್ಲವೇ ?—ಶ್ರೀಮಾನ್ ಗಣಪತಿ ಶಾಸ್ತ್ರಿಗಳು. 'By his arrogance he stands revealed.' (ಅವನು ಗರ್ವದಿಂದ ತನ್ನ ಸ್ವರೂಪವನ್ನು ತೋರಿಸಿಕೊಳ್ಳುತ್ತಿದ್ದಾನೆ)—ಶ್ರೀಮಾನ್‌ಗಳಾದ ವುಲ್ನರ್ ಮತ್ತು ಸರೂಪ್.

11 'ತೇನ ಹಿ ಅನರ್ಹಪ್ರತಿಕ್ರಿಯಂ ಅನಿರ್ವಿಷ್ಟಭರ್ತೃಪಿಂಡಂ, ಅನುಪಸ್ಕೃತರಾಜಸತ್ಕಾರಂ ಯದಿ ಖಲು ಮಾಂ ದ್ರಷ್ಟವ್ಯಂ ಮನ್ಯತೇ ಸ್ವಾಮೀ'—ನಾನು ತಕ್ಕ ಪ್ರತಿಹೂಟ ಹೂಡದವನೆಂದೂ ವ್ಯರ್ಥವಾಗಿ ಒಡೆಯನ ಅನ್ನವುಂಡಿರುವನೆಂದೂ ಸುಮ್ಮಸುಮ್ಮನೆ ರಾಜಮರ್ಯಾದೆ ಪಡೆದಿರುವನೆಂದೂ ಭಾವಿಸಿ ನನ್ನನ್ನು ಸ್ವಾಮಿ ನೋಡಹೇಳಿದರೆ ? ಎಂದೂ,

ಸ್ವಾಮಿಯ ಅನ್ನವನ್ನುಂಡು ರಾಜಬಹುಮಾನವನ್ನು ಪಡೆದು ತಾನಾಗಿಯೇ ಪ್ರತೀಕಾರಮಾಡತಕ್ಕವನಾದ ನನ್ನನ್ನು, ಅಂಥವನಲ್ಲವೆಂದು ಭಾವಿಸಿ, ಪ್ರತೀಕಾರದಲ್ಲಿ ತೊಡಗಿಸು

ವುದಕ್ಕಾಗಿ ನೋಡಹೇಳುವ ಆವಶ್ಯಕವೇ ಇರಲಿಲ್ಲ. ಹಾಗಿದ್ದರೂ ನೋಡೆಂದು ಹೇಳಿದರೆ? ಎಂದೂ—ಶ್ರೀಮಾನ್ ಗಣಪತಿ ಶಾಸ್ತ್ರಿಗಳ ವ್ಯಾಖ್ಯಾನ.

[12] ಏತನ್ನಿಮಿತ್ತಂ ಕಸ್ಮಾ ಅಪಿ ನ ದಿತ್ಸಾಮೋ ವಾಸವದತ್ತಾಂ: 'ಇವನಿಗಾಗಿ—ವತ್ಸ ರಾಜನಿಗೆ ಕೊಡಬೇಕೆಂದಿರುವುದರಿಂದ—ಮತ್ತೆ ಯಾರಿಗೂ ಮಾತು ಕೊಡುವುದಕ್ಕೆ ನನಗೆ ಇಷ್ಟವಿಲ್ಲ' ಎಂದೂ ಅರ್ಥಮಾಡಬಹುದು. 'ಏತನ್ನಿಮಿತ್ತಂ ವತ್ಸರಾಜೇನ ನಿಮಿತ್ತೇನ, ಕಸ್ಮಾ ಅಪಿ ಅನ್ಯಸ್ಮೈಕಸ್ಮೈಚಿತ್ ವರಾಯ'—ಎಂದು ಶ್ರೀಮಾನ್ ಗಣಪತಿ ಶಾಸ್ತ್ರಿಗಳ ವ್ಯಾಖ್ಯಾನ.

[13] [ಯೌಗಂಧರಾಯಣ ಮೊದಲಾದವರು ವೇಷಾಂತರದಿಂದ ಉಜ್ಜಯಿನಿಯಲ್ಲಿದ್ದು ಕೊಂಡು ಸಂಕೇತಸ್ಥಾನದಲ್ಲಿ ಸೇರಿ ವತ್ಸರಾಜನ ಬಿಡುಗಡೆಗಾಗಿ ಮಂತ್ರಾಲೋಚನೆ ನಡಸು ವುದನ್ನು ವರ್ಣಿಸುವ ಈ ಅಂಕಕ್ಕೆ ಮಂತ್ರಾಂಕವೆಂದೂ ಹೆಸರುಂಟು. ಇಲ್ಲಿ 'ಓಹೋ! ದೇಗುಲದ' ಎಂಬಲ್ಲಿಂದ 'ಒಬ್ಬನಿಗೆ ಬಟ್ಟೆಬೇಕು ಮತ್ತೊಬ್ಬನಿಗೆ ದುಡ್ಡುಬೇಕು' ಎನ್ನುವ ವರೆಗೂ ಕಪಟವೇಷದ ಯೌಗಂಧರಾಯಣಾದಿಗಳು ಆಯಾ ವೇಷಕ್ಕೊಪ್ಪುವಂತೆ ಆಡುವ ಮಾತು ಗಳಲ್ಲಿ ಮಂತ್ರಸಂಬಂಧವಾದ ಗೂಢಾರ್ಥವೊಂದು ಅಡಗಿದೆಯೆಂದು ಶ್ರೀಮಾನ್ ಗಣಪತಿ ಶಾಸ್ತ್ರಿಗಳು ವ್ಯಾಖ್ಯಾನಮಾಡಿದ್ದಾರೆ. ಮುಂದೆ ಅಗ್ನಿಗೃಹದ ಆಲೋಚನೆಯಲ್ಲಿ ಯೌಗಂಧ ರಾಯಣಾದಿಗಳ ಅಭಿಪ್ರಾಯ ಸ್ಪಷ್ಟವಾಗಿಯೇ ತಿಳಿದು ಬರುವುದರಿಂದ ಈ ಮಾತುಗಳಲ್ಲಿ ಗೂಡಾರ್ಥವಿದೆಯೆಂದು ಭಾವಿಸದೆ ಹೋದರೂ ತೊಡಕಾಗುವುದಿಲ್ಲ. ಆದರೂ ಶ್ರೀಮಾನ್ ಗಣಪತಿ ಶಾಸ್ತ್ರಿಗಳ ವಿವರಣೆ ಸ್ವಾರಸ್ಯವಾಗಿ ತೋರುವುದರಿಂದ ಆ ಅರ್ಥವನ್ನೂ ಇಲ್ಲಿ ವಿವರಿಸುತ್ತೇನೆ.]

ವಿದೂಷಕ—ದೇಗುಲದ ಮೆಟ್ಟಿಲಿನಲ್ಲಿ (ದೇವಕುಲ ಪೀಠಿಕಾಯಾಂ) = ರಾಜ ಪ್ರದ್ಯೋತನ ವಂಶಕ್ಕೆ ಮಾಲಿಕೆಯಾಗಿರುವ ವಾಸವದತ್ತೆಯಲ್ಲಿ, ನನ್ನ ಕಡುಬಿನ ಪಾತ್ರೆಯನ್ನು (ಮೋದಕ ಮಲ್ಲಕಂ) = ಪ್ರಿಯಶ್ರೇಷ್ಠನಾದ ವತ್ಸರಾಜನನ್ನು, ಇಟ್ಟು; ಎಂದರೆ ವತ್ಸರಾಜನು ವಾಸವದತ್ತೆಗೆ ಆತ್ಮಾರ್ಪಣಮಾಡಿರುವುದನ್ನು ತಿಳಿದು; ದಕ್ಷಿಣೆಯ ದುಡ್ಡುಗಳನ್ನು ಎಣಿಸಿ = ವತ್ಸರಾಜನು ಕೊಟ್ಟ ಪ್ರತಿ ಸಂದೇಶಗಳನ್ನು ಗ್ರಹಿಸಿ. ಗಂಟುಹಾಕಿ = ಮನಸ್ಸಿನಲ್ಲಿ ಗಟ್ಟಿಮಾಡಿ ಕೊಂಡು, ಹಿಂದಿರುಗಿ ಬಂದು ನೋಡಿದರೆ, ಕಡುಬಿನ ಪಾತ್ರೆ (ಮೋದಕ ಮಲ್ಲಕಂ = ಮೋದಕ = ವಾಸವದತ್ತಾಹರಣ ರೂಪವಾದ ಸಂತೋಷ ಕಾರ್ಯವನ್ನು, ಮಲ್ಲಕಂ = ನಿರ್ವಹಿಸುವುದರಲ್ಲಿ ಸಮರ್ಥಪಾತ್ರನಾದ) ಯೌಗಂಧರಾಯಣನು ಕಾಣುವುದೇ ಇಲ್ಲ. ಹಿಂದೆ ಮುಂದೆ ಸುತ್ತುತ್ತಿದ್ದ ಅವನು = (ಅವಲಗ್ನಃ, ಆರನೆಯ ಭಾಗದಲ್ಲಿ ಆಸಕ್ತಿಯುಳ್ಳವನು ಎಂದರೆ) ಪ್ರದ್ಯೋತ ಮಹಾರಾಜನು, ಒಂದು ಕಡುಬಿನಿಂದಲೇ ತೃಪ್ತಿಪಟ್ಟುಕೊಂಡು = ಸರ್ವಪ್ರಧಾನ ನಾದ ವತ್ಸರಾಜನನ್ನು ಸೆರೆಹಿಡಿದ ದೊಡ್ಡ ಲಾಭವೊಂದರಿಂದಲೇ ತೃಪ್ತಿಪಟ್ಟುಕೊಂಡು, ನನ್ನನ್ನು ಎಂದರೆ ಯೌಗಂಧರಾಯಣನೇ ಮೊದಲಾದ ನಮ್ಮನ್ನು, ಅನುಸರಿಸಿ ಬಂದಿಲ್ಲ. ವತ್ಸರಾಜ ನನ್ನು ಹಿಡಿದೆವೆಂಬ ಗರ್ವದಿಂದ ನಮ್ಮನ್ನು ಲೆಕ್ಕಕ್ಕೆ ತೆಗೆದುಕೊಳ್ಳುತ್ತಿಲ್ಲವೆಂದು ಅಭಿಪ್ರಾಯ. ಪ್ರಾಕಾರ. . . . ದಾರಿಯಿಲ್ಲ. ಪ್ರಾಕಾರ = ವತ್ಸರಾಜ್ಯದ ರಕ್ಷಕನೂ ಶತ್ರು ಪ್ರತಿರೋಧ

ಕನೂ ಆದ್ದರಿಂದ ಪ್ರಾಕಾರದಂತಿರುವ ಯೌಗಂಧರಾಯಣನು, ಎತ್ತರ (ಉನ್ನತ) ವಾಗಿರುವುದರಿಂದ = ಬುದ್ಧಿಯಲ್ಲಿ ಮಿಗಿಲಾದವನಾದ್ದರಿಂದ, ನಾಯಿಗಳಿಗೆ = ನೀಚಬುದ್ಧಿಗಳಾಗಿ ನಾಯಿಗಳಂತಿರುವ ಪ್ರದ್ಯೋತಮಂತ್ರಿಗಳಿಗೆ, ದಾರಿಯಿಲ್ಲ. ಎಂದರೆ ಮಹಾ ಬುದ್ಧಿಶಾಲಿಯಾದ ಯೌಗಂಧರಾಯಣನ ಮೇಲೆ ಅಲ್ಪಮತಿಗಳಾದ ಪ್ರದ್ಯೋತಮಂತ್ರಿಗಳ ಉಪಾಯ ಸಾಗುವುದಿಲ್ಲ. ಬುತ್ತಿ. . . . ಮೋಹಕವಾಗಿಲ್ಲ. ದಾರಿಗರಿಗೆ = ನಿತ್ಯಸಂಚಾರಿಗಳಾಗಿ ದಾರಿಗರಂತಿರುವ ಗೂಢಚಾರರಿಗೆ, ಬುತ್ತಿ ಬೇಕಾದಷ್ಟಿರುವುದರಿಂದ = ವತ್ಸರಾಜನನ್ನು ಹಿಡಿದ ಸಂತೋಷದಿಂದ ಮಹಾಸೇನನು ಕೊಟ್ಟ ಧನಕನಕಾದಿಗಳು ಬೇಕಾದಷ್ಟಿರುವುದರಿಂದ, ಅವರಿಗೆ ಮೋಹಕವಾದದ್ದು ಮತ್ತೇನೂ ಇಲ್ಲ. ಅವರು ಇಷ್ಟಾರ್ಥವನ್ನು ಪಡೆದು ತೃಪ್ತರಾಗಿ ಸುಮ್ಮನಿದ್ದಾರೆ ಎಂದು ಭಾವ. ಅಥವಾ, ನಮ್ಮ ಕಡೆಯ ಗೂಢಚಾರರಿಗೆ ಬುತ್ತಿ ಬೇಕಾದಷ್ಟಿರುವುದರಿಂದ (ಅಕ್ಷತ ಭಕ್ತತಯಾ) = ಸ್ವಾಮಿಭಕ್ತಿ ಸ್ವಲ್ಪವೂ ಕುಂದದಿರುವುದರಿಂದ, ಶತ್ರುಗಳು ತೋರಿಸುವ ಆಸೆಗೆ ಅವರು ಒಳಗಾಗುವಂತಿಲ್ಲ. (ಇದರಿಂದ ಪ್ರದ್ಯೋತ, ಅವನ ಮಂತ್ರಿಗಳು, ಶತ್ರುಗಳ ಗೂಢಚಾರರು, ನಮ್ಮ ಕಡೆಯ ಭಟರು—ಇವರು ಯಾರಿಂದಲೂ ಯೌಗಂಧರಾಯಣನಿಗೆ ಅಪಾಯ ಸಂಭವಿಸಿರುವ ಸಂಭವವಿಲ್ಲ ಎಂದು ತಾತ್ಪರ್ಯ.) ಇಲ್ಲ. . . ತಿಂದುಬಿಟ್ಟೆನೋ ! ಅಥವಾ ಮನೆಮನೆಗೂ ತಿರುಗುವ ಮಾತಾಳಿಯಾದ ನಾನೇ ಏನಾದರೂ ಮರೆತು ಗುಟ್ಟು ರಟ್ಟಾಗುವಂತೆ ಮಾತಾಡಿಬಿಟ್ಟೆನೋ ! ತೇಗಿ ನೋಡುತ್ತೇನೆ = ಏನೇನಾಡಿದೆನೋ ಜ್ಞಾಪಿಸಿಕೊಂಡು ನೋಡುತ್ತೇನೆ. ಉಬ್ಬಿದ ಹಂದಿಯ ಬಸ್ತಿಯಂತೆ. ಇದು ಹಾಸ್ಯದ ಮಾತು, ಗೂಢಾರ್ಥವಿಲ್ಲ. ಶುದ್ಧವಾದ ಗಾಳಿಯನ್ನೇ ಹೊರಬಿಡುತ್ತಿದೇನೆ = ಗುಟ್ಟು ಬಿಟ್ಟುಕೊಡದ ನಿರ್ದೋಷವಾದ ಮಾತುಗಳನ್ನೇ ಆಡುತ್ತಿದೇನೆ, ನಾನೆಂದೂ ಗುಟ್ಟು ರಟ್ಟು ಮಾಡಿಲ್ಲ. ಅಥವಾ . . . ಮಾಡಿಕೊಂಡಿರಬಹುದೇ ! ಶಿವನೇ = ಕಲ್ಯಾಣಬುದ್ಧಿಯಾದ ಯೌಗಂಧರಾಯಣನೇ, ಲೋಹಿತಕಾತ್ಯಾಯನಿಗೆ ಸೇರಿದ್ದು = ವಾಸವದತ್ತೆಗೆ ಸೇರಿದ್ದು ಎಂದರೆ ಅವಳಲ್ಲೇ ಮನಸ್ಸಿಟ್ಟು ಅವಳ ವಸ್ತುವೇ ಆಗಿರುವ ವತ್ಸರಾಜನು, ತನಗೇ ಸೇರಿದ್ದೆಂದು ತಿಳಿದು = ತನ್ನವನೇ ಎಂದುಕೊಂಡು, ಎಂದರೆ ಎಂದಿದ್ದರೂ ತನಗೆ ವಶನಾಗತಕ್ಕವನೇ ಸರಿ (ಅವನನ್ನು ಸುಲಭವಾಗಿ ಬಿಡಿಸಿಕೊಂಡು ಹೋಗಬಹುದು) ಎಂದು ಭಾವಿಸಿ, (ಮೋದಕವನ್ನು = ಇಷ್ಟಪಟ್ಟು ಮೊದಲೇ ಗೊತ್ತುಮಾಡಿಕೊಂಡಿದ್ದಂತೆ ಸಂಕೇತಸ್ಥಾನದಲ್ಲಿ ಆಲೋಚನೆಗೆ ಸೇರಬೇಕೆಂಬ ಸಂಗತಿಯನ್ನು) ಕೈವಶಮಾಡಿಕೊಂಡಿರಬಹುದೇ ? (ಪ್ರತಿಹಸ್ತೀಕೃತಂ, ಪ್ರತಿಹಸ್ತ: ಪ್ರತಿನಿಧಿ:) = ಪ್ರಧಾನವಲ್ಲವೆಂದು ಉದಾಸೀನಮಾಡಿರಬಹುದೇ ? ಬಗೆಬಗೆಯ . . ಚೇಷ್ಟೆಮಾಡುತ್ತಿದ್ದಾನೇ ? ಶುಭಾಶುಭಫಲ ಹೇಳುವುದು, ಚಿಕಿತ್ಸೆಮಾಡುವುದು ಮೊದಲಾದ ಅನೇಕ ನಡವಳಿಕೆ ಇಟ್ಟುಕೊಂಡಿರುವ ಬ್ರಹ್ಮಚಾರಿ = ಶ್ರಮಣಕ ವೇಷಧಾರಿಯಾದ ರಮಣ್ವಂತನು, ಚೇಷ್ಟೆಮಾಡುತ್ತಿದ್ದಾನೇ = ಸಂಕೇತಕ್ಕೆ ತಪ್ಪಿದ್ದಾನೇ ? ಆಗಲಿ, ಸ್ವಲ್ಪ ನೋಡುತ್ತೇನೆ = ಯೌಗಂಧರಾಯಣನು ಬರುವವರೆಗೂ ಕಾದಿರುತ್ತೇನೆ. ಅಥವಾ, ಶಿವದರ್ಶನಮಾಡುತ್ತೇನೆ ಎಂದೂ ಅರ್ಥಮಾಡಬಹುದು.

ಸನ್ನ ಸವಿಗಡುಬು . . . ಬಿದ್ದಿದೆ ವತ್ಸರಾಜನ ಜೊತೆಯಲ್ಲೇ ವಾಸವದತ್ತೆಯನ್ನು ಹಾರಿಸಿ ಕೊಂಡು ಹೋಗುವ ನನ್ನ ಇಷ್ಟಕಾರ್ಯ, ಅದನ್ನು ನೆರವೇರಿಸಲು ಸಮರ್ಥನಾದ ಯೌಗಂಧ ರಾಯಣ ಅಧೀನ, ಅಥವಾ ಇದು ಪರಶಿವನ ಕೃಪೆಯಿಂದಲೇ ನೆರವೇರಬೇಕಾಗಿದೆ. ಇದನ್ನು ತೆಗೆದುಕೊಳ್ಳುತ್ತೇನೆ = ಶಿವನ ಪಾದಮೂಲವನ್ನು ಆಶ್ರಯಿಸುತ್ತೇನೆ. ಕೊಡಪ್ಪಾ . . . ನನ್ನೊಡೆಯಾ = ಸ್ವಾಮಿ, ನನ್ನ ಇಷ್ಟಾರ್ಥ ಸಿದ್ಧಿಯಾಗುವಂತೆ ಮಾಡು, ಯೌಗಂಧ ರಾಯಣನು ಬೇಗ ಬರುವಂತೆ ಮಾಡು. ನೀನೂ ನನಗೆ ಕಳ್ಳನೇ ? ಕಳ್ಳನಲ್ಲ ಎಂದರೆ ನೀನು ನನ್ನ ಕಾರ್ಯಕ್ಕೆ ವಿಘ್ನಮಾಡತಕ್ಕವನಲ್ಲ ಎಂದು ಭಾವ ಅಯ್ಯೋ ಇದು ಚಿತ್ರ . . . ಒರಸಿನೋಡುತ್ತೇನೆ. ಒಳಗೆ ಯಾರಾದರೂ ಅವಿತುಕೊಂಡಿದ್ದಾರೋ ಎಂದು ಗೋಡೆಯನ್ನು ಪರೀಕ್ಷಿಸುವುದಕ್ಕಾಗಿ ಮಾಡುವ ಉಪಾಯ ಇದರಲ್ಲೇನೂ ಗೂಢಾರ್ಥವಿಲ್ಲ ಹೀ, ಹೀ . . . ಕಾಣುತ್ತಿದೆ. ಚಿತ್ರಕಾರ = ಅದ್ಭುತ ನೀತಿಕುಶಲ, ಯೌಗಂಧರಾಯಣ, ಭೇಷ್ ! ಬಣ್ಣ ಗಳನ್ನು . . . ಕಾಣುತ್ತಿದೆ = ನೀನು ಕಾರ್ಯವಿಧಾನಗಳನ್ನು ಉಚಿತ ರೀತಿಯಲ್ಲಿ ಹೊಂದಿಸಿರು ವುದರಿಂದ ಎಷ್ಟೆಷ್ಟು ಪರೀಕ್ಷಿಸಿ ನೋಡಿದರೆ ಅಷ್ಟಷ್ಟು ಸಾರವತ್ತಾಗಿ ಕಾಣುತ್ತಿದೆ. ಆಗಲಿ . . . ನೀರೆಲ್ಲಿದ್ದೀತು ? ಇದು ಹತ್ತಿರದ ಕೊಳದಲ್ಲಿ ಯಾರಾದರೂ ಅಡಗಿದ್ದು ಹೊಂಚುತ್ತಿದ್ದಾರೆಂದು ಪರೀಕ್ಷಿಸುವ ಉಪಾಯ ತಿಳಿಗೊಳ (ಶುದ್ಧ ತಟಾಕ) ಯಾರ ಸುಳಿವೂ ಇಲ್ಲದ ಕೊಳ. ನನ್ನ ಹಾಗೆಯೇ . . . ನಿರಾಶನಾಗಲಿ ಈ ಸವಿಗಡುಬುಗಳಲ್ಲಿ = ಈಗಿನ ನಿರ್ಣಯದಂತೆ ವತ್ಸರಾಜನೊಬ್ಬನನ್ನೇ ಬಿಡಿಸಿಕೊಂಡು ಹೋಗುವ ವಿಚಾರದಲ್ಲಿ, ಶಿವನು ಕೂಡ = ಯೌಗಂಧ ರಾಯಣನು ಕೂಡ, ನಿರಾಶನಾಗಲಿ = ಅಪೇಕ್ಷೆಯಿಲ್ಲದವನಾಗಲಿ

ಕಡುಬುಗಳು ! ಕಡುಬುಗಳು ! ಇದು ಗೆಳೆಯರನ್ನು ಕರೆಯುವ ಸಂಕೇತ.

ವಿದೂಷಕ—ಅಯ್ಯೋ, ಈ ಹುಚ್ಚನು . . ಬರುತ್ತಿದ್ದಾನೆ ಈ ಹುಚ್ಚನು = ಹುಚ್ಚು ವೇಷದ ಯೌಗಂಧರಾಯಣನು, ಸವಿಗಡುಬುಗಳನ್ನು ಹಿಡಿದುಕೊಂಡು = ಆಲೋಚನೆಗೆ ಇಲ್ಲಿ ಸೇರಬೇಕೆಂಬ ಸಂಕೇತವನ್ನು ಮಾರದೆ ; ಉಳಿದ ಮಾತುಗಳಲ್ಲಿ ವಿಶೇಷಾರ್ಥವಿಲ್ಲ ನಿಲ್ಲು, ನಿಲ್ಲು . . . ಒಡೆದು ಬಿಡುತ್ತೇನೆ. ಯೌಗಂಧರಾಯಣಾ, ಸ್ವಲ್ಪ ನಿದಾನಿಸು. ಮೊದಲು ನಿರ್ಣಯಿಸಿದ್ದಂತೆ ಕೆಲಸ ಮಾಡಲು ಆತುರಪಡಬೇಡ. ಈ ದೊಣ್ಣೆ ಕೋಲಿನಿಂದ = ವತ್ಸರಾಜನ ವಿರುದ್ಧ ಸಂದೇಶಗಳಿಂದ, ನಿನ್ನ ತಲೆ ಒಡೆದುಬಿಡುತ್ತೇನೆ = ನಿನ್ನ ಹೂಟವನ್ನು ವ್ಯರ್ಥವಾಡಿ ಬಿಡುತ್ತೇನೆ.

ವಿದೂಷಕ—ನನ್ನ ಕಡುಬುಗಳನ್ನು ತೆಗೆದುಕೊಂಡು ಬಾ = ಮಂತ್ರಾಲೋಚನೆಗೆ ಅವಕಾಶಕೊಡು.

ಹುಚ್ಚ—ಯಾವ ಕಡುಬುಗಳು ? = ಯಾವ ಆಲೋಚನೆಗಳು ? ಆಲೋಚನೆಮಾಡುವು ದೆಲ್ಲ ಮೊದಲೇ ಮುಗಿದಿರುವುದರಿಂದ ಈಗ ಮತ್ತೇಕೆ ಅದರ ಗೊಡವೆ ? ಎಂದು ಅಭಿಪ್ರಾಯ. ಎಲ್ಲಿ ಕಡುಬುಗಳು ? = ಯಾವ ಸಂಬಂಧವಾಗಿ ಆಲೋಚನೆ ? ಎಂದರೆ, ಸ್ವಪಕ್ಷದವರ ದೋಷ

ನಿವಾರಣೆಗೋ, ಪರಪಕ್ಷದವರಿಂದಾದ ದೋಷಪರಿಹಾರಕ್ಕೋ? ಯಾರ ಕಡುಬುಗಳು ? = ನಮ್ಮ ಸ್ವಾಮಿ ಯಾರವನಾಗಿದ್ದಾನೆ ? ಎಂದರೆ, ನಮಗೆ ವಶ್ಯನಾಗಿರುವನೋ ? ಅಥವಾ ಶತ್ರುಗಳಿಗೆ ವಶ್ಯನಾಗಿರುವನೋ ? (ಒಂದು ವೇಳೆ ಪರರಿಗೇ ವಶ್ಯನಾಗಿರುವ ಸಂದರ್ಭದಲ್ಲಿ), ಈ ಕಡುಬುಗಳನ್ನು = ನಮ್ಮ ಈ ವೇಷಗಳನ್ನು, ಎಸೆದುಬಿಡಬೇಕೋ ? = ಬಿಟ್ಟು ಬಿಡೋಣವೇ ? ಕಟ್ಟಿಡಬೇಕೋ = ಫಲವಾಗುವವರೆಗೂ ಇಟ್ಟುಕೊಂಡೇ ಇರೋಣವೇ ? ಅಥವಾ ತಿನ್ನಬೇಕೋ = (ಸ್ವಾಮಿಯ ಬಿಡುಗಡೆಗೆ ಅಡ್ಡಿಯಾಗಿರುವ ಶತ್ರುಗಳನ್ನು) ಧ್ವಂಸ ಮಾಡಿಬಿಡೋಣವೊ ?

ವಿದೂಷಕ—ತಿನ್ನಬಾರದು = ಶತ್ರುಗಳನ್ನು ಧ್ವಂಸಮಾಡಲು ಯತ್ನಿಸಬಾರದು , ಬಿಸುಡಲೂ ಬಾರದು = ವೇಷವನ್ನು ತೊರೆದು ಪ್ರಯತ್ನವಿಮುಖರೂ ಆಗಬಾರದು.

ಹುಚ್ಚ—ಈ ನನ್ನ . . ತೋರಿಸುತ್ತಿದೆ = ನನ್ನ ಮನಸ್ಸು ಶತ್ರುಗಳನ್ನು ಧ್ವಂಸಮಾಡಿಬಿಡಬೇಕೆಂದು ತವಕಿಸುತ್ತಿದೆ.

ವಿದೂಷಕ—ಅಯ್ಯಾ ಹುಚ್ಚಾ . . . ಸಿಕ್ಕಿಕೊಳ್ಳಬೇಡ. ಯೌಗಂಧರಾಯಣಾ, ನನಗೆ ಮಂತ್ರಾವಕಾಶಕೊಡು (ಎಲ್ಲ ಸಂಗತಿಯನ್ನು ತಿಳಿಸುತ್ತೇನೆ). ಇನ್ನೊಬ್ಬರದರಲ್ಲಿ = (ಪರಕೀಯೋ) ವತ್ಸರಾಜನು ಪರಾಧೀನನಾಗಿರುವಾಗ (ಎಂದರೆ, ವಾಸವದತ್ತಗೆ ಮನಸೋತಿರುವಾಗ) ಅವನೊಬ್ಬನನ್ನೇ ಬಿಡಿಸಿಕೊಂಡು ಹೋಗುವ ಯತ್ನಮಾಡಿ, ಶತ್ರುಗಳ ಕೈಗೆ ಸಿಕ್ಕಿಕೊಳ್ಳಬೇಡ.

ಹುಚ್ಚ—ಕಡುಬುಗಳೇ = ಅಲ್ಲಲ್ಲೀ ಗುಪ್ತನಾಗಿಟ್ಟಿರುವ ವತ್ಸರಾಜಭಟರೇ, ನನ್ನನ್ನು ಕಾಪಾಡುತ್ತಾರೆ. ಬಗೆಬಗೆಯ ಅಲಂಕಾರವ = ನಾನಾರೀತಿಯ ವೇಷಗಳನ್ನು, ಧರಿಸಿರುವ ನಮ್ಮ ಭಟರು, ತೃಪ್ತಿಯ ತರೆ = ನಮಗೆ ತೃಪ್ತಿಯುಂಟುಮಾಡುವುದಕ್ಕಾಗಿ, ನಿಂದಿಹವು = ಈ ಉಜ್ಜಯಿನಿಯಲ್ಲಿಯೇ ಕಾದು ನಿಂತಿದ್ದಾರೆ ಅರಮನೆಯಲಿ ಬೆಲೆಗೊಟ್ಟವು = ವತ್ಸರಾಜನ ಅರಮನೆಯಲ್ಲಿ ತಕ್ಕ ಪುರಸ್ಕಾರಹೊಂದಿರುವವರು. ಕಾಲಸ್ಥಿತಿ. . . . ಮೆಲ್ಲಿತ್ತಹವು = ಈಗಿನ ಸಂದರ್ಭವನ್ನು ನೋಡಿಕೊಂಡು, ಸದ್ಯಕ್ಕೆ ಮಾತ್ರ ತಮ್ಮ ಪರಾಕ್ರಮವನ್ನು ಪ್ರಕಾಶಪಡಿಸದೆ ದುರ್ಬಲರಂತಿದ್ದಾರೆ.

ವಿದೂಷಕ—ಅಯ್ಯಾ ಹುಚ್ಚ . . . ಹೋಗಬೇಕಾಗಿದೆ = ಯೌಗಂಧರಾಯಣ, ನನಗೆ ಮಂತ್ರಾವಕಾಶಕೊಡು. ಈಗ ಮಾಡುವ ಮಂತ್ರನಿಶ್ಚಯದೊಡನೆ ನಾನು ಸ್ವಾಮಿಯ ಬಳಿಗೆ ಹೋಗಬೇಕಾಗಿದೆ.

ಹುಚ್ಚ—ನಾನು ಕೂಡ. . . . ಹೋಗಬೇಕಾಗಿದೆ = ನಾನು ಈಗ ನಿಶ್ಚಯಿಸಿರುವ ಉಪಾಯದಂತೆ ಕೆಲಸ ನಡಸಿ ಸ್ವಾಮಿಯನ್ನು ಕೌಶಾಂಬಿಗೆ ಕರೆದುಕೊಂಡು ಹೋಗಬೇಕಾಗಿದೆ. (ಏನುಮಾಡಬೇಕೆಂಬುದು ಮೊದಲೇ ಗೊತ್ತಾಗಿರುವುದರಿಂದ ಮತ್ತೆ ಆಲೋಚಿಸಬೇಕಾಗಿಲ್ಲ ಎಂದು ತಾತ್ಪರ್ಯ.)

ವಿದೂಷಕ—ನೀನೇನು ಐರಾವಣವೇ = ಮೊದಲೇ ನಿರ್ಣಯಿಸಿರುವಂತೆ ಕಾರ್ಯ ನಡಸಲು ನಿನಗೇನು ದಿವ್ಯಶಕ್ತಿಯಿದೆಯೇ ?

ಹುಚ್ಚ—ಹೌದು. . . . ಹತ್ತಿಕೊಂಡಿಲ್ಲ = ನಾನೇನೋ ಪೂರ್ವನಿಶ್ಚಯದಂತೆ ಕೆಲಸ ಮಾಡಲು ಸಮರ್ಥನಾಗಿದ್ದೇನೆ; ಆದರೆ ನಮ್ಮ ರಾಜನಿನ್ನೂ ಹಾಗೆ ಮಾಡುವಂತೆ ನನಗೆ ಆಜ್ಞೆ ಮಾಡಿಲ್ಲ. ಕಾಲ್ಕಟ್ಟುಗಳಿಂದ. . . . ಕೇಳಿದೆ = ಕ್ಷುದ್ರರಾದ ಶಾಲಂಕಾಯನಾದಿಗಳಿಂದ ನಮ್ಮ ಸ್ವಾಮಿ ಸೆರೆಗೊಳಗಾದನು. ಜಲಧಾರೆ. . . . ಒಡೆದುಹಾಕಿಬಿಡುತ್ತೇನೆ. ಜಲಧಾರೆಗಳನ್ನು ತಡೆಯುವ = ಶತ್ರುಸೇನೆಯ ಮುಂದೊತ್ತನ್ನು ತಡೆಯುವ, ಮಿಂಚಿನ ಚಾವಟಿಗಳಿಂದ = ಮಿಂಚಿನಂತೆ ಥಟ್ಟನೆ ಬಂದು ಮುತ್ತುವ ನಮ್ಮ ಗೂಢ ಭಟರಿಂದ, ಹೊಡೆದು, ಮೋಡದ ಕಟ್ಟನ್ನು = ಮೇಘದಂತೆ ಲೋಕಪ್ರಿಯನಾದ ನಮ್ಮ ರಾಜನ ಸೆರೆಯನ್ನು, ಒಡೆದು ಬಿಡುತ್ತೇನೆ. ನಮ್ಮ ಗೂಢ ಭಟರೊಡನೆ ಅಕಸ್ಮಾತ್ತಾಗಿ ಶತ್ರುಗಳ ಮೇಲೆ ಬಿದ್ದು ನಮ್ಮ ದೊರೆಯನ್ನು ಬಿಡಿಸಿಕೊಂಡು ಹೋಗುತ್ತೇನೆ ಎಂದು ತಾತ್ಪರ್ಯ.

ವಿದೂಷಕ—ಏ ಹುಚ್ಚ. . . . ಕೂಗಿಕೊಂಡುಬಿಡುತ್ತೇನೆ = ನೀನು ನನ್ನೊಬ್ಬನ ಸಂಗಡಲೇ ಆಲೋಚಿಸಲು ಇಷ್ಟಪಡದಿದ್ದರೆ, ಎಂದರೆ, ರುಮಣ್ವಂತನೂ ಬರಲೆಂದು ನಿದಾನಿಸುತ್ತಿದ್ದರೆ, ಅವನನ್ನು ಕರೆಯುತ್ತೇನೆ.

ಹುಚ್ಚ—ಕೂಗು. . . . ಕರೆಯಬಹುದು.

ವಿದೂಷಕ—ಅಬ್ರಹ್ಮಣ್ಯ . . . ಹುಚ್ಚ—ನಾನೂ ಕೂಗಿಕೊಳ್ಳುತ್ತೇನೆ. ಈ ಮಾತುಗಳೆಲ್ಲ ಒಬ್ಬರನ್ನೊಬ್ಬರು ಕರೆಯುವ ಸಂಕೇತಗಳು.

(ನೇಪಥ್ಯದಲ್ಲಿ ರುಮಣ್ವಂತನ ಮಾತು.) ಹೆದರಬೇಡ—ನಾನೂ ಮಂತ್ರಾಲೋಚನೆಗೆ ಬರುತ್ತಿದೇನೆ.

ವಿದೂಷಕ—ಚಂದ್ರ ಬಂದರೆ . . . ಬಂದಂತೆಯೇ = ಯೌಗಂಧರಾಯಣನು ಬಂದರೆ ಉಳಿದ ನಾವೆಲ್ಲರೂ ಸೇರಿಯೇ ಸೇರುತ್ತೇವೆ. ಅಯ್ಯೋ . . . ಕೊಡುತ್ತಿದ್ದಾನೆ = ಈ ರುಮಣ್ವಂತನು ಕರೆದ ಕೂಡಲೇ ಆಲೋಚನೆಗೆ ಬಂದನು. ಯೌಗಂಧರಾಯಣನಾದರೋ ಎದುರಿಗಿದ್ದರೂ ಅವಕಾಶಕೊಡಲಿಲ್ಲ. ಇವನನ್ನು ಅನುಸರಿಸುವುದು ಕಷ್ಟ.

ವಿದೂಷಕ—ಈ ಹುಚ್ಚನು . . . ಕೊಡುವುದಿಲ್ಲ = ಯೌಗಂಧರಾಯಣನು ನನಗೆ ಮಂತ್ರಾಲೋಚನೆಗೆ ಅವಕಾಶ ಕೊಡುವುದಿಲ್ಲ.

ಶ್ರಮಣಕ—ಎಲ್ಲಿ, ಕಡುಬನ್ನು ನೋಡೋಣ = ನನಗೂ ಮಂತ್ರಾವಕಾಶ ಬೇಕಾಗಿದೆ.

ಹುಚ್ಚ—ನೋಡು. . . ಯೌಗಂಧರಾಯಣನ ಒಪ್ಪಿಗೆಯ ಸೂಚನೆ.

ಶ್ರಮಣಕ—ಥೂ, ಥೂ. ಇದು ಸಂತೋಷ ಸೂಚಕವಾದ ಸಂಕೇತ. ಯೌಗಂಧರಾಯಣನು ಮಂತ್ರಾಲೋಚನೆಗೆ ಒಪ್ಪಿದ್ದಕ್ಕಾಗಿ ಸಂತೋಷ.

ವಿದೂಷಕ—ಅಯ್ಯಯ್ಯೋ. . . ಲಾಭವಾಯಿತು = ನಾನು ಬಹು ಭಾಗ್ಯವಂತ,

ಮೊದಲು ನಾನು ಕೇಳಿಕೊಂಡು ಬಂದ ಸ್ವಾಮಿಸಂದೇಶಗಳನ್ನು ರುಮಣ್ವಂತನು ಅನುಮೋದಿಸಲು ಯೌಗಂಧರಾಯಣನೂ ಮನಸ್ಸಿಗೆ ತಂದುಕೊಂಡಿದ್ದಾನೆ ಎಂದು ಭಾವ. ಇನ್ನೂ ಆಲೋಚನೆ ನಡೆಯದಿದ್ದರೂ ಅವರಿಬ್ಬರೂ ತನ್ನ ಅಭಿಪ್ರಾಯವನ್ನು ಅವಶ್ಯವಾಗಿ ಒಪ್ಪಿಕೊಳ್ಳುವರೆಂಬ ಭರವಸೆಯಿಂದ ಆಡಿದ ಮಾತು.

ಶ್ರಮಣಕ—ಅಯ್ಯಾ . . . ಕೊಟ್ಟುಬಿಡು = ಯೌಗಂಧರಾಯಣ, ವಿದೂಷಕನು ಕೋರಿದಂತೆ ಮಂತ್ರಾವಕಾಶ ಕೊಡು. ಬೆಳ್ಳಗಿರುವ = ಅನಿಷ್ಟ ಶಂಕಾಕಲಂಕಗಳಿಲ್ಲದೆ ಶುದ್ಧವಾಗಿರುವ, ತಿರುವಿ ತಿರುವಿ ತುಂಬಾ ಕೋಮಲವಾಗಿರುವ (ಬಹುಪಿಷ್ಟ ಸಮೃದ್ಧಕೋಮಲಾನಿ) = ಅನೇಕ ವೇಳೆ ವಿಮರ್ಶಿಸಲ್ಪಟ್ಟು ಹೆಚ್ಚು ಫಲಕೊಡುವಂತಾಗಿರುವ ಮತ್ತು ಸುಲಭಸಾಧ್ಯಗಳಾದ ನಮ್ಮ ಉಪಾಯಗಳು, ಸವಿಯಾಗಿರುವುವು = ಬಹು ಸೊಗಸಾಗಿರುವುವು. ಅವನ್ನು ತಿಂದು ನಿನಗೆ ಕ್ಷಯ ಬರದಿರಲಿ = ನಮ್ಮೊಡನೆ ಆಲೋಚಿಸದೆ ನೀನೊಬ್ಬನೇ ನಿರ್ಣಯಿಸಿದರೆ ತೊಂದರೆಯಾದೀತು.

ವಿದೂಷಕ—ಅಯ್ಯೋ . . . ದೊರಕಿದಂತಾಯಿತಲ್ಲಾ. ಕೂಡಲೇ ಕೌಶಾಂಬಿಗೆ ಹೊರಡಬೇಕೆಂದು ತಿಳಿಸಿದರೆ, ವಾಸವದತ್ತೆಯನ್ನೂ ಸಂಗಡ ಕರೆದುಕೊಂಡೇ ಹೋಗಬೇಕಾದ್ದರಿಂದ ನಿದಾನಿಸಬೇಕೆಂದು ವಿರುದ್ಧ ಸಂದೇಶವೇ ದೊರೆಯಿತು.

ಶ್ರಮಣಕ—ಶಾಪಹಾಕಿಬಿಡುತ್ತೇನೆ ಅಸಮಾಧಾನ ಸೂಚನೆಯ ಮಾತು.

ವಿದೂಷಕ—ಈ ಹುಚ್ಚನು . . . ನಿಂತಿದ್ದಾನೆ = ಯೌಗಂಧರಾಯಣನು ರುಮಣ್ವಂತನ ಮಾತನ್ನು ಮನ್ನಿಸಿ ಮಂತ್ರಾಲೋಚನೆಗೆ ಒಪ್ಪಿ ಸಿದ್ಧನಾಗಿ ನಿಂತಿದ್ದಾನೆ.

ಶ್ರಮಣಕ—ಬಾರಪ್ಪಾ . . . ಮಾಡಿಸಿಕೊ = ಸ್ವಾಮಿಯ ಸಂದೇಶಗಳನ್ನು ಹೇಳಿ ನಮ್ಮನ್ನು ಸಂತೋಷಪಡಿಸಿ, ನಮ್ಮ ಮೆಚ್ಚಿಗೆ ಪಡೆದುಕೊ.

ವಿದೂಷಕ—ನನ್ನ . . . ಮಾಡಿಸುತ್ತೇನೆ. ನನ್ನ ಮನಸ್ಸಿನಲ್ಲಿಟ್ಟುಕೊಂಡಿರುವ ಸ್ವಾಮಿಸಂದೇಶಗಳನ್ನು ತಿಳಿಸಿ ನಿಮ್ಮನ್ನು ತೃಪ್ತಿಗೊಳಿಸುತ್ತೇನೆ. ನನಗೆ . . . ಬಂದವು = ಅವು ಸ್ವಾಮಿಯಿಂದ ಪ್ರೀತಿಪೂರ್ವಕವಾಗಿ ತೆಗೆದುಕೊಂಡು ಬಂದಿರುವ ಸಂದೇಶಗಳು. ಅವು ನಿಮಗೂ ಸಂತೋಷವುಂಟುಮಾಡುತ್ತವೆ. ನಿಮ್ಮಿಬ್ಬರ ಸಹಾಯದಿಂದ ನಮ್ಮ ಸ್ವಾಮಿಗೂ ಇಷ್ಟಾರ್ಥ ಸಿದ್ಧಿಯಾಗಲಿ. ಈ ಹುಚ್ಚನು = ಯೌಗಂಧರಾಯಣನು, ಅಭಿಮುಖನಾಗಿ = ನನ್ನ ಕೆಲಸಕ್ಕೆ ಅನುಕೂಲನಾಗಿ, ಅಗ್ನಿಗೃಹಕ್ಕೆ ಹೋಗುತ್ತಿದ್ದಾನೆ. ಮಧ್ಯಾಹ್ನ . . . ನಿರ್ಜನವಾಗಿರುತ್ತದೆ. ಹೊತ್ತು ಜನಸಂಚಾರಕ್ಕೆ ಅನುಕೂಲವಲ್ಲವಾದ್ದರಿಂದಲೂ, ಇಲ್ಲಿ ಹೊಂಚಿ ಕೇಳುವಂಥವರು ಯಾರೂ ಇಲ್ಲವಾದ್ದರಿಂದಲೂ ಸ್ಥಳವೂ ಕಾಲವೂ ಮಂತ್ರಾಲೋಚನೆಗೆ ಅನುಕೂಲವಾಗಿವೆಯೆಂದು ಅಭಿಪ್ರಾಯ. ನಾನು ಕೂಡ . . . ಇಟ್ಟು ಹೋಗುತ್ತೇನೆ. ದಕ್ಷಿಣೆಯ ದುಡ್ಡುಗಳನ್ನು = ಸ್ವಾಮಿಯ ಸಂದೇಶಗಳನ್ನು, ದಾರಿಮನೆಯಲ್ಲಿ (ಮಾರ್ಗಗೇಹೇ) = ದಾರಿಗಳಿಗೆ ಎಂದರೆ ಸಮಸ್ತ ಉಪಾಯಗಳಿಗೂ ಮನೆಯಂತಿರುವ ಯೌಗಂಧರಾಯಣನಲ್ಲಿ,

ಇಟ್ಟು ಹೋಗುತ್ತೇನೆ. ಒಬ್ಬನಿಗೆ ಬಟ್ಟೆ ಬೇಕು, ಒಬ್ಬನಿಗೆ ದುಡ್ಡು ಬೇಕು. ಶ್ರಮಣಕನಿಗೆ ಕಡುಬಿನ ಮೇಲೆ ಆಸೆ, ನನಗೆ ದುಡ್ಡಿನ ಮೇಲೆ. ಆದ್ದರಿಂದ ಕಡುಬನ್ನು ಅವನಿಗೆ ಕೊಟ್ಟು ಬಿಡುತ್ತೇನೆ ಎಂದು ಬಾಹ್ಯಾರ್ಥ [ಒಬ್ಬನಿಗೆ ನನ್ನ ಬಟ್ಟೆಯ ಮೇಲೆ ಕಣ್ಣು; ಮತ್ತೊಬ್ಬನಿಗೆ ನನ್ನ ದುಡ್ಡಿನ ಮೇಲೆ ಆಸೆ. ಆದ್ದರಿಂದ ನಾನು ಜಾಗರೂಕನಾಗಿರಬೇಕು ಎಂದೂ ಅರ್ಥ ವಾಗುತ್ತದೆ.] ವತ್ಸರಾಜನಿಗೆ ವಾಸವದತ್ತೆ ಬೇಕು, ಯೌಗಂಧರಾಯಣನಿಗೆ ವತ್ಸರಾಜ ಬೇಕು. ವತ್ಸರಾಜನನ್ನು ಸೆರೆಯಿಂದ ಬಿಡಿಸಿ, ಕೌಶಾಂಬಿಗೆ ಕರೆದುಕೊಂಡು ಹೋಗಬೇಕೆಂಬುದು ಯೌಗಂಧರಾಯಣನ ಇಷ್ಟ, ವಾಸವದತ್ತೆಯನ್ನೂ ಸಂಗಡ ಕರೆದುಕೊಂಡೇ ಹೊರಡ ಬೇಕೆಂಬುದು ವತ್ಸರಾಜನ ಇಷ್ಟ. ಇಲ್ಲಿ, ಬಟ್ಟೆಯನ್ನಪೇಕ್ಷಿಸುವವನಿಗೆ ಅದನ್ನು ಕೊಡದಿದ್ದರೆ ದುಡ್ಡು ಬೇಕಾದವನಿಗೆ ದುಡ್ಡು ಹೇಗೆ ಸಿಕ್ಕಲಾರದೋ ಹಾಗೆ, ಸ್ವಾಮಿಯ ಇಷ್ಟ ಸಿದ್ಧಿಯಾಗ ದಿದ್ದರೆ, ಯೌಗಂಧರಾಯಣನ ಇಷ್ಟವೂ ಸಿದ್ಧಿಯಾಗುವುದಿಲ್ಲವಾದ್ದರಿಂದ ಅವನು ಸ್ವಾಮಿಯ ಇಷ್ಟ ಸಿದ್ಧಿಗೆ ಉಪಾಯಗಳನ್ನು ಹುಡುಕಿಯೇ ತೀರುತ್ತಾನೆ ಎಂದು ತಾತ್ಪರ್ಯ.

14 "ಯೌಗಂಧರಾಯಣ —ಹಂತ ಭೋಃ! ಅತಿಕ್ರಾಂತಯೋಗಕ್ಷೇಮಾ ರಾತ್ರಿಃ. ದಿವಸ ಇದಾನೀಂ ಪ್ರತಿಪಾಲ್ಯತೇ.

ಅಹಃ ಸಮುತ್ತೀರ್ಯ ನಿಶಾ ಪ್ರತೀಕ್ಷ್ಯತೇ
ಶುಭೇ ಪ್ರಭಾತೇ ದಿವಸೋಽನು ಚಿಂತ್ಯತೇ |
ಅನಾಗತಾರ್ಥಾನ್ಯಶುಭಾನಿ ಪಶ್ಯತಾಂ
ಗತಂ ಗತಂ ಕಾಲಮವೇಕ್ಷ್ಯ ನಿರ್ವೃತಿಃ ||

ರುಮಣ್ವಂತ.—ಸಮ್ಯಗ್ ಭವಾನಾಹ. ತುಲ್ಯೇಽಪಿ ಕಾಲವಿಶೇಷೇ ನಿಶೈವ ಬಹುದೋಷಾ ಬಂಧನೇಷು. ಕುತಃ,

ವ್ಯವಹಾರೇಷ್ವಸಾಧ್ಯಾನಾಂ ಲೋಕೇ ನಾಪ್ರತಿರಜ್ಯತಾಂ
ಪ್ರಭಾತೇ ದೃಷ್ಟದೋಷಾಣಾಂ ವೈರಿಣಾಂ ರಜನೀಭಯಂ ||"

ಈ ಭಾಗದ ಅರ್ಥವಿವರಣೆಯಲ್ಲಿ ಸ್ವಲ್ಪ ತೊಡಕಿದೆ.

೧. ವ್ಯಾಖ್ಯಾನಕಾರರ ಅಭಿಪ್ರಾಯವನ್ನು ಈ ರೀತಿ ವಿವರಿಸಬಹುದು·

"ಯೌಗಂಧರಾಯಣ—ಅಪಾಯಕರವಾದ ರಾತ್ರಿ ದೈವವಶದಿಂದ ಕಳೆಯಿತು. ಈಗ ಹಗಲು ಕ್ಷೇಮವಾಗಿ ಕಳೆಯುವುದೋ ಇಲ್ಲವೋ ನೋಡಬೇಕು. ನಮಗೆ ಹಗಲು ಸುಖವಾಗಿ ಕಳೆದರೆ ರಾತ್ರಿ ಏನಾಗುವುದೋ ಎಂಬ ಚಿಂತೆ; ರಾತ್ರಿ ಸುಖವಾಗಿ ಕಳೆದು ಬೆಳಗಾದರೆ ಹಗಲೇನಾಗುವುದೋ ಎಂಬ ಚಿಂತೆ. ಹೀಗೆ ಹಗಲೂ ರಾತ್ರಿ ಮುಂದೆ ಬರಬಹುದಾದ ಕೇಡು ಗಳನ್ನೇ ಯೋಚಿಸುತ್ತಾ ಕಳವಳಪಡುತ್ತಿರುವ ನಮಗೆ ಸುಖವೆಂಬುದಿದ್ದರೆ ಅದು ಇಷ್ಟು ದಿನ

ಸುಖವಾಗಿ ಕಳೆಯಿತಲ್ಲಾ ಎಂದು ನಿರಪಾಯವಾಗಿ ಕಳೆದ ಕಾಲವನ್ನು ನೆನೆಯುವುದರಿಂದ ಬರಬೇಕೇ ಹೊರತು ಬೇರೆ ಇಲ್ಲ.

ರುಮಣ್ವಂತ—ನೀನು ಹೇಳಿದ್ದು ಸರಿ. ಬರಿಯ ಕಾಲಸಂಬಂಧವಾದ ವ್ಯತ್ಯಾಸವನ್ನು ನೋಡಿದರೆ ಹಗಲೂ ಒಂದೇ, ರಾತ್ರಿಯೂ ಒಂದೇ ಆದರೂ ಬಂಧನಗಳಲ್ಲಿ ಎಂದರೆ ನಮ್ಮ ಹಾಗೆ ಮನಸ್ಸು ಮಾತು ಮೈಗಳನ್ನು ಕಾದುಕೊಂಡು ಬಹು ಬಗೆಯ ಛದ್ಮಗಳನ್ನು ನಡಸಬೇಕಾಗಿರುವ ಇಂಥ ಸಂಕಟಸಮಯಗಳಲ್ಲಿ ರಾತ್ರಿಯಲ್ಲಿಯೇ ಬಹಳ ಅನರ್ಥಗಳು. ಏಕೆಂದರೆ— ವ್ಯವಹಾರಗಳಲ್ಲಿ ಅಸಾಧ್ಯರಾಗಿ ಎಂದರೆ ಗುಣದಿಂದ ಇವರು ಇಂಥವರೆಂದು ಆಳ ತಿಳಿಯಲು ಶಕ್ಯವಿಲ್ಲದವರಾಗಿ, ಜನರಲ್ಲಿ ಉದಾಸೀನ ವೃತ್ತಿಯಿಂದ ಇದ್ದು ಅವರೊಡನೆ ಸ್ನೇಹ ಬೆಳಸದವರಾಗಿ, ಹಗಲು ದೋಷಗಂಡವರಾಗಿ ಎಂದರೆ (ದಿವಾ ಕಥಂಚಿತ್ ಪರವಿಜ್ಞಾತಚರ್ಯಾಚ್ಛಲಾನಾಂ) ಹಗಲು ಹೊತ್ತಿನಲ್ಲಿ ತಮ್ಮ ಕಪಟಚರ್ಯೆ ಹೇಗೋ ಹೊರಬಿದ್ದು ಪರರಿಗೆ ತಿಳಿದು ಹೋದವರಾಗಿ, ಆದ್ದರಿಂದಲೇ ವೈರಿಗಳಾಗಿ ಎಂದರೆ ತಮ್ಮ ಶತ್ರುಭಾವ ಪ್ರಕಟವಾದವರಾಗಿ ಇರುವವರಿಗೆ ರಾತ್ರಿ ಪ್ರಾಣಭಯಕ್ಕೆ ಕಾರಣವಾಗುತ್ತದೆ

ವ್ಯವಹಾರಗಳಲ್ಲಿ ಅಸಾಧ್ಯರಾದ್ದರಿಂದ ಲೋಕವಿದ್ವೇಷಕ್ಕೆ ಅವಕಾಶವಿದೆ. ಜನರಲ್ಲಿ ಉದಾಸೀನರಾದ್ದರಿಂದ ಇವರಿಗೆ ಹಿತವರಿಲ್ಲ. ಇಂಥವರ ದೋಷ ಹೇಗೋ ಒಂದು ರೀತಿಯಲ್ಲಿ ಹೊರಬಿದ್ದುಬಿಟ್ಟರೆ ಅದನ್ನರಿತವನು ಅವರು ವೈರಿಗಳೆಂದು ನಿಶ್ಚಯಿಸಿ ಅವರನ್ನು ರಾತ್ರಿ ಹೊಂಚುತ್ತಿದ್ದು ಕೊಂದುಬಿಡುತ್ತಾನೆ.''

೨. ವುಲ್ನರ್-ಸರೂಪ್ ಭಾಷಾಂತರದಲ್ಲಿ ''ರಾತ್ರಿ ಸುಖವಿಲ್ಲ. ಆದ್ದರಿಂದ ಹಗಲು ಬಂದೀತೇ ಎಂದು ಎದುರುನೋಡುತ್ತಿರುತ್ತೇವೆ. ಈಗಿನ ತೊಂದರೆಗಳಲ್ಲಿ ಮುಂದೆ ಬರಲಿರುವ ಅನುಕೂಲಗಳನ್ನು ಕಾಣುತ್ತಾ (ಎಂದರೆ ಈಗ ಕಷ್ಟಪಟ್ಟರೂ ಮುಂದಿನ ಸುಖಕಾಲ ಹತ್ತಿರ ಬರುತ್ತಿರುವುದೆಂಬ ಭರವಸೆಯಿಂದ) ಕಾಲ ಕಳೆಯುತ್ತಿರುವುದರಲ್ಲಿ ನಾವು ತೃಪ್ತಿಪಟ್ಟುಕೊಳ್ಳಬೇಕು. ಕಾಲವೆಲ್ಲಾ ಒಂದೇ ಆದರೂ ರಾತ್ರಿ ತೊಡಕುಗಳು ಹೆಚ್ಚು. ತಾವು ಕೈಕೊಂಡ ಕಾರ್ಯದಲ್ಲಿ ಸಿದ್ಧಿ ಪಡೆಯಲಾರದ ಅಥವಾ ಜನರ ಅಪ್ರೀತಿಗೆ ಪಾತ್ರರಾಗಿದ್ದು ಹಗಲು ತಮ್ಮ ತಪ್ಪನ್ನು ಕಂಡುಕೊಳ್ಳುವ ಶತ್ರುಗಳಿಗೆ ರಾತ್ರಿ ಮಹಾ ಭಯಂಕರ'' ಎಂಬ ಅರ್ಥ ಬರುವಂತಿದೆ. ಇಲ್ಲಿ 'ಅನಾಗತಾರ್ಥಾನಿ ಅಶುಭಾನಿ ಪಶ್ಯತಾಂ' ಎಂಬುದಕ್ಕೆ 'ಈಗಿನ ತೊಂದರೆಗಳಲ್ಲಿ ಮುಂದಿನ ಅನುಕೂಲ ಕಾಣಬೇಕು' ಎಂಬ ಅರ್ಥ ಸಹಜವಾಗಿಲ್ಲ, ತಿರಿಚಿದ್ದು. 'ವ್ಯವಹಾರೇಷ್ವಸಾಧ್ಯಾನಾಂ' ಎಂಬುದಕ್ಕೆ 'Foes who cannot succeed in their enterprises' ಎಂಬುದು ತಪ್ಪಾಗುತ್ತದೆ. ಉಳಿದದ್ದನ್ನು ಒಂದು ವಿಧದಲ್ಲಿ ಸಮರ್ಥಿಸಬಹುದು,

೩. ವುಲ್ನರ್-ಸರೂಪ್ ಭಾಷಾಂತರವನ್ನು ವಿಮರ್ಶೆಮಾಡುತ್ತಾ ಮಿ|| ಇ. ಎಚ್. ಜಾನ್‌ಸ್ಟನ್ ಎಂಬ ಪಂಡಿತರು ಈ ಭಾಗಕ್ಕೆ ಬೇರೆ ರೀತಿ ವ್ಯಾಖ್ಯಾನಮಾಡಿದ್ದಾರೆ. ಅತಿಕ್ರಾಂತ ಯೋಗಕ್ಷೇಮಾ ರಾತ್ರಿಃ = ರಾತ್ರಿ ಸುಖವಾಗಿ ಕಳೆಯಿತು. ಇಲ್ಲಿ ರಾತ್ರಿ ಎಂದರೆ ಯೌಗಂಧ

ರಾಯಣ ಮೊದಲಾದ ಸಂಚುಗಾರರು ದೊರೆಯನ್ನು ಕಾಣಲು ಅವಕಾಶವಿಲ್ಲದೆ ಅಡಗಿಕೊಂಡಿರಬೇಕಾಗಿದ್ದ ಕಾಲ, ದೊರೆಗೆ ಸದಾ ಶತ್ರುಗಳಿಂದ ಪ್ರಾಣಾಪಾಯದ ಭಯವಿದ್ದ ಕಾಲ. ಇಂಥ ಕಾಲ ಕಳೆಯಿತು. ಹಗಲು ಎಂದರೆ ಕಾರ್ಯಕಾಲ. 'ದಿವಸಃ ಪ್ರತಿಪಾಲ್ಯತೇ' ಎಂದರೆ ಕಾರ್ಯಕಾಲ ಬರುತ್ತಿದೆ; ಈಗ ನಾವು ಕಾರ್ಯಸಾಧನೆಯ ಮಾರ್ಗವನ್ನು ಕುರಿತು ವಿಚಾರಮಾಡಬೇಕು. 'ಹಂತ!' ಎಂಬುದು ವಿಷಾದಾರ್ಥಕವಲ್ಲ, ಉತ್ಸಾಹಾರ್ಥಕ. ಈ ಮಾತಿನ ತಾತ್ಪರ್ಯ ವಿಷ್ಟು.—ಗೆಳೆಯರೇ, ಏಳಿ, ಏಳಿ. ನಾವು ಅಡಗಿಕೊಂಡಿರಬೇಕಾದ ಅಪಾಯದ ಕಾಲ ಕಳೆದು ಹೋಯಿತು. ನಮ್ಮ ದೊರೆ ಇನ್ನೂ ಕ್ಷೇಮವಾಗಿದ್ದಾನೆ. ಇನ್ನು ಮುಂದಿನ ಕಾರ್ಯಭಾಗ ವನ್ನು ಯೋಚಿಸೋಣ.

ಪದ್ಯಕ್ಕೂ ಇದಕ್ಕನುಗುಣವಾಗಿಯೇ ಅರ್ಥಮಾಡಬೇಕು. ಹಗಲನ್ನು ಕಳೆದ ಮೇಲೆ ರಾತ್ರಿಯನ್ನು ನಿರೀಕ್ಷಿಸಬೇಕು = ಸುಖದ ಕಾಲ ಮುಗಿದ ಮೇಲೆ ಕಷ್ಟಕಾಲವನ್ನು ನಿರೀಕ್ಷಿಸಬೇಕು. ಆ ಕಷ್ಟ ಒದಗಿಬರದೆ ಸುಖವಾಗಿ ಬೆಳಗಾಗಲು ಹಗಲಿನ ವಿಷಯವನ್ನು ಯೋಚಿಸಬೇಕು ಎಂದರೆ ಅದು ಕಾರ್ಯಕಾಲವಾದ್ದರಿಂದ ಉದ್ದೇಶಸಾಧನೆಗೆ ತಕ್ಕ ಕಾರ್ಯಗಳನ್ನು ಆಲೋಚಿಸಿ ಕೈಕೊಳ್ಳಬೇಕು. (ಉತ್ತರಾರ್ಧದಲ್ಲಿ ಶ್ರೀಮಾನ್ ಗಣಪತಿಶಾಸ್ತ್ರಿಗಳ ಅಭಿಪ್ರಾಯ ವನ್ನೇ ಅನುಮೋದಿಸುತ್ತಾರೆ.)

ಝುಮಣ್ಣಂತನು ಯೌಗಂಧರಾಯಣನ ಅಭಿಪ್ರಾಯವನ್ನರಿಯದೆ ಅಕ್ಷರಾರ್ಥವನ್ನು ಮಾತ್ರ ಗ್ರಹಿಸಿ 'ಸೆರೆಯಲ್ಲಿರುವವರಿಗೆ ಎಲ್ಲಾ ಕಾಲವೂ ಒಂದೇ ಆದರೂ ಮುಖ್ಯವಾಗಿ ರಾತ್ರಿ ಹೊತ್ತು ಅಪಾಯ ಹೆಚ್ಚು' ಎನ್ನುತ್ತಾನೆ. ಮುಂದಿನ ಪದ್ಯದಲ್ಲಿ ಇದನ್ನೇ ಸಮರ್ಥಿಸುತ್ತಾನೆ. "ನ್ಯಾಯಾಸ್ಥಾನದಲ್ಲಿ ವ್ಯವಹಾರ ಹೂಡಿ ಸೋಲಿಸಿ ಅಡಗಿಸಲು ಸಾಧ್ಯರಲ್ಲದವರೂ, ವಿಶೇಷ ವಾಗಿ ಜನರ ಕಣ್ಣಿಗೆ ಬೀಳುವವರೂ (ಎಂದರೆ ಪ್ರಖ್ಯಾತರೂ) ಆದ ವೈರಿಗಳಿಗೆ ಹಗಲಿನ ಅಪಾಯಗಳ ಹೆದರಿಕೆಯಿಲ್ಲ. ಹಗಲು ಅಪಾಯಗಳ ಸುಳಿವನ್ನು ಕಂಡು ತಪ್ಪಿಸಿಕೊಳ್ಳುವ ಅವಕಾಶವಿದೆ. ಆದ್ದರಿಂದ ಅವರಿಗೆ ರಾತ್ರಿಯೇ ಹೆಚ್ಚು ಅಪಾಯಕರ."

*Indian Antiquary*, Vol LXII, pp. 112–113.

'ಇಲ್ಲಿ ವ್ಯವಹಾರೇಷ್ವಸಾಧ್ಯಾನಾಂ' ಎಂಬುದನ್ನು ಬಿಟ್ಟು ಉಳಿದ ಮಾತುಗಳಿಗೆ ಇವರು ಮಾಡಿರುವ ಅರ್ಥ ಬಹು ಕ್ಲಿಷ್ಟವಾಗಿದೆ. ವತ್ಸರಾಜನಿಗೆ ಸೆರೆಮನೆಯಲ್ಲಿ ಪ್ರಾಣಭಯವಿತ್ತೆಂದು ನಾಟಕದಲ್ಲಿ ಎಲ್ಲಿಯೂ ಸೂಚನೆಯಿಲ್ಲ. ಇಲ್ಲಿ ವರ್ಣಿಸಿರುವ ಕಷ್ಟವೆಲ್ಲ ಯೌಗಂಧರಾಯಣ ಮೊದಲಾದವರನ್ನು ಕುರಿತದ್ದು. ಆದ್ದರಿಂದ ವ್ಯಾಖ್ಯಾನಕಾರರ ಅಭಿಪ್ರಾಯವನ್ನು ಅಂಗೀಕರಿಸುವುದೇ ಸಮಂಜಸವಾಗಿದೆ.

15 ಪರಿತ್ಯಜಾಮ ಸಂತಪ್ತಂ ದುಃಖೇನ ಮದನೇನ ಚ |
ಸುಹೃಜ್ಜನಮುಪಾಶ್ರಿತ್ಯ ಯಃ ಕಾಲಂ ನಾವಬುಧ್ಯತೇ ||

"ದುಃಖದಿಂದಲೂ ಕಾಮದಿಂದಲೂ ನೊಂದಿರುವವನಾದ್ದರಿಂದ ಸ್ನೇಹಿತರ ಮಾತಿನಂತೆ

ಕಾಲಾನುಗುಣವಾದ ಕೆಲಸಮಾಡಲು ತಿಳಿಯದವನಾಗಿದ್ದಾನೆ'' ಎಂದು ವ್ಯಾಖ್ಯಾನಕಾರರ ಅಭಿಪ್ರಾಯ.

'ದುಃಖ ಕಾಮಗಳಿಂದ ನೊಂದಿದ್ದಾನೆ. ಸ್ನೇಹಿತರನ್ನು ನಂಬಿಕೊಂಡು ಕಾಲಕಳೆಯುತ್ತಿದ್ದಾನೆ. ಅಂಥವನನ್ನು ಬಿಟ್ಟುಹೋಗುವುದು ಸರಿಯಲ್ಲ' ಎಂದೂ ಅರ್ಥಮಾಡಬಹುದಲ್ಲವೇ ?

[16] ಯದಿ ತಾಂ ಚೈವ ತಂ ಚೈವ ತಾಂ ಚೈವಾಯತಲೋಚನಾಂ |
ನಾಹರಾಮಿ ನೃಪಂ ಚೈವ ನಾಸ್ಮಿ ಯೌಗಂಧರಾಯಣಃ ||

ತಾಂ ಚೈವ, ಘೋಷವತೀಂ ಚ ತಂ ಚೈವ ನಲಾಗಿರಿಂ ಚ. ಆಯತಲೋಚನಾಂ ತಾಂ ಚೈವ, ವಾಸವದತ್ತಾಂ ಚ. ನೃಪಂ ಚೈವ, ವತ್ಸರಾಜಂ ಚ (ಗ. ಶಾ)

[17] ಶ್ರೀಮಾನ್ ಗಣಪತಿ ಶಾಸ್ತ್ರಿಗಳ ವ್ಯಾಖ್ಯಾನದಂತೆ ವಿಶೇಷಾರ್ಥ.—ಚಂದ್ರನನ್ನು ರಾಹು ನುಂಗುತ್ತಿದಾನೆ = ವತ್ಸರಾಜನನ್ನು ಪ್ರದ್ಯೋತನು ಪರಿಭವಗೊಳಿಸುತ್ತಿದಾನೆ. ಪ್ರದ್ಯೋತ, ವತ್ಸರಾಜನನ್ನು ಬಿಡು, ಬಿಡು ಬಿಡದಿದ್ದರೆ ನಿನ್ನ ಬಾಯನ್ನೊಡೆದು = ನಿನ್ನನ್ನು ಕೊಂದು ಹಾಕಿ, ಅವನನ್ನು ಬಿಡಿಸುತ್ತೇನೆ. ತುಂಟಕುದುರೆ = ದುಷ್ಟನಾದ ಈ ಪ್ರದ್ಯೋತ ಮಹಾರಾಜನು, ಕಟ್ಟು ಹರಿದುಕೊಂಡು = ಸನ್ಮಾರ್ಗಭ್ರಷ್ಟನಾಗಿ (ಸರಳಮಾರ್ಗವನ್ನು ಬಿಟ್ಟು ಮೋಸದಿಂದ ವತ್ಸರಾಜನನ್ನು ಹಿಡಿದದ್ದರಿಂದ ಸನ್ಮಾರ್ಗಭ್ರಷ್ಟನಾದಂತಾಯಿತು), ಬರುತ್ತಿದೆ = ನನ್ನ ಮೇಲೆ ಕಾರ್ಯಭಾಗ ನಡಸುತ್ತಿದ್ದಾನೆ. ಇದು ಚೌಕದ ದಾರಿಯಲ್ಲಿ (ಏಷ ಚತುಷ್ಪಥ ವೀಥಿಕಾಯಾಂ. ಏಷೋऽಹಂ . . .) ಇದು = ನಾನು, ಇನ್ನೂ ಮದುವೆಯಿಲ್ಲದ್ದರಿಂದ ಚೌಕದ ದಾರಿಯಂತೆ ಒಬ್ಬನ ವಸ್ತುವಾಗಿರದ ವಾಸವದತ್ತೆಯ ವಿಷಯದಲ್ಲಿ, ಇದನ್ನೇ ಏರಿಕೊಂಡು = ಇವನನ್ನೇ ತಲೆಮೆಟ್ಟಿ ಕೀಳ್ಗಡಿಸಿ, ಎಂದರೆ ವಾಸವದತ್ತಾಹರಣದಿಂದ ಪ್ರದ್ಯೋತನಿಗೆ ಅವಮಾನವುಂಟುಮಾಡಿ, ಭಿಕ್ಷವನ್ನು ತಿನ್ನುತ್ತೇನೆ = ನನಗೆ ಇಷ್ಟವಾದ ಸ್ವಾಮಿಯ ಕೌಶಾಂಬೀ ಪ್ರಯಾಣವನ್ನು ಸಾಧಿಸುತ್ತೇನೆ ಉಳಿದ ಮಾತುಗಳಿಗೆ ವಿಶೇಷಾರ್ಥವಿಲ್ಲ.

[18] ತತೋ ಜಾನೇ ಯಮಲೋಕೇ ವಾ ನರಕೋ ಅಸ್ತಿ ಚ ನಾಸ್ತಿ ಚ = ಅದರಿಂದ ಯಮಲೋಕದಲ್ಲಿ ನರಕ ಇದೆಯೋ ಇಲ್ಲವೋ ಎಂಬುದನ್ನು ತಿಳಿಯುತ್ತೇನೆ. ಎಂದರೆ 'ಹೆಂಡದ ಕೆರೆಯಿದ್ದರೆ ಯಮಲೋಕದಲ್ಲಿ ನರಕವಿಲ್ಲ, ಇಲ್ಲದಿದ್ದರೆ ಉಂಟು' ಎಂದು ಭಾವಿಸುತ್ತೇನೆ ಎಂದೂ ಅರ್ಥಮಾಡಬಹುದು.

[19] ಖುರಪ್ಪಮಾಳಾ = ಕ್ಷುರಪ್ರಮಾಲಾ. ಆನೆ ಕಿತ್ತುಕೊಂಡು ಹೋಗದಂತೆ ತಡೆಯುವ ಸಣ್ಣ ಸಣ್ಣ ಅಲಗು ಸೇರಿಸಿದ ಹಗ್ಗವಿರಬಹುದು. ಬರಿ ಅಲಂಕಾರದ ಮಾಲಿಕೆಯಂತೂ ಅಲ್ಲ. ವ್ಯಾಖ್ಯಾನಕಾರರು ಅರ್ಧಚಂದ್ರಮಾಲೆ ಎಂದು ಅರ್ಥ ಮಾಡಿದ್ದಾರೆ.

[20] ರಾಜ್ಞೋ ವಾರಣನಿಗ್ರಹೇ ಪರಿಚಯಾದ್ ವೀಕ್ಷಾಶ್ರಿತಾ ವಂಚನಾ.

ಇಲ್ಲಿ ಕರ್ತೃ ಯಾರೆಂದು ಸ್ಪಷ್ಟವಾಗಿಲ್ಲ. '. . . ವಂಚನಾ ಕೃತಾ ಮಯಾ' ಎಂದಾಗಲಿ, 'ತ್ವಯಾ' ಎಂದಾಗಲಿ ಅಧ್ಯಾಹಾರಮಾಡಿಕೊಳ್ಳಬೇಕಾಗುತ್ತದೆ. 'ಮಯಾ' ಎಂದಿಟ್ಟುಕೊಂಡು

ಕನ್ನಡಿಸಿದ್ದೇನೆ. 'ನಮ್ಮ ದೊರೆಗೆ ಆನೆಗಳನ್ನು ವಶಪಡಿಸಿಕೊಳ್ಳುವ ಶಕ್ತಿಯಿರುವುದರಿಂದಲೂ ಅದಕ್ಕೆ ಅವನ ವೀಣೆಯ ಸಹಾಯ ಆವಶ್ಯಕವಾದ್ದರಿಂದಲೂ ಶತ್ರುವಿಗೆ ಸಿಕ್ಕಿದ್ದ ಆ ವೀಣೆ ಮತ್ತೆ ಅವನ ಕೈಗೆ ಬಂದು, ಆ ಮೂಲಕ ಅವನ ಬಿಡುಗಡೆಗೆ ದಾರಿಯಾಗಲೆಂದು ನಾನು ಹಾಗೆ ವಂಚನೆಮಾಡಿದೆನು' ಎಂದು ತಾತ್ಪರ್ಯ. ವ್ಯಾಖ್ಯಾನಕಾರರು ತ್ವಯಾ ಎಂದು ಅಧ್ಯಾಹಾರ ಮಾಡಿಕೊಂಡಿದ್ದಾರೆ. ಅದರಂತೆ 'ನಮ್ಮ ದೊರೆಗೆ ಆನೆಗಳನ್ನು ವಶಪಡಿಸಿಕೊಳ್ಳುವುದರಲ್ಲಿರುವ ಶಕ್ತಿಯನ್ನು ಕಂಡು ಸಹಿಸದೆ ಆ ಶಕ್ತಿಗೆ ಮುಖ್ಯಸಾಧನವಾದ ವೀಣೆಯನ್ನು ಅಪಹರಿಸುವುದಕ್ಕಾಗಿ ನೀನು ವಂಚನೆಯನ್ನು ಉಪಯೋಗಿಸಿದೆಯಲ್ಲಾ, ಅದು ನ್ಯಾಯವೇ?' ಎಂದು ಅಭಿಪ್ರಾಯವಾಗುತ್ತದೆ. ಈ ಅರ್ಥವನ್ನು ಅಂಗೀಕರಿಸುವುದಾದರೆ,

ಆನೆಗಳ ಬಗ್ಗಿಸುವ ದೊರೆಯ ಬಲ್ಮೆಗೆ ಕರುಬಿ
ವೀಣೆಗೊಡ್ಡಿದ ಮೋಸ,

ಎಂದು ಓದಿಕೊಳ್ಳಬೇಕಾಗುತ್ತದೆ.

21 'ವತ್ಸರಾಜನನ್ನು ಸೆರೆಯಿಂದ ಬಿಡಿಸಿ ಮಹಾಸೇನನು ಅವನಿಗೆ ಸತ್ಕಾರಮಾಡಿದ್ದಾನೆ. ಅದನ್ನು ಮರೆತದ್ದು ತಪ್ಪು' ಎಂದು ಭರತರೋಹಕನ ಆಕ್ಷೇಪಣೆ. 'ವತ್ಸರಾಜನನ್ನು ಬಿಡಿಸಿದ್ದು ಅವನನ್ನು ಸತ್ಕರಿಸುವುದಕ್ಕಾಗಿ ಅಲ್ಲ, ನಲಾಗಿರಿಯ ಮದವನ್ನಡಗಿಸಿ ಆ ಮೂಲಕ ಆತ್ಮರಕ್ಷಣೆ ಮಾಡಿಕೊಳ್ಳುವುದಕ್ಕಾಗಿ. ಇದರಿಂದ ಮಹಾಸೇನನು ಉಪಕಾರ ಮಾಡಿದಂತಾಗಲಿಲ್ಲ' ಎಂದು ಯೌಗಂಧರಾಯಣನ ಉತ್ತರ. 'ಬಿಡಿಸಿದ್ದು ಆತ್ಮರಕ್ಷಣೆಗೆಂದರೆ ಆನೆಯನ್ನಡಗಿಸಿದ ಮೇಲೆ ಮತ್ತೆ ಸೆರೆಹಾಕಬಹುದಾಗಿತ್ತು. ಹಾಗೆ ಮಾಡಲಿಲ್ಲವಾದ್ದರಿಂದ ಅದು ವತ್ಸರಾಜನಿಗೆ ಮಾಡಿದ ಸತ್ಕಾರವೆನ್ನುವುದೇ ನ್ಯಾಯ' ಎಂದು ಭರತರೋಹಕನ ವಾದ 'ಹಾಗೆ ಮತ್ತೆ ಸೆರೆಹಾಕಬಾರದೆಂದು ತೀರ್ಮಾನಿಸಿದ್ದು ಸತ್ಕಾರ ಬುದ್ಧಿಯಿಂದಲ್ಲ, ಉಪಕಾರಿಯನ್ನು ಸೆರೆಗೆ ದೂಡಿದರೆಂದು ಜನರು ದೂರಿಯಾರು ಎಂಬ ಭಯದಿಂದ. ಆದ್ದರಿಂದ ಉಪಕಾರಿಗೆ ದ್ರೋಹಮಾಡಿದ ದೋಷ ವತ್ಸರಾಜನಿಗೆ ತಟ್ಟುವುದಿಲ್ಲ' ಎಂದು ಯೌಗಂಧರಾಯಣನ ಸಮಾಧಾನ.

22 ಆನೆಯ ಮೇಲಿದ್ದ ಪತಾಕೆಯನ್ನು ಕೆಳಗುರುಳಿಸಬೇಕಾದರೆ ಮೊದಲು ಆ ಆನೆಯ ಮೇಲೆ ಹತ್ತಿರಲೇ ಬೇಕಷ್ಟೆ. ಅದರಂತೆ ಪ್ರದ್ಯೋತ ಮಹಾರಾಜನ ಮಗಳನ್ನು ಅವನರಮನೆಯಿಂದಲೇ ಹರಣಮಾಡಿಕೊಂಡು ಹೋಗಿರುವುದರಿಂದ ನಮ್ಮ ದೊರೆ ಮನಸ್ಸು ಮಾಡಿದ್ದರೆ ಪ್ರದ್ಯೋತನನ್ನು ಸುಲಭವಾಗಿ ಹರಣಮಾಡಿಕೊಂಡುಹೋಗುತ್ತಿದ್ದನೆಂಬುದಕ್ಕೆ ಅಡ್ಡಿಯಿಲ್ಲ. ಹಾಗೆ ಕೈಗೆ ಸಿಕ್ಕಿದ್ದರೂ ಉಪಕಾರಸ್ಮರಣೆಯಿಂದ ಅವನನ್ನು ಬಿಟ್ಟು ಹೋದನೆಂದು ತಾತ್ಪರ್ಯ.

23 ಇಯಂ ತು ಪೂಜಾ ಮಮ ದಂಡಧಾರಿಣಃ: 'ದಂಡಾರ್ಹನಾದ ನನಗೆ ಇಂಥ ಮರ್ಯಾದೆ ನಡೆಯುತ್ತಿದೆಯಲ್ಲಾ' ಎಂದೂ ಅರ್ಥವಾಗುತ್ತದೆ. ಆಗ—'ದಂಡಧಾರಿಗೆ ನನಗೆ' ಎಂದು ಬದಲಾಯಿಸಿಕೊಳ್ಳಬೇಕಾಗುತ್ತದೆ.

PRINTED AT THE WESLEY PRESS AND PUBLISHING HOUSE, MYSORE.